# ಸಮಾಜ ವಿಜ್ಞಾನ

## ಭಾಗ - 1

## ತರಗತಿ - VI

**Social Science**
**Part - 1**
**Standard - VI**

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ.ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

6

# ಸಮಾಜ ವಿಜ್ಞಾನ

*Prepared by*
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First Edition - 2025
Printed at : KBPS, Kakkanad, Kochi
© Department of General Education, Government of Kerala

ಪ್ರೀತಿಯ ಗೆಳೆಯರೆ,

ಇದು ಆರನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ಮೊದಲ ಭಾಗವಾಗಿದೆ. ಈ ಪಠ್ಯಪುಸ್ತಕವು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಮನುಷ್ಯರ ಆವಿರ್ಭಾವದಿಂದ ತೊಡಗಿ ಅವರು ಅನುಸರಿಸುತ್ತಿರುವ ಸಾಮಾಜಿಕ ಸಾಂಸ್ಕೃತಿಕ ಜೀವನ ರೀತಿಯ ಕುರಿತು ತಿಳುವಳಿಕೆ ಹೊಂದಲು ಸಾಧ್ಯವಾಗುವಂತೆ ಈ ಪುಸ್ತಕವನ್ನು ತಯಾರಿಸಲಾಗಿದೆ.

ಈ ಪಠ್ಯಪುಸ್ತಕವು ಭೂಮಿಯಲ್ಲಿ ಮನುಷ್ಯರ ಆವಿರ್ಭಾವ ಮತ್ತು ಅನಂತರದ ಸಾಂಸ್ಕೃತಿಕ ಜೀವನವನ್ನು ಪ್ರತಿಪಾದಿಸುವ ಮೂಲಕ ಆರಂಭವಾಗುತ್ತದೆ. ಮುಂದುವರಿದು ಆರಂಭಕಾಲದ ರಾಷ್ಟ್ರಗಳು ಮತ್ತು ಜನರ ಮೇಲೆ ಪ್ರಭಾವ ಬೀರಿದ ವಿವಿಧ ತತ್ವಗಳ ಕುರಿತು ಚರ್ಚಿಸಲಾಗುತ್ತದೆ. ರಾಷ್ಟ್ರ ಮತ್ತು ಸರಕಾರ ಎಂಬ ಅಧ್ಯಾಯದಲ್ಲಿ ರಾಷ್ಟ್ರ ಮತ್ತು ಅದರ ಘಟಕಗಳ ಕುರಿತು ವಿಶ್ಲೇಷಿಸಲಾಗುತ್ತದೆ. ಭೂಗೋಳದಿಂದ ಭೂಪಟದೆಡೆಗೆ ಎಂಬ ಪಾಠವು ಭೂಗೋಳಕ್ಕೆ ಸಂಬಂಧಿಸಿದ ಮೂಲ ತತ್ವಗಳನ್ನು ಪರಿಚಯಿಸಲು ಸಹಾಯಕಾರಿಯಾಗಿದೆ. ಅಲ್ಲದೆ ವಿವಿಧ ರೀತಿಯ ಭೂಪಟಗಳ ನಿರ್ಮಾಣ ರೀತಿಗಳನ್ನೂ ಈ ಪಾಠದಲ್ಲಿ ಪ್ರತಿಪಾದಿಸಲಾಗಿದೆ. ಸಂಸ್ಕೃತಿ ಮತ್ತು ಸಾಂಸ್ಕೃತಿಕ ವೈವಿಧ್ಯಗಳು ಎಂಬ ಪಾಠದಲ್ಲಿ ಸಂಸ್ಕೃತಿಯು ಹೇಗೆ ರೂಪುಗೊಳ್ಳುತ್ತದೆ ಎಂದೂ ಸಂಸ್ಕೃತಿಯ ವಿಶೇಷತೆಗಳ ಕುರಿತೂ ಚರ್ಚಿಸಲಾಗುತ್ತದೆ.

ಕೃಷಿಯಿಂದ ಕೈಗಾರಿಕೆಯ ಕಡೆಗೆ ಎಂಬ ಅಧ್ಯಾಯದಲ್ಲಿ ಕೃಷಿ ಉತ್ಪನ್ನದಿಂದ ಕೈಗಾರಿಕಾ ಉತ್ಪನ್ನಗಳ ಬದಲಾವಣೆಗಳ ಕುರಿತು ವಿಶ್ಲೇಷಿಸುತ್ತದೆ. ಭೂಖಂಡಗಳ ಮೂಲಕ ಎಂಬ ಅಧ್ಯಾಯವು ಭೂಖಂಡಗಳ ಕುರಿತು ಮತ್ತು ಅವುಗಳ ವೈವಿಧ್ಯಗಳ ಕುರಿತು ಪರಿಚಯಿಸಲು ಸಹಾಯಕವಾಗುತ್ತದೆ.

2023 ರ ಕೇರಳ ಪಠ್ಯಕ್ರಮ ಚೌಕಟ್ಟು ಮುಂದಿಡುವ ಸಮಾಜ ವಿಜ್ಞಾನದ ಸಮೀಪನದ ಆಧಾರದಲ್ಲಿ ಸಿದ್ಧಗೊಳಿಸಿದ ಕೇರಳ ಪಠ್ಯ ಪುಸ್ತಕವು ಸಾಮಾಜಿಕ ವಿದ್ಯಮಾನಗಳನ್ನು ವಿಶ್ಲೇಷಿಸಲೂ ಸಹಕಾರಿಯಾಗುವುದು ಎಂದು ನಾನು ನಂಬುತ್ತೇನೆ. ಅದಲ್ಲದೆ ಮಾನವರಾಶಿಯ ವಿವಿಧ ಕ್ಷೇತ್ರಗಳ ಬೆಳವಣಿಗೆ ಮತ್ತು ವಿಕಾಸವನ್ನು ತಿಳಿದುಕೊಳ್ಳಲು ಹಾಗೂ ಅದನ್ನು ಬಳಸಿಕೊಂಡು ಜ್ಞಾನ ನಿರ್ಮಾಣಕ್ಕೂ ಈ ಪುಸ್ತಕವು ಖಂಡಿತವಾಗಿ ಸಹಕಾರಿಯಾಗುತ್ತದೆ.

**ಡಾ. ಜಯಪ್ರಕಾಶ್ ಆರ್. ಕೆ.**

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ., ಕೇರಳ

## TEXT BOOK DEVELOPMENT TEAM

### Adviser

**Dr. K. N. Ganesh**
Chairaman, Kerala Council For
Historical Research

### Chairperson

**Dr. Abhilash Kumar K. G.**
Assistant Professor
Department of Political Science,
B.J.M. Govt. College Chavara, Kollam

### Experts

**Dr. Nandakumar B. V.**
Assistant Professor
Department of History,
Sree Narayana College, Kollam

**Dr. Antony Palakkal**
Professor & Head (Rtd.)
Department of Sociology,
Kerala University

### Members

**Dr. Anjana V. R. Chandran**
Research Officer, S.C.E.R.T. Kerala

**Anilkumar K.**
Headmaster
G.H.S. Kandala, Thiruvananthapuram

**Nisha T. S.**
U.P.S.T.
S.N.V.U.P.S., Maruthanpalli, Kollam

**Pushpangadan U.**
U.P.S.T. (Rtd.)
G.H.S.S. Anchal (West) Punaloor, Kollam

**Rajan P. P.**
Trainer,
B.R.C., Malappuram

**Beena S. Nair**
U.P.S.T. G.G.H.S.S.,
Malayankeezhu, Thiruvananthapuram

**Priya S. S.**
P. D. Teacher, U.P.S.T.,
G.G.H.S.S. Cottonhill Thiruvananthapuram

**Ramdev P. R.**
H.S.S.T. Geography
G.H.S.S. Vellathooval, Idukki

**John K.**
U.P.S.T. (Rtd.)
Govt. V & H.S.S.,
Parassala, Thiruvananthapuram

### Artists

**Deepesh T.,** Kannur
**Albin Francis,** Thiruvananthapuram
**Harikrishnan G.,** Kottarakkara

### Kannada Version

**Subject Expert** :- **Narayana D.,** Headmaster, G.H.S. Udyawar, Kasaragod
**Language Expert** :- **Ramanna D.,** Headmaster (Rtd.), Kasaragod
**Participants** :- **Ananda S.,** H.S.T., G.H.S.S. Pandi, Kasaragod
**Gopala P. K.,** U.P.S.T., G.H.S.S. Padre, Kasaragod
**Vijayakumar A.,** U.P.S.T., B.A.U.P.S., Katukukke, Kasaragod
**Nayanaprasad H. T.,** U.P.S.T. G.H.S., Kadambar, Kasaragod
**Melvin D Souza P.,** G.H.S.S. Bekur, Kasaragod

### Academic Co-ordinator

**Dr. Manju Sankar K.**
Research Officer, S.C.E.R.T., Kerala

**State Council of Educational Research and Training (SCERT)**
Vidyabhavan, Poojappura, Thiruvananthapuram 695012

# ಅನುಕ್ರಮಣಿಕೆ


| | | |
|---|---|---|
| 1 | ಆದಿ ಮಾನವರು ಮತ್ತು ನಾಗರಿಕತೆಗಳು | 7-22 |
| 2 | ಆರಂಭಕಾಲದ ರಾಷ್ಟ್ರಗಳು | 23-36 |
| 3 | ರಾಷ್ಟ್ರ ಮತ್ತು ಸರಕಾರ | 37-47 |
| 4 | ಭೂಗೋಳದಿಂದ ಭೂಪಟದೆಡೆಗೆ | 48-59 |
| 5 | ಸಂಸ್ಕೃತಿ ಮತ್ತು ಸಾಂಸ್ಕೃತಿಕ ವೈವಿಧ್ಯಗಳು | 60-74 |
| 6 | ಕೃಷಿಯಿಂದ ಕೈಗಾರಿಕೆಯ ಕಡೆಗೆ | 75-86 |
| 7 | ಭೂಖಂಡಗಳ ಮೂಲಕ | 87-102 |


ಈ ಪಠ್ಯಪುಸ್ತಕದಲ್ಲಿ ಅನುಕೂಲಕ್ಕಾಗಿ
ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ.

 ಹೆಚ್ಚುವರಿ ಓದು (ಮೌಲ್ಯ ಮಾಪನಕ್ಕೆ ಒಳಪಡಿಸಬೇಕೆಂದಿಲ್ಲ)

 ಚಟುವಟಿಕೆ

 ಚರ್ಚಿಸೋಣ

 ರೋಲ್‌ಪ್ಲೇ

 ಮುಂದುವರಿದ ಚಟುವಟಿಕೆಗಳು

 ನಿರ್ಮಿಸೋಣ

 ಐ.ಸಿ.ಟಿ

 ಬರೆಯೋಣ

 ಪ್ಲಕಾರ್ಡ್ ನಿರ್ಮಿಸೋಣ

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



# 1

# ಆದಿ ಮಾನವರು ಮತ್ತು ನಾಗರಿಕತೆಗಳು

ಇಂದು ನಾವು ಕಾಣುತ್ತಿರುವ ರೀತಿಯಲ್ಲಿ ಆದಿ ಮಾನವರು ಎಂದಿಗೂ ಇದ್ದಿರಲಿಲ್ಲ. ಅರ್ಧ ಪ್ರಾಣಿ ಮತ್ತು ಅರ್ಧ ಮನುಷ್ಯರಾಗಿದ್ದ ಅವರು ಬಹುತೇಕ ಕಪಿಯಂತೆ ಜೀವಿಸಿದ್ದಿರಬೇಕು. ನಾವು ಜರ್ಮನಿಯ ಹೈಡಲ್ ಬರ್ಗ್ ಪಟ್ಟಣದಲ್ಲಿದ್ದ ಪ್ರಾಧ್ಯಾಪಕರನ್ನು ಭೇಟಿಯಾಗಲು ಹೋದುದು ನಿನಗೆ ನೆನಪಿದೆಯೇ? ಜೀವಿಗಳ ಅವಶೇಷಗಳನ್ನು ಇರಿಸಲಾಗಿದ್ದ ವಸ್ತು ಸಂಗ್ರಹಾಲಯವನ್ನು ಅವರು ನಮಗೆ ತೋರಿಸಿ ಕೊಟ್ಟರು. ಅದರಲ್ಲಿ ವಿಶೇಷವಾಗಿ ಒಂದು ತಲೆಬುರಡೆಯನ್ನು ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಭದ್ರವಾಗಿ ಇರಿಸಲಾಗಿತ್ತಲ್ಲವೇ? ಅದು ಆದಿಮಾನವನ ತಲೆಬುರುಡೆಯಂತೆ. ಆ ಆದಿಮಾನವನನ್ನು ಈಗ 'ಹೈಡಲ್‌ಬರ್ಗ್ ಮಾನವ' ಎಂದು ಕರೆಯುವರು. ಆ ತಲೆ ಬುರುಡೆಯು ಹೈಡಲ್‌ಬರ್ಗ್ ಎಂಬ ಪಟ್ಟಣದ ಸಮೀಪ ಒಂದು ಕಡೆಯಲ್ಲಿ ಖನನ ಮಾಡುವಾಗ ಸಿಕ್ಕಿದ ಕಾರಣ ಆ ಹೆಸರು ಬಂದಿದೆ.

**ಆಕರ : 'ತಂದೆ ಮಗಳಿಗೆ ಬರೆದ ಪತ್ರಗಳು'**
**ಜವಹರ್‌ಲಾಲ್ ನೆಹರು**

'ತಂದೆ ಮಗಳಿಗೆ ಬರೆದ ಪತ್ರಗಳು' ಎಂಬ ಜವಹರಲಾಲ್ ನೆಹರು ಅವರ ಪುಸ್ತಕದ ಭಾಗವನ್ನು ನೀವು ಓದಿದಿರಲ್ಲವೇ? ಪುಸ್ತಕದ ಈ ಭಾಗದಲ್ಲಿ ಜವಾಹರ್ ಲಾಲ್ ನೆಹರು ಅವರು ಸೂಚಿಸಿರುವ ಚಾರಿತ್ರಿಕ ಅವಶೇಷವೇನು?

- 

ಇದು ಎಲ್ಲಿಂದ ಲಭಿಸಿತು ಎಂದು ಅವರು ಸೂಚಿಸುತ್ತಾರೆ?

- 

ಆದಿ ಮಾನವನ ಈ ಚಾರಿತ್ರಿಕ ಅವಶೇಷಕ್ಕೆ ಲಕ್ಷಗಟ್ಟಲೆ ವರ್ಷಗಳ ಇತಿಹಾಸವಿದೆ ಎಂದು ನಂಬಲಾಗಿದೆ.

ಇಷ್ಟೊಂದು ವರ್ಷಗಳ ಹಿಂದೆ ಜೀವಿಸಿದ್ದ ಮಾನವರ ಕುರಿತಾಗಿ ಅಥವಾ ಆ ಕಾಲದ ಕುರಿತಾಗಿ ನಿಮಗೆ ಯೋಚಿಸಲು ಸಾಧ್ಯವಿದೆಯೇ?
ಆ ಕಾಲದ ಮಾನವರ ಇತಿಹಾಸವನ್ನು ನಾವು ಪರಿಶೀಲಿಸೋಣ.

### ಪೂರ್ವಜರನ್ನು ಕಂಡುಹಿಡಿಯುವ

ತನ್ನ ಕುಟುಂಬದ ಮೂರು ತಲೆಮಾರಿನ ಸದಸ್ಯರನ್ನು ಸೇರಿಸಿ, ಸೀನು ತಯಾರಿಸಿದ ಕುಟುಂಬ ವೃಕ್ಷವನ್ನು ಗಮನಿಸಿರಿ.

ಈ ರೀತಿಯಲ್ಲಿ ನಿಮ್ಮ ಕುಟುಂಬದ ಪೂರ್ವಜರ ಎಷ್ಟು ತಲೆಮಾರುಗಳನ್ನು ನಿಮಗೆ ಕಂಡುಹಿಡಿಯಲು ಸಾಧ್ಯವಿದೆ?

ಇದೇ ರೀತಿ ಅನೇಕ ಸಾವಿರ ವರ್ಷಗಳ ತಲೆಮಾರುಗಳ ಹಿಂದೆ ಸಂಚರಿಸಲು ಸಾಧ್ಯವಾದರೆ ನಮಗೆ ಆದಿ ಮಾನವರಲ್ಲಿಗೆ ತಲುಪಬಹುದು.



ಚಿತ್ರ 1.1

### ಬಿ.ಸಿ.ಇ. - ಸಿ. ಇ.

ಕಾಲಗಣನೆ ಪ್ರಕಾರ ಇತಿಹಾಸವನ್ನು ಎರಡು ಕಾಲಘಟ್ಟಗಳಾಗಿ ವಿಂಗಡಿಸಲಾಗಿದೆ. ಸಾಮಾನ್ಯ ವರ್ಷದ ಮೊದಲು (Before Common Era - BCE) ಮತ್ತು ಸಾಮಾನ್ಯ ವರ್ಷ (Common Era - CE). ಯೇಸು ಕ್ರಿಸ್ತನ ಜನನವನ್ನು ಆಧರಿಸಿ ಹಿಂದಿನ ಕಾಲದಲ್ಲಿ ಕ್ರಿ. ಪೂ (B.C), ಕ್ರಿ. ಶ. (AD)ನ್ನು ಹೀಗೆ ವಿಂಗಡಿಸಲಾಗಿತ್ತು. ಕ್ರಿಸ್ತ ಜನಿಸುವುದರ ಮೊದಲ ಕಾಲ ಕ್ರಿ. ಪೂ.(Before Christ) ಎಂದೂ ಕ್ರಿಸ್ತನ ಜನನದ ನಂತರದ ಕಾಲವನ್ನು ಕ್ರಿ. ಶ(Anno Domini) ಎಂದು ಹೇಳಲಾಗುತ್ತಿತ್ತು. ಇಂದು ಬಿ.ಸಿ.ಇ. ಮತ್ತು ಸಿ.ಇ. ಎಂದು ಬಳಸಲಾಗುತ್ತಿದೆ.




**ಒಂದು ಶತಮಾನ ಅಂದರೆ ನೂರು ವರ್ಷವಾಗಿದೆ. ಒಂದು ದಶಲಕ್ಷ ವರ್ಷ ಅಂದರೆ 10 ಲಕ್ಷ ವರ್ಷವಾಗಿದೆ.**

## ಮಾನವರ ಆವಿರ್ಭಾವ ಮತ್ತು ವಿಕಾಸ

ಮಾನವನ ಪಳೆಯುಳಿಕೆಗಳು ಆದಿಮಾನವರ ಇತಿಹಾಸದ ಕುರಿತು ತಿಳಿದುಕೊಳ್ಳಲು ನಮಗೆ ಸಹಾಯ ಮಾಡುವ ಪ್ರಮುಖ ಮೂಲಗಳಾಗಿವೆ. ಅಂತಹ ಪಳೆಯುಳಿಕೆಗಳ ಹಳೆತನವನ್ನು ವೈಜ್ಞಾನಿಕವಾಗಿ ನಿರ್ಣಯಿಸುವ ಮೂಲಕ ಮಾನವನ ಆವಿರ್ಭಾವ ಮತ್ತು ವಿಕಾಸದ ಚರಿತ್ರೆಯನ್ನು ರಚಿಸಲಾಗಿದೆ.

**ಪಳೆಯುಳಿಕೆಗಳು**

ಪ್ರಾಚೀನ ಕಾಲದ ಸಸ್ಯಗಳು, ಪ್ರಾಣಿಗಳು, ಮಾನವರು ಮೊದಲಾದವುಗಳ ಅವಶಿಷ್ಟಗಳನ್ನು ಪಳೆಯುಳಿಕೆ ಎಂದು ಕರೆಯುತ್ತಾರೆ. ಸಾಧಾರಣವಾಗಿ ಶಿಲೆಗಳ ಎಡೆಯಲ್ಲಿ ಅಡಗಿರುವ ಇವುಗಳು ದಶಲಕ್ಷ ವರ್ಷಗಳಿಂದ ಸಂರಕ್ಷಿಸಲ್ಪಟ್ಟಿರುತ್ತವೆ.

## ಮಾನವರ ವಿಕಾಸ

ಚಾಲ್ಸ್ ಡಾರ್ವಿನ್ ಅವರು ಮಾನವ ವಿಕಾಸದ ಬಗ್ಗೆ ವೈಜ್ಞಾನಿಕ ದೃಷ್ಟಿಕೋನವನ್ನು ಮುಂದಿಟ್ಟರು. ಮಾನವನ ಆವಿರ್ಭಾವವು ದೀರ್ಘಕಾಲದಿಂದ ಉಂಟಾಗಿರುವ ಜೈವಿಕ ಬದಲಾವಣೆಗಳ ಮೂಲಕವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಈ ಪ್ರಕ್ರಿಯೆಗೆ ಅವರು 'ವಿಕಾಸ' ಎಂದು ಕರೆದರು. 1859 ರಲ್ಲಿ ಪ್ರಕಟವಾದ 'ಆನ್ ದಿ ಒರಿಜಿನ್ ಆಫ್ ಸ್ಪೀಶೀಸ್' ಎಂಬ ಗ್ರಂಥದಲ್ಲಿ ಮಾನವ ವಿಕಾಸದ ಕುರಿತಾದ ಸಿದ್ಧಾಂತವನ್ನು ಅವರು ಮುಂದಿಟ್ಟರು.

**ಚಾಲ್ಸ್ ಡಾರ್ವಿನ್**


ಚಾಲ್ಸ್ ಡಾರ್ವಿನ್

ಚಾರ್ಲ್ಸ್ ಡಾರ್ವಿನ್ 1809 ಫೆಬ್ರವರಿ 12ನೇ ತಾರೀಕಿನಂದು ಇಂಗ್ಲೆಂಡಿನಲ್ಲಿ ಜನಿಸಿದರು. ಅವರು ಭೂಮಿಯಲ್ಲಿ ಜೀವದ ಆವಿರ್ಭಾವ ಮತ್ತು ಜೀವಜಾಲ ವೈವಿಧ್ಯಗಳಿಗೆ ಎಡೆಮಾಡಿಕೊಟ್ಟ ಪ್ರಕ್ರಿಯೆಗಳನ್ನು ತಿಳಿಯಲು ಸಹಾಯ ಮಾಡಿದ ಪ್ರಕೃತಿ ವಿಜ್ಞಾನಿಯಾಗಿದ್ದಾರೆ. ಎಲ್ಲಾ ಜೀವ ಜಾಲಗಳೂ ವಿಕಾಸ ಹೊಂದಿ ಉಂಟಾಗಿವೆಯೆಂದೂ ಪ್ರತಿಯೊಂದು ಜೀವಜಾಲಗಳೂ ಇಂದಿನಂತೆ ರೂಪುಗೊಳ್ಳಲು ಅನೇಕ ಲಕ್ಷ ವರ್ಷಗಳು ತಗಲಿತು ಎಂದೂ ಚಾಲ್ಸ್ ಡಾರ್ವಿನ್ ತನ್ನ ವಿಕಾಸ ಸಿದ್ಧಾಂತದ ಮೂಲಕ ವಿವರಿಸಿದರು.

## ಮಾನವರ ಪೂರ್ವಜರು

ಆದಿ ಮಾನವರು ಲಕ್ಷಾಂತರ ವರ್ಷಗಳ ಹಿಂದೆ ರೂಪುಗೊಂಡರು. ಮಾನವನ ವಿಕಾಸವು ಸಸ್ತನಿಗಳ ಒಂದು ವಿಭಾಗವಾದ ಪ್ರೈಮೇಟುಗಳಿಂದ ಆರಂಭವಾಯಿತು. ವಿಕಾಸದ ವಿವಿಧ ಹಂತಗಳನ್ನು ಹೊಂದಿರುವ ಫ್ಲೋ ಚಾರ್ಟ್ ನಿರೀಕ್ಷಿಸಿರಿ.




ಹೋಮೋ ಹಾಬಿಲಿಸ್, ಹೋಮೋ ಇರೆಕ್ಟಸ್, ಹೋಮೋ ಸೆಪಿಯನ್ಸ್ ಇತ್ಯಾದಿಗಳು ಹೋಮೋಗಳಿಂದ ಆವಿರ್ಭವಿಸಿದ ಉಪ ವಿಭಾಗಗಳೆಂದು ಫ್ಲೋ ಚಾರ್ಟಿನಿಂದ ನಿಮಗೆ ತಿಳಿಯಿತಲ್ಲವೇ. ನಾವೆಲ್ಲರೂ ಸೇರಿರುವ ಮಾನವ ವಿಭಾಗವು ಹೋಮೋ ಸೆಪಿಯನ್ಸ್ ಎಂಬ ವಿಭಾಗದಲ್ಲಿ ಸೇರಿದವರಾಗಿದ್ದೇವೆ.

**ಮಾನವ ವಿಕಾಸದ ವಿವಿಧ ಹಂತಗಳು ಮತ್ತು ಅವುಗಳ ವಿಶೇಷತೆಗಳನ್ನು ಒಳಗೊಂಡ ಟಿಪ್ಪಣಿ ತಯಾರಿಸಿರಿ.**

## ಮಾನವ ವಿಕಾಸದ ವಿವಿಧ ಹಂತಗಳು

ಆದಿ ಮಾನವರು ಕಾಡಿನಲ್ಲಿ ವಾಸಿಸುತ್ತಿದ್ದರು. ಕಾಡಿನಲ್ಲಿದ್ದ ಕಾಯಿ, ಹಣ್ಣುಗಳನ್ನು ಸಂಗ್ರಹಿಸಿ, ಪ್ರಾಣಿಗಳನ್ನು ಬೇಟೆಯಾಡಿ, ಅವುಗಳ ಮಾಂಸವನ್ನು ತಿಂದು ಜೀವಿಸುತ್ತಿದ್ದರು. ಸುತ್ತಮುತ್ತಲಿನಿಂದ ಲಭಿಸಿದ ದೊರಗಾದ ಕಲ್ಲುಗಳನ್ನು ಆಯುಧವಾಗಿ ಬಳಸುತ್ತಿದ್ದರು. ಶಿಲೆಗಳನ್ನು ಆಯುಧವಾಗಿ ಉಪಯೋಗಿಸುತ್ತಿದ್ದುದರಿಂದ ಈ ಕಾಲವನ್ನು ಶಿಲಾಯುಗ ಎಂದು ಕರೆಯುತ್ತಾರೆ. ಶಿಲೆಗಳಿಂದ ನಿರ್ಮಿಸಿದ ಆಯುಧಗಳಲ್ಲಿಯೂ, ಉಪಕರಣಗಳಲ್ಲಿಯೂ ಕಾಲಕ್ರಮೇಣ ಉಂಟಾದ ಬೆಳವಣಿಗೆಯ ಆಧಾರದಲ್ಲಿ ಶಿಲಾಯುಗವನ್ನು ಮೂರು ಹಂತಗಳಾಗಿ ವಿಂಗಡಿಸಲಾಗಿದೆ.



ವಿವಿಧ ಶಿಲಾಯುಗ ಹಂತಗಳ ವಿಶೇಷತೆಗಳನ್ನು ಗಮನಿಸಿ.

**ಪ್ರಾಚೀನ ಶಿಲಾಯುಗ**



ಚಿತ್ರ 1.2

- ಶಿಲಾಯುಗದ ಮೊದಲ ಹಂತ.
- ದೊರಗು ಕಲ್ಲುಗಳನ್ನು ಉಪಕರಣಗಳನ್ನಾಗಿ ಮಾಡಿದರು.
- ಸಂಗ್ರಹಣೆ ಮತ್ತು ಬೇಟೆಯಾಡುವುದನ್ನು ಜೀವನ ಮಾರ್ಗವಾಗಿ ಮಾಡಿದರು.

**ಮಧ್ಯ ಶಿಲಾಯುಗ**



ಚಿತ್ರ 1.3

- ಚೂಪಾದ ಶಿಲಾಯುಧಗಳನ್ನು ಉಪಯೋಗಿಸಿದರು.
- ಆಹಾರ ಯೋಗ್ಯವಾದ ಹುಲ್ಲು ಜಾತಿಗಳನ್ನು ಮತ್ತು ಮೀನನ್ನು ಆಹಾರವಾಗಿ ಉಪಯೋಗಿಸಿದರು.
- ಪ್ರಾಣಿಗಳ ಚರ್ಮ, ಮರದ ಸಿಪ್ಪೆ ಮತ್ತು ಎಲೆಗಳನ್ನು ವಸ್ತ್ರವಾಗಿ ಉಪಯೋಗಿಸಿದರು.
- ಶಿಲೆಗಳ ಆಯುಧಗಳೊಂದಿಗೆ ಪ್ರಾಣಿಗಳ ಎಲುಬುಗಳನ್ನು, ಕೊಂಬುಗಳನ್ನು ಆಯುಧಗಳಾಗಿ ಬಳಸಿದರು.

**ನವೀನ ಶಿಲಾಯುಗ**



ಚಿತ್ರ 1.4

- ಹೆಚ್ಚು ಆವಿಷ್ಕರಿಸಿದ ಮತ್ತು ನಯಗೊಳಿಸಿದ ಕಲ್ಲಿನ ಉಪಕರಣಗಳನ್ನು ಬಳಸಿದರು.
- ಕೃಷಿ ಆರಂಭಿಸಿದರು.
- ಚಕ್ರಗಳನ್ನು ಕಂಡುಹಿಡಿದರು ಮತ್ತು ಮಣ್ಣಿನ ಪಾತ್ರೆ ನಿರ್ಮಾಣ ಆರಂಭಿಸಿದರು.

**ಭೀಂಬೇಟಕ್**

ಭೀಂಬೇಟಕ್ ಎಂಬುದು ಭಾರತದ ಮಧ್ಯಪ್ರದೇಶದಲ್ಲಿ ಆದಿಮಾನವರು ವಾಸಿಸುತ್ತಿದ್ದ ಪ್ರಧಾನ ಗುಹಾ ಕೇಂದ್ರವಾಗಿದೆ. ಪ್ರಾಚೀನ ಮಾನವರ ವಿವಿಧ ಜೀವನ ರೀತಿಗಳ ಕುರಿತು ಈ ಗುಹೆಯಲ್ಲಿರುವ ಚಿತ್ರಗಳು ನಮಗೆ ಮಾಹಿತಿಯನ್ನು ನೀಡುತ್ತವೆ. ಈ ಗುಹಾ ಚಿತ್ರಗಳು ಅವರ ಆಶಯ ವಿನಿಮಯದ ಕುರುಹುಗಳು ಕೂಡಾ ಆಗಿವೆ.



ಭೀಂಬೇಟಕ್ ಗುಹೆ



ಗುಹಾ ಚಿತ್ರಗಳು

ಪ್ರಾಚೀನ ಶಿಲಾಯುಗ, ಮಧ್ಯ ಶಿಲಾಯುಗ, ನವೀನ ಶಿಲಾಯುಗ ಮೊದಲಾದವುಗಳ ವಿಶೇಷತೆಗಳನ್ನು ಚೀಟಿಗಳಲ್ಲಿ ಬರೆದು ಪೆಟ್ಟಿಗೆಯಲ್ಲಿ ಹಾಕಿರಿ. ವಿವಿಧ ಶಿಲಾಯುಗಗಳ ಹೆಸರು ಬರೆದ ಚಾರ್ಟ್‌ಗಳನ್ನು ತರಗತಿ ಕೋಣೆಯಲ್ಲಿ ತೂಗುಹಾಕಿ. ಮಕ್ಕಳು ಚೀಟಿಗಳನ್ನು ತೆಗೆದು ಸೂಕ್ತವಾದ ಚಾರ್ಟಿನಲ್ಲಿ ಅಂಟಿಸಲಿ.

## ಕೃಷಿಯ ಆರಂಭ ಮತ್ತು ಸ್ಥಿರವಾಸ

ನವೀನ ಶಿಲಾಯುಗದಲ್ಲಿ ಕೃಷಿಯು ಆರಂಭವಾಯಿತು ಎಂದು ನೀವು ತಿಳಿದಿರಲ್ಲವೇ. ಕೃಷಿಯನ್ನು ಆರಂಭಿಸಿದ ಮಾನವರಿಗೆ ಕೃಷಿ ಸ್ಥಳಗಳ ಸಮೀಪ ಶಾಶ್ವತ ಸ್ಥಿರವಾಸವು ಅನಿವಾರ್ಯವಾಯಿತು. ಕೃಷಿಯ ಕೆಲಸಗಳನ್ನು ಮಾಡಲು ಮತ್ತು ಕೃಷಿ ಸ್ಥಳಗಳನ್ನು ಪ್ರಾಣಿಗಳಿಂದ ಸಂರಕ್ಷಿಸಲು ಹಾಗೂ ಪ್ರಾಣಿಗಳ ಪರಿಪಾಲನೆಗೆ ಅವರು ಕೃಷಿ ಸ್ಥಳಗಳಲ್ಲಿಯೇ ಶಾಶ್ವತ ವಾಸವನ್ನು ಆರಂಭಿಸಿದರು.



ಚಿತ್ರ 1.5

ಹೀಗೆ ಶಾಶ್ವತ ವಾಸ ಪ್ರಾರಂಭಿಸಿದ ಮಾನವರಲ್ಲಿ ಉಂಟಾದ ಬದಲಾವಣೆಗಳೇನು?

**ಶಾಶ್ವತ ವಾಸ ಮತ್ತು ಬದಲಾವಣೆಗಳು**

- ವಾಸಸ್ಥಳಗಳನ್ನು ನಿರ್ಮಿಸಲು ಪ್ರಾರಂಭಿಸಿದರು.
- ಜನರು ಪರಸ್ಪರ ಹೊಂದಿಕೊಳ್ಳಲು ಮತ್ತು ಸಂಘಟಿತ ಸಾಮಾಜಿಕ ಜೀವನವನ್ನು ಆರಂಭ ಮಾಡಿದರು.
- ಶಾಶ್ವತ ವಾಸ ಕೇಂದ್ರಗಳು ಕ್ರಮೇಣ ಗ್ರಾಮಗಳಾಗಿಯೂ, ಮುಂದೆ ನಗರಗಳಾಗಿಯೂ ಅಭಿವೃದ್ಧಿಗೊಂಡವು.

## ಶಿಲೆಯಿಂದ ಲೋಹದಡೆಗೆ



ಚಿತ್ರ 1.6

ಮೇಲೆ ಕೊಟ್ಟ ಚಿತ್ರಗಳನ್ನು ಗಮನಿಸಿರಿ. ಇವುಗಳು ಯಾವ ವಸ್ತುಗಳಿಂದ ನಿರ್ಮಿಸಿದವುಗಳಾಗಿವೆ?

- 
- 

ಮಾನವರು ಮೊತ್ತಮೊದಲು ಉಪಯೋಗಿಸಿದ ಲೋಹ ಯಾವುದೆಂದು ನಿಮಗೆ ತಿಳಿದಿದೆಯೇ?

ತಾಮ್ರವು ಮಾನವರು ಕಂಡುಹಿಡಿದ ಮೊದಲ ಲೋಹವಾಗಿದೆ. ಆಯುಧಗಳು ಮತ್ತು ಉಪಕರಣಗಳನ್ನು ತಯಾರಿಸಲು ಲೋಹಗಳನ್ನು ಉಪಯೋಗಿಸುತ್ತಿದ್ದ ಕಾಲವನ್ನು ಲೋಹಯುಗ ಎಂದು ಕರೆಯುತ್ತಾರೆ. ಮಣ್ಣನ್ನು ಉಳುಮೆ ಮಾಡಲು ಮತ್ತು ಮರಗಳನ್ನು ಕಡಿಯಲು ತಾಮ್ರವು ಕಾಠಿಣ್ಯ ಹೊಂದಿಲ್ಲವಾದುದರಿಂದ ತಾಮ್ರ ಮತ್ತು ಸೀಸ ಒಟ್ಟು ಸೇರಿಸಿ ಕಾಠಿಣ್ಯವಿರುವ 'ಕಂಚು' ಎಂಬ ಮಿಶ್ರ ಲೋಹವನ್ನು ನಿರ್ಮಿಸಿದರು.

ಕಂಚಿನಿಂದ ಆಯುಧಗಳು ಮತ್ತು ಉಪಕರಣಗಳನ್ನು ಉಪಯೋಗಿಸಿದ ಕಾಲಘಟ್ಟವನ್ನು 'ಕಂಚಿನ ಯುಗ' ಎಂದು ಕರೆಯುತ್ತಾರೆ.

ಕಂಚಿನಿಂದ ತಯಾರಿಸಿದ ಆಯುಧಗಳು ಮತ್ತು ಉಪಕರಣಗಳನ್ನು ಉಪಯೋಗಿಸಲು ಪ್ರಾರಂಭಿಸಿದ ಅನಂತರ ಮಾನವರ ಜೀವನದಲ್ಲಿ ಗಮನಾರ್ಹ ಬದಲಾವಣೆಗಳು ಉಂಟಾದವು. ಅವುಗಳು ಯಾವುವು ಎಂದು ನೋಡೋಣ.




**ಶಿಲಾಯುಗ ಮತ್ತು ಕಂಚಿನ ಯುಗದ ಮಾನವರ ಜೀವನದ ವಿಶೇಷತೆಗಳನ್ನು ಹೋಲಿಕೆ ಮಾಡಿ ಟಿಪ್ಪಣಿ ತಯಾರಿಸಿರಿ.**

## ಕಂಚಿನ ಯುಗದ ನಾಗರಿಕತೆಗಳು

ಕಂಚಿನ ಯುಗದಲ್ಲಿ ಮಾನವರ ಜೀವನದಲ್ಲಿ ಉಂಟಾದ ಬದಲಾವಣೆಗಳನ್ನು ನೀವು ಗಮನಿಸಿದಿರಲ್ಲವೇ? ಇದರ ಪರಿಣಾಮವಾಗಿ ನಗರಗಳು ಕೇಂದ್ರವಾಗಿ ಕಂಚಿನ ಯುಗದಲ್ಲಿ ನಾಗರಿಕತೆಗಳು ರೂಪುಗೊಂಡವು. ಈ ರೀತಿಯಲ್ಲಿ ರೂಪುಗೊಂಡ ಕಂಚಿನ ಯುಗ ನಾಗರಿಕತೆಗಳನ್ನು (Civilizations) ನಾವು ಪರಿಚಯಿಸಿಕೊಳ್ಳೋಣ.



ಕಂಚಿನ ಯುಗದಲ್ಲಿ ನೆಲೆ ನಿಂತಿದ್ದ ನಾಲ್ಕು ಪ್ರಧಾನ ನಾಗರಿಕತೆಗಳನ್ನು ಕೆಳಗೆ ಕೊಟ್ಟ ಭೂಪಟದಲ್ಲಿ ಗುರುತಿಸಿರಿ.




ಭೂಪಟ 1.1

**ಭೂಪಟ 1.1 ನಿರೀಕ್ಷಿಸಿ ಕಂಚಿನ ಯುಗದ ನಾಗರಿಕತೆಯು ವ್ಯಾಪಿಸಿದ್ದ ಪ್ರಧಾನ ನದಿ ತೀರಗಳನ್ನು ಗುರುತಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.**

| ನಾಗರಿಕತೆ | ನದಿಗಳು |
|---|---|
| ಮೆಸೊಪೊಟೇಮಿಯ | |
| ಈಜಿಪ್ಟ್ | |
| ಹರಪ್ಪ | |
| ಚೀನಾ | |

'ಕಂಚಿನ ಯುಗದ ನಾಗರಿಕತೆ'ಯು ನದಿತೀರದಲ್ಲಿ ರೂಪುಗೊಳ್ಳಲು ಕಾರಣವೇನು?

ನದಿ ತೀರದಲ್ಲಿ ಯಾಕೆ?

- ಫಲವತ್ತಾದ ಮಣ್ಣು
- ನೀರಿನ ಲಭ್ಯತೆ
- ಅನುಕೂಲವಾದ ಹವಾಗುಣ

## ಮೆಸೊಪೊಟೇಮಿಯ ನಾಗರಿಕತೆ

ಭೂಪಟ 1.1 ನಿರೀಕ್ಷಿಸಿ ಮೆಸೊಪೊಟೇಮಿಯದ ಸ್ಥಾನವನ್ನು ಕಂಡು ಹಿಡಿಯಿರಿ.

ಯಾವ ಯಾವ ನದಿಗಳ ದಡದಲ್ಲಿ ಮೆಸೊಪೊಟೇಮಿಯ ಕಂಡುಬರುತ್ತದೆ?

- 
- 

ಮೆಸೊಪೊಟೇಮಿಯ ಎಂಬ ಶಬ್ದದ ಅರ್ಥವು ನದಿಗಳೆಡೆಯ ಪ್ರದೇಶ ಎಂದಾಗಿದೆ. ಯುಫ್ರೆಟೀಸ್, ಟೈಗ್ರಿಸ್ ಎಂಬ ನದಿಗಳೆಡೆಯಲ್ಲಿ ಈ ಪ್ರದೇಶವು ಇದೆ. ಈ ಪ್ರದೇಶವು ಪ್ರಸ್ತುತ ಇರಾಕಿನ ಭಾಗವಾಗಿದೆ. ಸುಮೇರಿಯನ್, ಬ್ಯಾಬಿಲೋನಿಯನ್, ಅಸೀರಿಯನ್, ಆಕಾಡಿಯನ್ ಮೊದಲಾದ ನಾಲ್ಕು ವಿವಿಧ ನಾಗರಿಕತೆಗಳು ಒಟ್ಟುಸೇರಿ ಮೆಸೊಪೊಟೇಮಿಯ ನಾಗರಿಕತೆಯು ರೂಪುಗೊಂಡಿದೆ.

## ನಗರ ಜೀವನ ಮತ್ತು ಬರಹ ಕಲೆ

ಸುಮೇರಿಯನ್ನರು ಮೆಸೊಪೊಟೇಮಿಯದಲ್ಲಿ ನಗರ ಜೀವನವನ್ನು ಪ್ರಾರಂಭಿಸಲು ಕೊಡುಗೆ ನೀಡಿದ ಮೊದಲ ಜನತೆಯಾಗಿದ್ದಾರೆ. ಉರುಕ್, ಲಗಾಷ್ ಇತ್ಯಾದಿಗಳು ಮೆಸೊಪೊಟೇಮಿಯ ನಾಗರಿಕತೆಯ ಪ್ರಧಾನ ನಗರಗಳಾಗಿವೆ.

ಮೆಸೊಪೊಟೇಮಿಯನ್ನರ ಬರವಣಿಗೆಯನ್ನು ಕ್ಯೂನಿಫಾಂ ಲಿಪಿ ಎಂದು ಕರೆಯುತ್ತಾರೆ.



ಚಿತ್ರ 1.7
**ಕ್ಯೂನಿಫಾಂ ಲಿಪಿ**

- ಈ ಲಿಪಿಯನ್ನು ಸುಮೇರಿಯದವರು ಅಭಿವೃದ್ಧಿಪಡಿಸಿದರು.
- ಕೀಲುಗಳ ಆಕಾರದಲ್ಲಿರುವ(Wedge Shaped) ಚಿತ್ರ ಲಿಪಿಯಾಗಿದೆ.
- ಅವರು ಮಣ್ಣಿನ ಫಲಕಗಳಲ್ಲಿ ಬರೆಯುತ್ತಿದ್ದರು.
- ಚೂಪಾದ ಮೊನೆಯಿರುವ ಓಟೆಯ ಕಡ್ಡಿಗಳನ್ನು ಅವೆ ಮಣ್ಣಿನ ಫಲಕಗಳ ಮೇಲೆ ಬರೆಯಲು ಉಪಯೋಗಿಸುತ್ತಿದ್ದರು.

## ಮೆಸೊಪೊಟೇಮಿಯನ್ನರ ಕೊಡುಗೆಗಳು

**ವಿಜ್ಞಾನ ಮತ್ತು ಗಣಿತ**

- ಚಾಂದ್ರ ಪಂಚಾಂಗ
- ಸೂರ್ಯಗ್ರಹಣ ಮತ್ತು ಚಂದ್ರ ಗ್ರಹಣವನ್ನು ಲೆಕ್ಕ ಹಾಕಿದರು.
- ಭಾಗಾಕಾರ ಮತ್ತು ಗುಣಾಕಾರ

**ಕಾನೂನು**

- ಸುಮೇರಿಯನ್ ಆಡಳಿತಾಧಿಕಾರಿಯಾಗಿದ್ದ ಡುಂಗಿಯ ಕಾಲದಲ್ಲಿ ಮೊತ್ತಮೊದಲು ಕಾನೂನುಗಳನ್ನು ಕ್ರೋಡೀಕರಿಸಲಾಯಿತು.
- ಈ ಕಾನೂನುಗಳ ಪರಿಷ್ಕೃತ ರೂಪವು ಹಮ್ಮುರಾಬಿಯ ಕಾನೂನು ಸಂಹಿತೆಯಾಗಿದೆ.

### ಹಮ್ಮುರಾಬಿಯ ಕಾನೂನು ಸಂಹಿತೆ

ಇದು ಬ್ಯಾಬಿಲೋನಿಯನ್ ಆಡಳಿತಾಧಿಕಾರಿಯಾಗಿದ್ದ ಹಮ್ಮುರಾಬಿಯ (ಬಿ. ಸಿ. ಇ 1792-1750) ಕಾಲದಲ್ಲಿ ನೆಲೆನಿಂತಿದ್ದ ಕಾನೂನು ಸಂಹಿತೆಯಾಗಿದೆ. ಇದು ವಿಶ್ವದಲ್ಲಿ ಬರೆದಿಡಲ್ಪಟ್ಟ ಅತ್ಯಂತ ಪುರಾತನ ಕಾನೂನು ಸಂಹಿತೆ ಎಂದು ಹೇಳಲಾಗುತ್ತಿದೆ. ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು ಎಂಬ ಶಿಕ್ಷಾ ವಿಧಾನ ಈ ಕಾನೂನು ಸಂಹಿತೆಯಲ್ಲಿದೆ.



### ಸಿಗುರಾತ್‌ಗಳು

ಮೆಸೊಪೊಟೇಮಿಯನ್ ಜನರ ಆರಾಧನಾಲಯಗಳನ್ನು ಸಿಗುರಾತ್‌ಗಳು ಎಂದು ಕರೆಯುತ್ತಾರೆ. ಪ್ರಧಾನವಾಗಿ ನಗರಗಳಲ್ಲಿ ನಿರ್ಮಿಸಲ್ಪಟ್ಟ ಸಿಗುರಾತ್‌ಗಳನ್ನು ಇಟ್ಟಿಗೆಗಳನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಪ್ರಧಾನವಾಗಿ ನಗರಗಳಲ್ಲಿ ಈ ಆರಾಧನಾಲಯಗಳನ್ನು ನಿರ್ಮಿಸಲಾಗಿದೆ. ಉರ್ ನಗರದ ಸಿಗುರಾತ್‌ಗಳನ್ನು ಇಂದಿಗೂ ಸಂರಕ್ಷಿಸಲಾಗುತ್ತಿದೆ.



ಸಿಗುರಾತ್‌ಗಳು

**ಮೆಸೊಪೊಟೇಮಿಯನ್ನರ ಸಾಂಸ್ಕೃತಿಕ ಕೊಡುಗೆಗಳ ಕುರಿತು ಒಂದು ಟಿಪ್ಪಣಿ ತಯಾರಿಸಿರಿ.**

## ಈಜಿಪ್ಟ್ ನಾಗರಿಕತೆ

ಭೂಪಟ 1.1 ನಿರೀಕ್ಷಿಸಿ ಈಜಿಪ್ಟ್ ನಾಗರಿಕತೆಯು ನೆಲೆ ನಿಂತಿದ್ದ ಪ್ರದೇಶವನ್ನು ಗುರುತಿಸಿರಿ.

ಈಜಿಪ್ಟ್ ನಾಗರಿಕತೆಯು ನೈಲ್ ನದಿಯ ತೀರದಲ್ಲಿ ನೆಲೆ ನಿಂತಿತ್ತು ಎಂದು ನಿಮಗೆ ತಿಳಿಯಿತಲ್ಲವೇ? 'ಈಜಿಪ್ಟನ್ನು ನೈಲ್ ನದಿಯ ಕೊಡುಗೆ' ಎಂದು ಕರೆಯಲಾಗುತ್ತಿತ್ತು. ಕೈರೊ ಈಜಿಪ್ಟ್ ನಾಗರಿಕತೆಯ ಪ್ರಧಾನ ನಗರವಾಗಿತ್ತು.

ಈಜಿಪ್ಟ್‌ನ ರಾಜರನ್ನು 'ಫರವೊ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಪಿರಮಿಡ್ಡ್‌ಗಳು ಈಜಿಪ್ಟ್ ನಾಗರಿಕತೆಯ ಪ್ರಧಾನ ವಿಶೇಷತೆಗಳಾಗಿತ್ತು.

ಜನರ ಪ್ರಧಾನ ಜೀವನ ಮಾರ್ಗವು ಕೃಷಿಯಾಗಿತ್ತು. ಗೋಧಿ, ಬಾರ್ಲಿ, ಸಜ್ಜೆ, ಹಣ್ಣು ಹಂಪಲುಗಳು, ಸೆಣಬು, ಹತ್ತಿ, ಇತ್ಯಾದಿಗಳನ್ನು ನೈಲ್ ನದಿಯ ತೀರದಲ್ಲಿ ಧಾರಾಳವಾಗಿ ಬೆಳೆಸುತ್ತಿದ್ದರು. ಈ ಕೃಷಿ ಸಮೃದ್ಧಿಯು ನೈಲ್ ನದಿಯ ತೀರದಲ್ಲಿ ನಾಗರಿಕತೆಯು ಬೆಳೆದು ಬರಲು ಕಾರಣವಾಯಿತು. ಆದುದರಿಂದ ಈಜಿಪ್ಟನ್ನು 'ನೈಲ್ ನದಿಯ' ಕೊಡುಗೆ ಎಂದು ಕರೆದರು.


ಚಿತ್ರ 1.8
**ಈಜಿಪ್ಟ್ ಫರವೋ**



**ಪಿರಮಿಡ್‌ಗಳು**

ಫರವೋಗಳ ಶವಕುಟೀರಗಳಾದ ಪಿರಮಿಡ್‌ಗಳು ಈಜಿಪ್ಟ್ ನಾಗರಿಕತೆಯ ವಿಶೇಷತೆಯಾಗಿತ್ತು. ಗಿಸಾದಲ್ಲಿರುವ ಪ್ರಮುಖ ಪಿರಮಿಡ್ ಅತಿ ದೊಡ್ಡದೂ ಪ್ರಸಿದ್ಧವೂ ಆಗಿದೆ.

**ಮಮ್ಮಿಗಳು**

ಮೃತ ಶರೀರಗಳನ್ನು ಸುಗಂಧ ದ್ರವ್ಯ ಲೇಪಿಸಿ ಶಾಶ್ವತವಾಗಿ ಸಂರಕ್ಷಿಸುವ ಪದ್ಧತಿ ಈಜಿಪ್ಟಿನ ಜನರಲ್ಲಿತ್ತು. ಈ ರೀತಿಯಲ್ಲಿ ಸಂರಕ್ಷಿಸುತ್ತಿದ್ದ ಮೃತ ಶರೀರಗಳನ್ನು ಮಮ್ಮಿಗಳು ಎಂದು ಕರೆಯುತ್ತಾರೆ. ಫರವೊ ಆಗಿದ್ದ ತೂತನ್‌ಖಾಮನ್‌ನ ಮಮ್ಮಿಯು ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾದ ಮಮ್ಮಿಯಾಗಿದೆ. ಪಿರಮಿಡ್‌ಗಳ ಒಳಗೆ ಇಂತಹ ಮಮ್ಮಿಗಳನ್ನು ಸಂರಕ್ಷಿಸಿಡಲಾಗಿದೆ.


**ಮಮ್ಮಿ**

## ಬರಹಕಲೆ

**ಮೆಸೊಪೊಟೇಮಿಯಾದಂತೆ ಈಜಿಪ್ಟಿನಲ್ಲೂ ಬರಹಕಲೆಯು ನೆಲೆನಿಂತಿತ್ತು.**
**ಈಜಿಪ್ಟಿನ ಬರಹಕಲೆಯ ವಿಶೇಷತೆಗಳೇನೆಂದು ತಿಳಿದುಕೊಳ್ಳೋಣ.**

ಪ್ರಾಚೀನ ಈಜಿಪ್ಟಿನ ಜನರ ಬರವಣಿಗೆಯ ಲಿಪಿಯು ಹೈರೊಗ್ಲಿಫಿಕ್ಸ್ ಆಗಿತ್ತು.

ಚಿಹ್ನೆ ಮತ್ತು ಅಕ್ಷರ ರೂಪಗಳು ಒಟ್ಟು ಸೇರಿದ ಲಿಪಿಯಾಗಿತ್ತು.


ಹೈರೊಗ್ಲಿಫಿಕ್ಸ್ ಲಿಪಿ

ಹೈರೊಗ್ಲಿಫಿಕ್ಸ್ ಎಂದರೆ 'ಪವಿತ್ರ' ಎಂದು ಅರ್ಥ.

ಬಲದಿಂದ ಎಡಕ್ಕೆ ಓದಲಾಗುತ್ತಿತ್ತು.

## ವೈಜ್ಞಾನಿಕ ಸಾಧನೆಗಳು

ಈಜಿಪ್ಟಿನಲ್ಲಿ ಗಣಿತ ಮತ್ತು ವೈದ್ಯಶಾಸ್ತ್ರವು ಅಭಿವೃದ್ಧಿಯನ್ನು ಹೊಂದಿತ್ತು. ಈಜಿಪ್ಟಿನ ಜನರು ಗಣಿತಶಾಸ್ತ್ರದ ಜ್ಯಾಮಿತಿಗೆ ಅಡಿಪಾಯವನ್ನು ಹಾಕಿದರು. ಸಂಕಲನ, ವ್ಯವಕಲನ ಎಂಬಿವುಗಳು ಈಜಿಪ್ಟಿನವರ ಕೊಡುಗೆಯಾಗಿದೆ. ಮೂವತ್ತು ದಿವಸಗಳಂತೆ ಇರುವ ಹನ್ನೆರಡು ತಿಂಗಳುಗಳೊಂದಿಗೆ, ಐದು ದಿವಸ ಸೇರಿಸಿ 365 ದಿವಸಗಳನ್ನೊಳಗೊಂಡ ಒಂದು ವರ್ಷವು ಇವರ ಸೌರಪಂಚಾಂಗದಲ್ಲಿ (Solar Calendar) ಒಳಗೊಂಡಿದೆ.

ಈಗ ನಾವು ಉಪಯೋಗಿಸುವ ಕ್ಯಾಲೆಂಡರಿನಲ್ಲಿ ಎಷ್ಟು ತಿಂಗಳುಗಳಿವೆ? ಪ್ರತಿಯೊಂದು ತಿಂಗಳಿನಲ್ಲೂ 30 ದಿವಸಗಳಂತೆ ಇದೆಯೇ? ನಿಮ್ಮ ಮನೆಯಲ್ಲಿರುವ ಕ್ಯಾಲೆಂಡರನ್ನು ನಿರೀಕ್ಷಿಸಿ, ಪ್ರತಿಯೊಂದು ತಿಂಗಳಲ್ಲೂ ಎಷ್ಟು ದಿವಸಗಳು ಇವೆಯೆಂದು ಕಂಡುಹಿಡಿದು ಬರೆಯಿರಿ.

## ಚೀನಾದ ನಾಗರಿಕತೆ

ಚೀನಾದ ನಾಗರಿಕತೆಯು 'ಹೊಯಾಂಗ್ ಹೋ' ನದಿ ತೀರದಲ್ಲಿ ಉಗಮವಾಯಿತು. ಕೃಷಿಯು ಈ ನಾಗರಿಕತೆಯ ಅಡಿಪಾಯವಾಗಿತ್ತು. ಅಲ್ಲದೆ ನೇಯ್ಗೆ, ಮಣ್ಣಿನ ಪಾತ್ರೆ ನಿರ್ಮಾಣ, ರೇಶ್ಮೆ ವಸ್ತ್ರ ನಿರ್ಮಾಣ ಎಂಬಿವುಗಳಲ್ಲಿ ಇವರು ಪರಿಣತರಾಗಿದ್ದರು. ಅವರು ಗುಣಮಟ್ಟದ ಕಂಚಿನ ಶಿಲ್ಪಗಳನ್ನು ನಿರ್ಮಿಸುತ್ತಿದ್ದರು.

## ಬರವಣಿಗೆ ಸಂಪ್ರದಾಯ

ಪ್ರಾಚೀನ ಕಾಲದಿಂದಲೇ ಚೀನಾದವರಲ್ಲಿ ಬರವಣಿಗೆ ಸಂಪ್ರದಾಯವು ಅಸ್ತಿತ್ವದಲ್ಲಿತ್ತು. ಅಕ್ಷರಗಳ ಬದಲಿಗೆ ಚಿತ್ರಗಳನ್ನು ಬಳಸುವ ಚಿತ್ರಲಿಪಿಯು ಪ್ರಚಲಿತವಾಗಿತ್ತು. ಕಾಲಕ್ರಮೇಣ ಅವರು ಚಿತ್ರಗಳ ಬದಲಿಗೆ ಚಿಹ್ನೆಗಳನ್ನು ರೂಪಿಸಿದರು. ಆ ಲಿಪಿಯು ಬದಲಾವಣೆಗಳೊಂದಿಗೆ ಇಂದಿಗೂ ಚೀನಾದಲ್ಲಿ ಜಾರಿಯಲ್ಲಿದೆ.



ಚಿತ್ರ 1.9 ಚೈನೀಸ್ ಲಿಪಿ

ಮೆಸೊಪೊಟೇಮಿಯ, ಈಜಿಪ್ಟ್, ಚೀನಾ ಎಂಬಿಡೆಗಳಲ್ಲಿ ನೆಲೆನಿಂತಿದ್ದ ಬರವಣಿಗೆ ಪದ್ಧತಿಯ ವಿಶೇಷತೆಗಳನ್ನು ಕಂಡುಹಿಡಿದು ಪಟ್ಟಿ ಪೂರ್ತಿಗೊಳಿಸಿರಿ.

| ನಾಗರಿಕತೆಗಳು | ಲಿಪಿ | ವಿಶೇಷತೆಗಳು |
|---|---|---|
| ಮೆಸೊಪೊಟೇಮಿಯ | .............................................. | .............................................. |
| ಈಜಿಪ್ಟ್ | .............................................. | .............................................. |
| ಚೀನಾ | .............................................. | .............................................. |

## ಹರಪ್ಪ ನಾಗರಿಕತೆ

ಹರಪ್ಪ ನಾಗರಿಕತೆಯು ಕಂಚಿನಯುಗದಲ್ಲಿ ಸಿಂಧೂ ನದಿ ದಡದಲ್ಲಿ ನೆಲೆನಿಂತಿದ್ದ ನಾಗರಿಕತೆಯಾಗಿದೆ. ಅಂದಾಜು ಬಿ.ಸಿ.ಇ. 2600 ರಿಂದ ಬಿ.ಸಿ.ಇ. 1900 ರವರೆಗಿನ ಕಾಲವನ್ನು ಈ ನಾಗರಿಕತೆಯ ಕಾಲಘಟ್ಟವಾಗಿ ಪರಿಗಣಿಸಲಾಗಿದೆ. ಹರಪ್ಪವು ಮೊತ್ತಮೊದಲು ಕಂಡುಹಿಡಿದ ನಗರವಾಗಿದೆ. ಆದುದರಿಂದ ಈ ನಾಗರಿಕತೆಯನ್ನು ಹರಪ್ಪ ನಾಗರಿಕತೆ ಎಂದು

ಕರೆಯುತ್ತಾರೆ. ಈ ನಾಗರಿಕತೆಯು ಸಿಂಧೂ ನದಿತೀರದಲ್ಲಿ ಉಗಮವಾದ ಕಾರಣ ಸಿಂಧೂ ನದಿತೀರ ನಾಗರಿಕತೆ ಎಂದೂ ಕರೆಯಲಾಗುತ್ತದೆ. ನಗರಗಳನ್ನು ಕೇಂದ್ರೀಕರಿಸಿ ಈ ನಾಗರಿಕತೆಯು ಬೆಳೆದು ಬಂತು. ಆದುದರಿಂದ ಈ ನಾಗರಿಕತೆಯನ್ನು ಭಾರತದ ಮೊದಲ ನಗರೀಕರಣ ಎಂದು ಕರೆಯುವರು.




ಭೂಪಟ 1.2

**ಸರ್ ಜೋನ್ ಮಾರ್ಷಲ್**

‘ಆರ್ಕಿಯೋಲಜಿಕಲ್ ಸರ್ವೆ ಆಫ್ ಇಂಡಿಯಾ’ವು (ASI) ಭಾರತದಲ್ಲಿ ಪುರಾತನ ವಸ್ತುಗಳ ಉತ್ಖನನ ಮತ್ತು ಸಂರಕ್ಷಣೆಗಾಗಿ ರೂಪುಗೊಂಡ ಸಂಸ್ಥೆಯಾಗಿದೆ. ಸರ್ ಜೋನ್ ಮಾರ್ಷಲ್ 1902 ರಿಂದ 1928 ರ ವರೆಗೆ ‘ಆರ್ಕಿಯೋಲಜಿಕಲ್ ಸರ್ವೆ ಆಫ್ ಇಂಡಿಯಾ’ದ ಡೈರಕ್ಟರ್ ಜನರಲ್ ಆಗಿದ್ದರು ಇವರ ನೇತೃತ್ವದಲ್ಲಿ ನಡೆದ ಸಂಶೋಧನೆಯಿಂದ ಹರಪ್ಪ ನಾಗರಿಕತೆಯನ್ನು ಕಂಡುಹಿಡಿಯಲಾಯಿತು.



ಭೂಪಟ 1.2 ನಿರೀಕ್ಷಿಸಿ ಹರಪ್ಪ ನಾಗರಿಕತೆಯ ಪ್ರಧಾನ ನಗರಗಳನ್ನು ಗುರುತಿಸಿ ಪಟ್ಟಿ ಮಾಡಿರಿ.

- ಮೊಹೆಂಜೋದಾರೊ
-
-
-

## ನಗರ ಯೋಜನೆ (Town Planning)

ಹರಪ್ಪ ನಾಗರಿಕತೆಯ ಪ್ರಧಾನ ವಿಶೇಷತೆಗಳಲ್ಲಿ ನಗರ ಯೋಜನೆಯೂ ಒಂದು. ನಗರದ ಬೀದಿಗಳ ಎರಡೂ ಬದಿಗಳಲ್ಲಿ ಮನೆಗಳನ್ನು ನಿರ್ಮಿಸಿದರು. ಸುಟ್ಟ ಇಟ್ಟಿಗೆಗಳನ್ನು ನಿರ್ಮಾಣ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದರು. ಒಳಚರಂಡಿ ಯೋಜನೆಯು ಹರಪ್ಪ ನಾಗರಿಕತೆಯ ಇನ್ನೊಂದು ವಿಶೇಷತೆಯಾಗಿತ್ತು. ಮನೆಗಳಿಂದ ಹರಿಯುವ ಮಲಿನ ಜಲ ಬೀದಿಗಳಲ್ಲಿರುವ ಒಳಚರಂಡಿಗಳ ಮೂಲಕ ನಗರದ ಹೊರಗೆ ಹರಿಯುವ ರೀತಿಯಲ್ಲಿ ಒಳಚರಂಡಿಗಳನ್ನು ನಿರ್ಮಿಸಲಾಗಿತ್ತು.

## ಮೊಹೆಂಜೋದಾರೋದ ದೊಡ್ಡ ಕೆರೆ (Great Bath)

ಮೊಹೆಂಜೋದಾರೊ ಹರಪ್ಪ ನಾಗರಿಕತೆಯ ಪ್ರಧಾನ ನಗರವಾಗಿತ್ತು. ದೊಡ್ಡ ಕೆರೆಯು ಈ ನಗರದ ವಿಶೇಷತೆಗಳಿಂದೊಡಗೂಡಿದ ನಿರ್ಮಿತಿಯಾಗಿತ್ತು. ಈ ಕೆರೆಗೆ ಇಳಿಯಲು ಎರಡೂ ಬದಿಗಳಲ್ಲಿ ಮೆಟ್ಟಿಲುಗಳು ಮತ್ತು ಸ್ನಾನಕ್ಕಾಗಿ ಸ್ನಾನ ಗೃಹಗಳು ಇದ್ದವು. ಶುದ್ಧ ಜಲವನ್ನು ತುಂಬಿಸುವ ಮತ್ತು ಮಲಿನ ಜಲವನ್ನು ಹೊರಬಿಡುವ ವ್ಯವಸ್ಥೆಯೂ ಇತ್ತು.



ಚಿತ್ರ 1.10
**ದೊಡ್ಡ ಕೆರೆಯ ಅವಶೇಷಗಳು**

## ಕಣಜ (Granary)

ಕೃಷಿಯು ಹರಪ್ಪದವರ ಮುಖ್ಯ ಜೀವನೋಪಾಯವಾಗಿತ್ತು. ಗುಜರಾತಿನ ರಂಗ್‌ಪುರ, ಲೋಥಾಲ್ ಎಂಬೀ ಪ್ರದೇಶಗಳಲ್ಲಿ ಭತ್ತದ ಕೃಷಿ ಮಾಡಿದ ಪುರಾವೆಗಳು ಲಭಿಸಿವೆ. ಹರಪ್ಪದಲ್ಲಿ ಸಂಶೋಧಿಸಿದ ಪ್ರಧಾನ ಚರಿತ್ರೆಯ ಉಳಿಕೆಗಳು ಕಣಜ(Granaries)ಗಳಾಗಿದ್ದವು. ಧಾನ್ಯಗಳ ಸಂಗ್ರಹಕ್ಕೆ ಇವುಗಳನ್ನು ಬಳಸಲಾಗಿತ್ತು.



ಚಿತ್ರ 1.11
**ಕಣಜದ ಅವಶೇಷಗಳು**

## ಕರಕುಶಲತೆ

ಹರಪ್ಪದ ಜನರು ಕರಕುಶಲತೆಯಲ್ಲಿ ಪರಿಣತರಾಗಿದ್ದರು. ಕೆಳಗೆ ನೀಡಿರುವ ಚಿತ್ರಗಳನ್ನು ನಿರೀಕ್ಷಿಸಿರಿ.




ಚಿತ್ರ 1.12

ಈ ಚಿತ್ರಗಳಿಂದ ಹರಪ್ಪ ಜನರ ಕರಕುಶಲತೆಯ ಕುರಿತು ಯಾವೆಲ್ಲಾ ಮಾಹಿತಿಗಳು ಲಭಿಸುತ್ತವೆ? ಕಂಡುಹಿಡಿದು ಆಶಯ ಚಿತ್ರವನ್ನು ಪೂರ್ತಿಗೊಳಿಸಿರಿ.



ಚಿನ್ನ, ಬೆಳ್ಳಿ, ಮುತ್ತುಗಳು ಮತ್ತು ಚಿಪ್ಪುಗಳಿಂದ ಮಾಡಿದ ಮಾಲೆಗಳು, ಕೈ ಬಳೆಗಳು ಮತ್ತು ಕಿವಿಯೋಲೆಗಳು ಅವರಲ್ಲಿ ಹೆಚ್ಚು ಜನಪ್ರಿಯವಾಗಿದ್ದವು. ಆವೆ ಮಣ್ಣು ಮತ್ತು ಶಿಲೆಗಳಿಂದ ಅವರು ಮುದ್ರೆಗಳನ್ನು ನಿರ್ಮಿಸಿದ್ದರು. ಹರಪ್ಪದ ನಗರದಲ್ಲಿ ಕಂಡುಬಂದ ಆಟಿಕೆಗಳು, ಮಣ್ಣಿನ ಪಾತ್ರೆಗಳು, ಕಂಚಿನ ಪ್ರತಿಮೆಗಳು ಎಂಬಿವುಗಳು ಹರಪ್ಪದ ಜನರ ಕಲಾ ಪ್ರತಿಭೆಯನ್ನು ತಿಳಿಸುತ್ತದೆ.

## ಬರಹಕಲೆ


ಚಿತ್ರ 1.13

ಹರಪ್ಪದ ಜನರಿಗೆ ಅವರದ್ದೇ ಆದ ಬರವಣಿಗೆಯಿತ್ತು. ಬರವಣಿಗೆಗೆ ಅವರು ಅಕ್ಷರದ ಬದಲು ಚಿಹ್ನೆಗಳನ್ನು ಬಳಸುತ್ತಿದ್ದರು. ಅವರ ಬರವಣಿಗೆ ಕಲೆಯು ಹೆಚ್ಚಾಗಿ ಮುದ್ರೆಗಳಲ್ಲಿ ಕಂಡುಬಂದಿದೆ.

## ಹರಪ್ಪ ನಾಗರಿಕತೆಯ ಪತನ

ಸರಿಸುಮಾರು ಬಿ.ಸಿ.ಇ. 1900 ರ ಕಾಲಾಕ್ಕಾಗುವಾಗ ಹರಪ್ಪ ನಗರಗಳು ಪತನದ ಅಂಚಿನಲ್ಲಿದ್ದವು. ಹರಪ್ಪದ ನಾಗರಿಕತೆಯ ಪತನಕ್ಕೆ ಸಂಬಂಧಿಸಿ ಅನೇಕ ಅಭಿಪ್ರಾಯಗಳು ನೆಲೆನಿಂತಿವೆ. ಅವುಗಳಲ್ಲಿ ಕೆಲವನ್ನು ನಾವು ಪರಿಶೋಧಿಸೋಣ.




ಪ್ರಾಚೀನ ಕಾಲದ ಮಾನವ ಚರಿತ್ರೆಯನ್ನು ದಾಖಲಿಸುವುದು ಬಹಳ ಕಷ್ಟಕರ ಮತ್ತು ಪ್ರಯಾಸದಾಯಕವಾದ ಕೆಲಸವಾಗಿದೆ. ಯಾವುದೇ ಲಿಖಿತ ಪುರಾವೆಗಳು ಲಭ್ಯವಿಲ್ಲದ ಚರಿತ್ರೆಯ ಪೂರ್ವ ಕಾಲದ ಕುರಿತು, ಜನರ ಕುರಿತು ಮತ್ತು ಅವರ ಜೀವನದ ಕುರಿತು ಕಲಿಯಲು ಚರಿತ್ರೆಯ ಉಳಿಕೆಯಾದ ಪುರಾವಸ್ತುಗಳು ಮಾತ್ರ ನಮಗೆ ಆಶ್ರಯವಾಗಿವೆ. ಇಂತಹ ಪುರಾವಸ್ತುಗಳನ್ನು ಪುರಾತತ್ವಶಾಸ್ತ್ರಜ್ಞರು ವಿಶ್ಲೇಷಿಸುವ ಮೂಲಕ ಮಾನವನ ಮೂಲದಿಂದ ಅವರ ಇತಿಹಾಸವನ್ನು ದಾಖಲಿಸಿದ್ದಾರೆ. ಪಳೆಯುಳಿಕೆಗಳು, ಅವಶೇಷಗಳು ಲಕ್ಷಾಂತರ ವರ್ಷಗಳ ಹಿಂದೆ ಮಾನವರು ರೂಪಗೊಂಡ ಬಗ್ಗೆ ಪುರಾವೆಗಳನ್ನು ಒದಗಿಸಿದರೆ, ಶಿಲಾಯುಧಗಳು, ಉಪಕರಣಗಳು, ಗುಹಾಚಿತ್ರಗಳು ಶಿಲಾಯುಗದ ಮಾನವರ ಕುರಿತು ನಮಗೆ ತಿಳಿಸುತ್ತವೆ.

ನವೀನ ಶಿಲಾಯುಗ ಕಾಲದ ಕೃಷಿಯ ಆರಂಭ ಮತ್ತು ಸ್ಥಿರವಾಸ ಕೇಂದ್ರಗಳ ವಿಕಾಸವು ಮಾನವಚರಿತ್ರೆಯ ಮೈಲುಗಲ್ಲಾಗಿತ್ತು. ಕಂಚಿನಯುಗದಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿ ರೂಪುಗೊಂಡ ನಾಗರಿಕತೆಗಳು ಆ ಕಾಲಘಟ್ಟದಲ್ಲಿದ್ದ ಮಾನವರು ಸಾಧಿಸಿದ ಸಾಂಸ್ಕೃತಿಕ ವಿಕಾಸದ ಚರಿತ್ರೆಯನ್ನು ನಮಗೆ ತೋರಿಸಿಕೊಡುತ್ತವೆ. ಪ್ರಾಚೀನ ನಾಗರಿಕತೆಗಳು ಉಗಮವಾದ ರೀತಿಗಳು, ಜ್ಞಾನಗಳು ಇಂದಿನ ನಾಗರಿಕತೆಗಳ ಅಡಿಪಾಯವಾಗಿದೆ. ಭೂತಕಾಲದ ಕುರಿತು ಇಂತಹ ಮಾಹಿತಿಗಳು ನಮಗೆ ಭವಿಷ್ಯಕ್ಕಿರುವ ಮೆಟ್ಟಿಲುಗಳಾಗಬಹುದು.

## ಮುಂದುವರಿದ ಚಟುವಟಿಕೆಗಳು

- ವಿವಿಧ ಶಿಲಾಯುಗ ಘಟ್ಟಗಳಲ್ಲಿ ಮಾನವರು ಉಪಯೋಗಿಸಿದ ಉಪಕರಣಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
- ಕಂಚಿನ ಯುಗದ ನಾಗರಿಕತೆ ಮತ್ತು ಮಾನವರ ಅಭಿವೃದ್ಧಿ ಎಂಬ ವಿಷಯದಲ್ಲಿ ಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಂ ತಯಾರಿಸಿರಿ.

  **ಸೂಚನೆಗಳು**

  - ಮೆಸೊಪೊಟೇಮಿಯ ನಾಗರಿಕತೆ
  - ಈಜಿಪ್ಟ್ ನಾಗರಿಕತೆ
  - ಚೀನಾದ ನಾಗರಿಕತೆ
  - ಹರಪ್ಪ ನಾಗರಿಕತೆ
- ಕಂಚಿನ ಯುಗದ ನಾಗರಿಕತೆಯ ವಿಶೇಷತೆಗಳನ್ನು ತಿಳಿಸುವ ಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಂ ತಯಾರಿಸಿರಿ.
- ಆವೆಮಣ್ಣಿನ ಫಲಕ ತಯಾರಿಸಿ ನಿಮಗೆ ತಿಳಿದಿರುವ ಲಿಪಿಯನ್ನು ಬರೆದು, ಒಣಗಿಸಿ ಸಮಾಜ ವಿಜ್ಞಾನ ಲ್ಯಾಬಿನಲ್ಲಿ ಪ್ರದರ್ಶಿಸಿರಿ.
- ನದಿತೀರಗಳಲ್ಲಿ ನೆಲೆ ನಿಂತಿರುವ ಪ್ರಧಾನ ನಗರಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.



# 2

# ಆರಂಭಕಾಲದ ರಾಷ್ಟ್ರಗಳು




ತಿಂಗಳುಮೇಡು ಸರಕಾರಿ ಶಾಲೆಯ ಮಕ್ಕಳು ಬಹಳ ಸಂತೋಷದಲ್ಲಿದ್ದಾರೆ. ಕನ್ನಡ ಭಾಷೆಯಲ್ಲಿರುವ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಪ್ರಸಾರವನ್ನು ವೀಕ್ಷಿಸಲು ಎಲ್ಲರೂ ಸಭಾಂಗಣಕ್ಕೆ ಬಂದಿದ್ದಾರೆ.

ಮುಖ್ಯೋಪಾಧ್ಯಾಯರು ಮಾತನಾಡತೊಡಗಿದರು.

“ಪ್ರೀತಿಯ ಮಕ್ಕಳೇ,

ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಕುರಿತು ನೀವು ಕೇಳಿರುವಿರಾ? ವಿವಿಧ ದೇಶಗಳ ಮತ್ತು ಪ್ರದೇಶಗಳ ಇತಿಹಾಸ ಮತ್ತು ಸಂಸ್ಕೃತಿಯನ್ನು ಪರಸ್ಪರ ಅರ್ಥ ಮಾಡಿಕೊಳ್ಳಲು ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳು ಸಹಾಯಕವಾಗುತ್ತವೆ. ವಿವಿಧ ದೇಶದ ವಿದ್ಯಾರ್ಥಿ ಪ್ರತಿನಿಧಿಗಳನ್ನು ಸೇರಿಸಿ ಪ್ರತಿವರ್ಷ ಇಂತಹ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಈ ವರ್ಷ ಭಾರತವು ಆಯೋಜಿಸಿದ ಈ ಕಾರ್ಯಕ್ರಮದಲ್ಲಿ ಗ್ರೀಸ್, ಇಟಲಿ ಮತ್ತು ಇರಾನ್ ಎಂಬೀ ದೇಶಗಳ ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರತಿ ದೇಶದಿಂದ ಬಂದ ವಿದ್ಯಾರ್ಥಿ ಪ್ರತಿನಿಧಿಗಳು ತಮ್ಮ ದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ಪರಿಚಯಿಸುವ ಕಾರ್ಯಕ್ರಮವನ್ನು ಇಂದು ಪ್ರಸಾರ ಮಾಡಲಾಗುತ್ತಿದೆ.”

ಗ್ರೀಸ್ ದೇಶದಿಂದ ಬಂದ ಅಥೀನಾ, ಒಲಿಂಪಿಕ್ಸ್ ಚಿಹ್ನೆಯನ್ನು ಪ್ರದರ್ಶಿಸುವ ಮೂಲಕ ತನ್ನ ತಾಯ್ನಾಡಿನ ವಿಶೇಷತೆಗಳನ್ನು ಹಂಚಿಕೊಂಡಳು.





"ಗೆಳೆಯರೇ ಈ ಚಿಹ್ನೆಯು ನಿಮಗೆ ಪರಿಚಿತವಾಗಿರುವುದಲ್ಲವೇ? ಇಡೀ ಜಗತ್ತು ಇಂದು ಅತಿ ಉತ್ಸಾಹದಿಂದ ಭಾಗವಹಿಸುವ ಒಲಂಪಿಕ್ಸ್ ಪ್ರಾಚೀನ ಗ್ರೀಸ್‌ನಲ್ಲಿ ಹುಟ್ಟಿಕೊಂಡಿತು. ಗ್ರೀಕ್ ನಗರ ರಾಷ್ಟ್ರವಾದ ಅಥೆನ್ಸ್‌ನಲ್ಲಿ ಹುಟ್ಟಿದ 'ಪ್ರಜಾಪ್ರಭುತ್ವ'ವು ನಾವು ಜಗತ್ತಿಗೆ ನೀಡಿದ ಅತ್ಯಂತ ದೊಡ್ಡ ಕೊಡುಗೆಯಾಗಿದೆ. ಆಗ್ನೇಯ ಯುರೋಪಿನಲ್ಲಿ ಗ್ರೀಸ್ ದೇಶವಿದೆ. ಸಮುದ್ರ ಮಟ್ಟದಿಂದ ಎತ್ತರದಲ್ಲಿರುವ ಕಣಿವೆಗಳು, ಬೆಟ್ಟಗಳು, ಸಣ್ಣ ಪರ್ವತಗಳಂತಹ ಭೌಗೋಳಿಕ ವೈಶಿಷ್ಟ್ಯಗಳಿಂದ ಈ ರಾಷ್ಟ್ರವು ಸಮೃದ್ಧವಾಗಿದೆ."

ಅಥೀನಾಳ ವಿವರಣೆಯನ್ನು ಗಮನಿಸಿದಿರಲ್ಲವೇ? ಯಾವೆಲ್ಲಾ ಮಾಹಿತಿಗಳು ಇದರಿಂದ ನಿಮಗೆ ಲಭಿಸುತ್ತವೆ.

- ಪುರಾತನ ಗ್ರೀಸ್ ನಲ್ಲಿ ಒಲಿಂಪಿಕ್ಸ್ ಆರಂಭವಾಯಿತು.
- 
- 
- 

ಪ್ರಾಚೀನ ಗ್ರೀಸ್‌ನ ಬಗ್ಗೆ ಇನ್ನಷ್ಟು ತಿಳಿದುಕೊಳ್ಳೋಣ.

## ಗ್ರೀಕ್ ನಗರ ರಾಷ್ಟ್ರಗಳು

ಪ್ರಾಚೀನ ಗ್ರೀಸ್‌ನಲ್ಲಿ ಗ್ರಾಮಗಳು ಮುಖ್ಯ ವಾಸ ಕೇಂದ್ರಗಳಾಗಿದ್ದವು. ಕೃಷಿ ಮತ್ತು ವ್ಯಾಪಾರದ ಅಭಿವೃದ್ಧಿಯೊಂದಿಗೆ ನಗರಗಳು ರೂಪುಗೊಂಡವು. ಕಾಲಕ್ರಮೇಣ ಒಂದು ನಗರ ಮತ್ತು ಸುತ್ತಮುತ್ತಲಿನ ಹಲವಾರು ಗ್ರಾಮಗಳು ಒಗ್ಗೂಡಿ ನಗರ ರಾಷ್ಟ್ರಗಳಾಗಿ ರೂಪಾಂತರಗೊಳ್ಳಲು ಪ್ರಾರಂಭವಾಯಿತು. ಈ ನಗರ ರಾಷ್ಟ್ರಗಳನ್ನು ಪೊಲಿಸ್(Polis) ಎಂದು ಕರೆಯಲಾಗುತ್ತಿತ್ತು.

ಭೂಪಟ 2.1ನ್ನು (Page 25) ನೋಡಿ ಪ್ರಾಚೀನ ಗ್ರೀಸ್‌ನಲ್ಲಿ ಅಸ್ತಿತ್ವದಲ್ಲಿದ್ದ ಪ್ರಮುಖ ನಗರ ರಾಷ್ಟ್ರಗಳು ಯಾವುವೆಂದು




ಭೂಪಟ 2.1 - ಪುರಾತನ ಗ್ರೀಸ್‌ನ ಪ್ರಮುಖ ನಗರ ರಾಷ್ಟ್ರಗಳು

ಕಂಡುಹಿಡಿದು ಬರೆಯಿರಿ.

- 
- 
- 
- 

ಎತ್ತರದ ಪರ್ವತಗಳು ಅಥವಾ ಸಮುದ್ರಗಳು ಈ ನಗರ ರಾಷ್ಟ್ರಗಳನ್ನು ಪರಸ್ಪರ ಬೇರ್ಪಡಿಸಿದವು. ಆದುದರಿಂದ ಪ್ರತಿಯೊಂದು ನಗರ ರಾಷ್ಟ್ರವೂ ಪ್ರತ್ಯೇಕಿಸಲ್ಪಟ್ಟ ಸ್ಥಿತಿಯಲ್ಲಿತ್ತು. ಈ ಕಾರಣಕ್ಕಾಗಿ ಪ್ರಾಚೀನ ಗ್ರೀಸ್‌ನಲ್ಲಿ ಒಂದು ಸಾರ್ವಜನಿಕ ಆಡಳಿತ ವ್ಯವಸ್ಥೆ ಇರಲಿಲ್ಲ. ಅಥೆನ್ಸ್ ಮತ್ತು ಸ್ಪಾರ್ಟಾ ಗ್ರೀಸ್‌ನ ಪ್ರಮುಖ ನಗರ ರಾಷ್ಟ್ರಗಳಾಗಿದ್ದವು.

## ಅಥೆನ್ಸ್

ತರಗತಿ ನಾಯಕನನ್ನು ಮತ್ತು ಶಾಲಾ ನಾಯಕನನ್ನು ನೀವು ಹೇಗೆ ಆಯ್ಕೆ ಮಾಡುತ್ತೀರಿ?

- ಒಮ್ಮತದ ತೀರ್ಮಾನದಿಂದಲೋ ಅಥವಾ ಮತದಾನದ ಮೂಲಕವೋ?
- 

ಈ ರೀತಿ ಜನರು ತಮ್ಮ ಆಡಳಿತಗಾರರನ್ನು ಆಯ್ಕೆ ಮಾಡುವ ವ್ಯವಸ್ಥೆ ಯಾವುದು?

ಪ್ರಜಾಪ್ರಭುತ್ವದ ಮೊದಲ ರೂಪವು ಗ್ರೀಕ್ ನಗರ ರಾಷ್ಟ್ರವಾದ ಅಥೆನ್ಸ್‌ನಲ್ಲಿ ಹುಟ್ಟಿಕೊಂಡಿತು. ಆಡಳಿತಗಾರರನ್ನು ಆಯ್ಕೆ ಮಾಡುವುದರಲ್ಲೂ, ಶಾಸನಗಳನ್ನು ರೂಪಿಸುವುದರಲ್ಲೂ ಅಥೆನ್ಸ್‌ನ ಪೌರತ್ವವಿರುವ ಎಲ್ಲಾ ಪುರುಷ ನಾಗರಿಕರಿಗೆ

ಪಾಲುಗಾರಿಕೆ ಇತ್ತು. ಸ್ತ್ರೀಯರು, ಗುಲಾಮರು, ವಿದೇಶಿಯರು ಮೊದಲಾದ ವಿಭಾಗದವರಿಗೆ ಪೌರತ್ವದ ಸ್ಥಾನಮಾನ ಇರಲಿಲ್ಲ.

ಪೆರಿಕ್ಲಿಸ್‌ನ ಕಾಲದಲ್ಲಿ ಅಥೆನ್ಸ್‌ನಲ್ಲಿ ಪ್ರಜಾಪ್ರಭುತ್ವವು ವಿಸ್ತಾರವಾಗಲು ಪ್ರಾರಂಭವಾಯಿತು.
ಅಥೆನ್ಸ್‌ನ ರಾಷ್ಟ್ರೀಯ ಸಭೆಯನ್ನು ಅಸೆಂಬ್ಲಿ ಎಂದು ಕರೆಯಲಾಗುತ್ತಿತ್ತು.

ಇನ್ನು ಅಥೆನ್ಸ್‌ನ ಇತರ ವಿಶೇಷತೆಗಳನ್ನು ಪರಿಚಯಿಸಿ ಕೊಳ್ಳೋಣ.

- ಕಲೆ ಮತ್ತು ಸಂಸ್ಕೃತಿಗೆ ಮಹತ್ವ ನೀಡಿದ್ದ ಶಿಕ್ಷಣ ನೀತಿ.
- ಪುರುಷರಿಗೆ ಎರಡು ವರ್ಷಗಳ ಕಡ್ಡಾಯ ಮಿಲಿಟರಿ ಸೇವೆ.
- ಪ್ರಬಲವಾದ ನೌಕಾಪಡೆ ಮತ್ತು ಸೈನಿಕ ವ್ಯೂಹ.

**ಅಥೆನ್ಸ್‌ನ ಪೌರರು**

ಅಥೆನ್ಸ್‌ನಲ್ಲಿ ಎಲ್ಲರನ್ನೂ ಪೌರರೆಂದು ಪರಿಗಣಿಸಿರಲಿಲ್ಲ. ಒಂದು ವ್ಯಕ್ತಿಗೆ ಪೌರತ್ವವನ್ನು ಪಡೆಯಲು ಅವನು ಸ್ವತಂತ್ರನಾದ ಪುರುಷನಾಗಿರಬೇಕಿತ್ತು, ಹೆತ್ತವರು ಅಥೆನ್ಸ್ ನವರಾಗಿರಬೇಕು ಮೊದಲಾದ ನಿಬಂಧನೆಗಳು ಇದ್ದವು.

**ಪೆರಿಕ್ಲಿಸ್**

ಅಥೆನ್ಸ್‌ನ ಪ್ರಬಲವಾದ ಆಡಳಿತಗಾರನಾಗಿದ್ದ ಪೆರಿಕ್ಲಿಸ್‌ನ ಆಡಳಿತ ಕಾಲದಲ್ಲಿ ಅಥೆನ್ಸ್, ಗ್ರೀಕ್ ನಗರ ರಾಷ್ಟ್ರಗಳಲ್ಲಿ ಪ್ರಬಲವಾದ ಸ್ಥಾನಮಾನವನ್ನು ಗಳಿಸಿಕೊಂಡಿತ್ತು. ಅಧಿಕಾರ ಒಬ್ಬ ವ್ಯಕ್ತಿಯಲ್ಲಿ ಕೇಂದ್ರೀಕೃತವಾಗದೆ ಎಲ್ಲಾ ಜನರಿಗೂ ಪಾಲುಗಾರಿಕೆ ಇರಬೇಕು ಎಂಬುದು ಪೆರಿಕ್ಲಿಸ್‌ನ ಕಲ್ಪನೆಯಾಗಿತ್ತು.

## ಸ್ಪಾರ್ಟಾ

ಅಥೆನ್ಸ್‌ಗಿಂತ ಭಿನ್ನವಾಗಿ ಸ್ಪಾರ್ಟಾದಲ್ಲಿ ಪ್ರಭುಗಳ ಆಡಳಿತವು ನೆಲೆ ನಿಂತಿತ್ತು. ಸಾಂಪ್ರದಾಯಿಕ ಮೌಲ್ಯಗಳು ಮತ್ತು ಮಿಲಿಟರಿ ತರಬೇತಿಗೆ ಆದ್ಯತೆ ನೀಡುವ ಶಿಕ್ಷಣ ವ್ಯವಸ್ಥೆ ಇಲ್ಲಿತ್ತು. ಗಂಡು ಮಕ್ಕಳಿಗೆ 23 ವರ್ಷಗಳ ಸೈನಿಕ ಸೇವೆ ಕಡ್ಡಾಯವಾಗಿತ್ತು.

ಅಥೆನ್ಸ್ ಮತ್ತು ಸ್ಪಾರ್ಟಾದ ವಿಶೇಷತೆಗಳನ್ನು ಸಂಭಾಷಣೆ ರೂಪದಲ್ಲಿ ಮಂಡಿಸಿರಿ.




ಗ್ರೀಕ್ ನಗರ ರಾಷ್ಟ್ರಗಳಿಗೆ ವೈರತ್ವವಿದ್ದ ಪರ್ಶಿಯನ್ ಸಾಮ್ರಾಜ್ಯವನ್ನು ಅಥೆನ್ಸ್ ಮತ್ತು ಸ್ಪಾರ್ಟಾದ ಸಂಯುಕ್ತ ಸೈನ್ಯವು ಆಕ್ರಮಿಸಿ ವಶಪಡಿಸಿಕೊಂಡಿತ್ತು. ಈ ಯುದ್ಧವನ್ನು ಗ್ರೀಕೋ-ಪರ್ಶಿಯನ್ ಯುದ್ಧವೆಂದು ಕರೆಯಲಾಗುತ್ತದೆ.

ಅನಂತರ ಅಥೆನ್ಸ್‌ನ ಶತ್ರುವಾಗಿ ಬದಲಾದ ಸ್ಪಾರ್ಟಾ ಮತ್ತು ಸ್ಪಾರ್ಟಾದೊಂದಿಗೆ ಮೈತ್ರಿ ಮಾಡಿಕೊಂಡ ಕೆಲವು ನಗರ ರಾಷ್ಟ್ರಗಳು ಸೇರಿಕೊಂಡು ಅಥೆನ್ಸ್‌ನ ಮೇಲೆ ದಾಳಿ ಮಾಡಿದವು. ಪೆಲೋಪೊನೀಶಿಯನ್ ಯುದ್ಧಗಳು ಎಂದು

ಕರೆಯಲ್ಪಡುವ ಈ ಯುದ್ಧದಲ್ಲಿ ಸ್ಪಾರ್ಟಾ ಗೆಲುವನ್ನು ಪಡೆಯಿತು.

## ಮ್ಯಾರಥಾನ್ ಓಟ

ಗ್ರೀಕೋ-ಪರ್ಶಿಯನ್ ಯುದ್ಧದ ಸಮಯದಲ್ಲಿ ಅಥೆನ್ಸ್‌ನಿಂದ 26 ಮೈಲಿಗಳಷ್ಟು ದೂರದಲ್ಲಿರುವ ಮ್ಯಾರಥಾನ್‌ನಲ್ಲಿ ಗ್ರೀಕರು ಮತ್ತು ಪರ್ಶಿಯನ್ನರು ಪರಸ್ಪರ ಹೋರಾಡಿದರು. ಯುದ್ಧದಲ್ಲಿ ಗ್ರೀಕರು ಗೆದ್ದರು. ವಿಜಯದ ಸುದ್ದಿಯನ್ನು ತಿಳಿಸಲು ಅಥೆನ್ಸ್‌ಗೆ ಒಬ್ಬ ಸಂದೇಶವಾಹಕನನ್ನು ಕಳುಹಿಸಲಾಯಿತು. ಅಷ್ಟು ದೂರವನ್ನು ಓಡಿ ಹೋಗಿ ಅವನು ಖುಷಿಯಿಂದ “ಸಂತೋಷದಿಂದ ಹಿಗ್ಗಿರಿ ನಾವು ಗೆದ್ದಿದ್ದೇವೆ” ಎಂದು ಕೂಗಿದನು. ಆದರೆ ಅಷ್ಟು ದೂರ ಓಡಿದ ಪರಿಣಾಮವಾಗಿ ಅವನು ಅಲ್ಲೇ ಸಾವನ್ನಪ್ಪಿದನು. ಈ ಓಟದ ನೆನಪಿಗಾಗಿ ದೂರದ ಓಟಕ್ಕೆ ಮ್ಯಾರಥಾನ್ ಓಟ ಎಂದು ಹೆಸರಿಡಲಾಗಿದೆ.

## ಹೆರೊಡೋಟಸ್ ಮತ್ತು ಥುಸಿಡೈಡ್ಸ್


ಹೆರೊಡೋಟಸ್

‘ದಿ ಹಿಸ್ಟರಿಸ್’ ಎಂಬುದು ಗ್ರೀಕೋ-ಪರ್ಶಿಯನ್ ಯುದ್ಧಗಳ ಕಥಾ ವಸ್ತುವಿನ ಮೇಲೆ ರಚಿತವಾದ ಕೃತಿಯಾಗಿದೆ. ಇದು ಜಗತ್ತಿನ ಮೊದಲ ಐತಿಹಾಸಿಕ ಕೃತಿಯಾಗಿದೆ. ಇತಿಹಾಸದ ಪಿತಾಮಹ ಎಂದು ಕರೆಯಲ್ಪಡುವ ಹೆರೊಡೋಟಸ್ ಈ ಕೃತಿಯನ್ನು ರಚಿಸಿದ್ದಾರೆ. ಸ್ಪಾರ್ಟಾ ಮತ್ತು ಅಥೆನ್ಸ್‌ನ ಮಧ್ಯೆ ನಡೆದ ಪೆಲೋಪೊನೀಶಿಯನ್ ಯುದ್ಧಗಳ ಇತಿಹಾಸವನ್ನು ಥುಸಿಡೈಡ್ಸ್ ಎನ್ನುವ ಇತಿಹಾಸಕಾರರು ದಾಖಲಿಸಿದ್ದಾರೆ. ‘ಹಿಸ್ಟರಿ ಆಫ್ ಪೆಲೋಪೊನೀಶಿಯನ್ ವಾರ್’ ಎಂಬುದು ಆ ಕೃತಿಯ ಹೆಸರಾಗಿದೆ.


ಥುಸಿಡೈಡ್ಸ್

## ಗ್ರೀಕ್ ತತ್ವಜ್ಞಾನಿಗಳು

ಸಾಕ್ರೆಟಿಸ್, ಪ್ಲೇಟೋ ಮತ್ತು ಅರಿಸ್ಟಾಟಲ್ ಪ್ರಪಂಚದ ಮೇಲೆ ಪ್ರಭಾವ ಬೀರಿದ ಪ್ರಧಾನ ಗ್ರೀಕ್ ತತ್ವಜ್ಞಾನಿಗಳಾಗಿದ್ದಾರೆ.

**ಗ್ರೀಕ್ ತತ್ವಜ್ಞಾನಿಗಳು**


**ಸಾಕ್ರೆಟಿಸ್** (Socrates)

- ‘ಜ್ಞಾನವೇ ಒಳಿತಂ’ ಎಂಬ ತತ್ವವನ್ನು ಒತ್ತಿ ಹೇಳಿದರು.
- ಸಂವಾದ ರೀತಿಯ (Socratic Method ಮೂಲಕ ಆಶಯಗಳನ್ನು ಪ್ರಚುರಪಡಿಸಿದರು.


**ಪ್ಲೇಟೋ** (Plato)

- ಸಾಕ್ರೆಟಿಸ್‌ನ ಶಿಷ್ಯರಾಗಿದ್ದರು.
- ‘ಅಕಾಡೆಮಿ’ ಎಂಬ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದರು.
- ಪ್ರಮುಖ ಕೃತಿ ‘ರಿಪಬ್ಲಿಕ್’


**ಅರಿಸ್ಟಾಟಲ್** (Aristotle)

- ಪ್ಲೇಟೋನ ‘ಅಕಾಡೆಮಿ’ಯಲ್ಲಿ ವಿದ್ಯಾರ್ಥಿಯಾಗಿದ್ದರು.
- ‘ಲೈಸಿಯಂ’ ಎಂಬ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದರು.
- ‘ಪೊಲಿಟಿಕ್ಸ್’ ಎಂಬ ಗ್ರಂಥವನ್ನು ರಚಿಸಿದರು.

ಹೋಮರ್‌ನ ಕಾವ್ಯಗಳಾದ 'ಇಲಿಯಡ್' ಮತ್ತು 'ಒಡಿಸ್ಸಿ' ಎಂಬಿವುಗಳಿಂದ ಪ್ರಾಚೀನ ಗ್ರೀಕ್ ಸಂಸ್ಕೃತಿಯ ಬಗ್ಗೆ ಮಾಹಿತಿಯು ಲಭಿಸುತ್ತದೆ.

### ಇಲಿಯಡ್

'ಇಲಿಯಡ್' ಟ್ರಾಯ್ ನಗರದ ವಿರುದ್ಧ ಗ್ರೀಕರು ನಡೆಸಿದ ಯುದ್ಧದ ಕಥೆಯಾಗಿದೆ. ಟ್ರಾಯ್ ನಗರದೊಂದಿಗೆ ಅನೇಕ ವರ್ಷಗಳ ಯುದ್ಧದ ನಂತರವೂ ಗ್ರೀಕ್ ಸೈನ್ಯವು ವಿಜಯಶಾಲಿಯಾಗಲಿಲ್ಲ. ಅವರು ಒಂದು ದೊಡ್ಡ ಮರದ ಕುದುರೆಯನ್ನು ನಿರ್ಮಿಸಿ, ಅತ್ಯುತ್ತಮ ಹೋರಾಟಗಾರರನ್ನು ಆ ಮರದ ಕುದುರೆಯ ಒಳಗೆ ಇರಿಸಿದ ಅನಂತರ ಅದನ್ನು ಟ್ರಾಯ್ ನಗರದ ಬೀದಿಯಲ್ಲಿ ತ್ಯಜಿಸಿ ಹಿಂದೆ ಸರಿದರು. ಸೋಲು ಒಪ್ಪಿಕೊಂಡ ಗ್ರೀಕರು ನೀಡಿದ ಬಹುಮಾನವೇ ಈ ಮರದ ಕುದುರೆ ಎಂದು ಟ್ರೋಜನ್‌ಗಳು ತಿಳಿದುಕೊಂಡರು. ಗೆಲುವಿನ ಉನ್ಮಾದದಲ್ಲಿ ಆ ಮರದ ಕುದುರೆಯನ್ನು ನಗರದೊಳಗೆ ಎಳೆದೊಯ್ದರು. ರಾತ್ರಿ ಎಲ್ಲರೂ ನಿದ್ರಿಸಿದ ಹೊತ್ತಿಗೆ ಕುದುರೆಯ ಒಳಗಿನಿಂದ ಸೈನಿಕರು ಹೊರಗಿಳಿದರು. ಕಡಲಿನಲ್ಲಿ ಅಡಗಿ ನಿಂತಿದ್ದ ಗ್ರೀಕರ ಹಡಗುಗಳೂ ಟ್ರಾಯ್ ನಗರಕ್ಕೆ ಮುನ್ನುಗ್ಗಿತು. ಸೂರ್ಯೋದಯದ ಹೊತ್ತಿಗೆ ಟ್ರಾಯ್ ನಗರವು ನಾಮಾವಶೇಷವಾಯಿತು.

ಇತಿಹಾಸ, ತತ್ವಶಾಸ್ತ್ರ, ಸಾಹಿತ್ಯ ಎಂಬೀ ವಲಯಗಳಲ್ಲಿ ಕೊಡುಗೆಯನ್ನು ನೀಡಿದ ಗ್ರೀಕರ ಚಿತ್ರಗಳನ್ನು ಮತ್ತು ಮಾಹಿತಿಗಳನ್ನು ಸೇರಿಸಿ ಒಂದು ಭಿತ್ತಿಪತ್ರಿಕೆಯನ್ನು ತಯಾರಿಸಿರಿ.

## ಪರ್ಷಿಯನ್ ಸಾಮ್ರಾಜ್ಯ



ಸ್ನೇಹಿತರೇ....ನಮ್ಮ ದೇಶವಾದ ಇರಾನ್ ಪರ್ಷಿಯನ್ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಆ ಸಮಯದಲ್ಲಿ ಅಸ್ತಿತ್ವದಲ್ಲಿದ್ದ ಸಾಮ್ರಾಜ್ಯಗಳಲ್ಲಿ ಪರ್ಷಿಯನ್ ಸಾಮ್ರಾಜ್ಯವು ಪ್ರಮುಖವಾಗಿತ್ತು. ವಿಭಿನ್ನವಾದ ಭೂಪ್ರದೇಶಗಳು ಸಾಮ್ರಾಜ್ಯದ ಭಾಗವಾಗಿದ್ದುದರಿಂದಾಗಿ ಪರ್ಷಿಯನ್ ಸಾಮ್ರಾಜ್ಯವು ವೈವಿಧ್ಯಮಯ ಸಂಸ್ಕೃತಿಗಳು, ಭಾಷೆಗಳು ಮತ್ತು ಸಂಪ್ರದಾಯಗಳ ಮಿಶ್ರಣವಾಗಿತ್ತು. ಏಕೆಂದರೆ ವಿವಿಧ ಪ್ರದೇಶಗಳು ಈ ಸಾಮ್ರಾಜ್ಯದ ಭಾಗವಾಗಿದ್ದವು. ಪರ್ಸೆಪೊಲಿಸ್ ಈ ಸಾಮ್ರಾಜ್ಯದ ರಾಜಧಾನಿಯಾಗಿತ್ತು.



ಪರ್ಸೆಪೋಲಿಸ್

ಇರಾನಿನ ಪ್ರತಿನಿಧಿಯಾಗಿ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ಜಹಾನ್ ಅವರ ವಿವರಣೆಯನ್ನು ಗಮನಿಸಿದಿರಲ್ಲವೆ.

ಈ ವಿವರಣೆಯಿಂದ ನಾವು ಯಾವೆಲ್ಲಾ ಮಾಹಿತಿಗಳನ್ನು ಪಡೆಯುತ್ತೇವೆ?

- 
- 

ಸೈರಸ್, ಒಂದನೆಯ ಡೇರಿಯಸ್ ಮತ್ತು ಸೆರ್ಕ್‌ಸಿಸ್ ಪರ್ಶಿಯನ್ ಸಾಮ್ರಾಜ್ಯದ ಪ್ರಮುಖ ಆಡಳಿತಗಾರರಾಗಿದ್ದರು.

**ಪರ್ಷಿಯನ್ ಆಡಳಿತ ವ್ಯವಸ್ಥೆ**

- ಆಡಳಿತಾತ್ಮಕ ಅನುಕೂಲಕ್ಕಾಗಿ ವಿಶಾಲ ಸಾಮ್ರಾಜ್ಯವನ್ನು ಹಲವಾರು ಸತ್ರಪಿ (ಪ್ರಾಂತ್ಯ)ಗಳಾಗಿ ವಿಂಗಡಿಸಲಾಗಿತ್ತು.
- ಇವುಗಳು 'ಸತ್ರಾಪ್' ಎಂದು ಕರೆಯಲ್ಪಡುವ ರಾಜ್ಯಪಾಲರ ಅಧೀನದಲ್ಲಿದ್ದವು.
- ಸತ್ರಾಪ್‌ಗಳು ರಾಜನ ಕಾನೂನುಗಳನ್ನು ಮತ್ತು ತೆರಿಗೆ ಪದ್ಧತಿಗಳನ್ನು ಸತ್ರಪಿಗಳಲ್ಲಿ ಜಾರಿಗೊಳಿಸಿದರು.

## ಜರಾತುಷ್ಟ್ರನ ತತ್ವದರ್ಶನ

ಜರಾತುಷ್ಟ್ರನ ತತ್ವದರ್ಶನವು ಪರ್ಷಿಯಾದಲ್ಲಿ ಹುಟ್ಟಿಕೊಂಡಿತು.

**ಜರಾತುಷ್ಟ್ರನ ತತ್ವದರ್ಶನ**

- ಜರಾತುಷ್ಟ್ರನು ಸ್ಥಾಪಕ
- 'ಅಹುರ ಮಜ್ದ' (Ahura-Mazda) ಎಂಬ ಏಕ ದೇವರಲ್ಲಿ ನಂಬಿಕೆ
- 'ಝೆಂಡ್ ಅವೆಸ್ಥಾ' ಧಾರ್ಮಿಕ ಗ್ರಂಥವಾಗಿತ್ತು.

ಪರ್ಷಿಯನ್ ಸಾಮ್ರಾಜ್ಯ ಮತ್ತು ಅದರ ಸಂಸ್ಕೃತಿಯ ಬಗ್ಗೆ ರಸಪ್ರಶ್ನೆಯೊಂದನ್ನು ಆಯೋಜಿಸಲು ಪ್ರಶ್ನೆಗಳನ್ನು ಮತ್ತು ಉತ್ತರಗಳನ್ನು ತಯಾರಿಸಿರಿ.

## ರೋಮ್ ಸಾಮ್ರಾಜ್ಯ



ಹಾಯ್ ಗೆಳೆಯರೇ... ನನ್ನ ಹೆಸರು ಎಲಿನಾ. ನನ್ನ ದೇಶವಾದ ಇಟಲಿಯು ರೋಮ್ ಸಾಮ್ರಾಜ್ಯದ ಭಾಗವಾಗಿತ್ತು. ರೋಮ್ ನಗರವನ್ನು ಪಾಶ್ಚಿಮಾತ್ಯ ನಾಗರಿಕತೆಯ ಜನ್ಮಸ್ಥಳವೆಂದು ಪರಿಗಣಿಸಲಾಗಿದೆ. 'ಎಲ್ಲಾ ರಸ್ತೆಗಳು ರೋಮ್‌ನ ಕಡೆಗೆ' ಎಂಬ ಉಕ್ತಿಯೇ ಈ ಸಾಮ್ರಾಜ್ಯದ ಮಹತ್ವವನ್ನು ಸೂಚಿಸುತ್ತದೆ. ಆರಂಭಿಕ ದಿನಗಳಲ್ಲಿ ರೋಮ್‌ನಲ್ಲಿ ರಾಜಪ್ರಭುತ್ವವು ನೆಲೆ ನಿಂತಿತ್ತು. ಆದರೆ ಕಾಲಕ್ರಮೇಣ ಪ್ರಜೆಗಳ ಹಿತ ಕಾಪಾಡದ ಆಡಳಿತಗಾರರ ವಿರುದ್ಧ ಬಂಡಾಯವೆದ್ದು ಬಿ. ಸಿ. ಇ 6 ನೇ ಶತಮಾನದಲ್ಲಿ ರಾಜಮನೆತನಗಳ ಆಳ್ವಿಕೆಯು ಕೊನೆಗೊಂಡಿತು. ಆಗ ರೋಮ್‌ನಲ್ಲಿ 'ರಿಪಬ್ಲಿಕ್' ಎಂಬ ಹೊಸ ಆಡಳಿತ ವ್ಯವಸ್ಥೆ ಜಾರಿಗೆ ಬಂದಿತು. ಗಣರಾಜ್ಯದ ಉದಯವು ಪ್ರಾಚೀನ ರೋಮ್ ಇತಿಹಾಸದಲ್ಲಿ ಒಂದು ಪ್ರಧಾನ ತಿರುವಾಗಿದೆ.

ಪ್ರಾಚೀನ ರೋಮ್‌ನ ಕುರಿತು ಎಲಿನಾ ನೀಡಿದ ಮಾಹಿತಿಯಿಂದ ವಿವರಣೆಯೊಂದನ್ನು ತಯಾರಿಸಿರಿ.

- ರೋಮ್ ನಗರವನ್ನು ಪಾಶ್ಚಿಮಾತ್ಯ ನಾಗರಿಕತೆಯ ಜನ್ಮಸ್ಥಳವೆಂದು ಪರಿಗಣಿಸಲಾಗಿದೆ.
- 
- 
- 

ಗಣರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಆಡಳಿತದ ಜವಾಬ್ದಾರಿಯು ರಾಜನಿಗೆ ಬದಲಾಗಿ 'ಕೋನ್ಸಲ್' ಎಂದು ಕರೆಯಲಾಗುತ್ತಿದ್ದ ಚುನಾಯಿತ ಅಧಿಕಾರಿಗಳಿಗಾಗಿತ್ತು. ಬಿ.ಸಿ.ಇ. 1ನೇ ಶತಮಾನದಲ್ಲಿ ರೋಮನ್ ಗಣರಾಜ್ಯದ 'ಕೋನ್ಸಲ್' ಸ್ಥಾನವನ್ನು ಹೊಂದಿದ್ದ ಜೂಲಿಯಸ್ ಸೀಸರ್ ಗಣರಾಜ್ಯ ಸ್ವರೂಪದ ಆಡಳಿತವನ್ನು ಕೊನೆಗೊಳಿಸಿ ಸರ್ವಾಧಿಕಾರಿಯಾಗಿ ಅಧಿಕಾರವನ್ನು ವಹಿಸಿಕೊಂಡನು.



ಚಿತ್ರ 2.1
**ಜೂಲಿಯಸ್ ಸೀಸರ್**



ಚಿತ್ರ 2.2
**ಅಗಸ್ಟಸ್**

ಆಗಸ್ಟಸ್‌ನ ಆಳ್ವಿಕೆಯ ಕಾಲದಲ್ಲಿ ರೋಮನ್ ಗಣರಾಜ್ಯವು ಸಂಪೂರ್ಣವಾಗಿ ರೋಮನ್ ಸಾಮ್ರಾಜ್ಯವಾಗಿ ಬದಲಾಯಿತು. ಇದರೊಂದಿಗೆ ಚಕ್ರವರ್ತಿಯು ಸರ್ವೋಚ್ಚ ಆಡಳಿತಗಾರನಾಗಿ ಬದಲಾದನು.

**ರೋಮನ್ ಸಾಮ್ರಾಜ್ಯದ ವಿಶೇಷತೆಗಳು**

- ಇದು ಯುರೋಪ್, ಉತ್ತರ ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾವನ್ನು ವ್ಯಾಪಿಸಿದ ವಿಶಾಲವಾದ ಸಾಮ್ರಾಜ್ಯವಾಗಿತ್ತು.
- ರೋಮ್‌ನ ಚಕ್ರವರ್ತಿಗಳು 'ಪ್ರಿನ್ಸೆಪ್' (ಪ್ರಥಮ ಪ್ರಜೆ) ಎಂದು ಕರೆಯಲ್ಪಡುತ್ತಿದ್ದರು.
- 'ಪ್ರಿನ್ಸೆಪ್' ಮುಖ್ಯಸ್ಥನಾಗಿದ್ದ ರೋಮನ್ ಆಡಳಿತ ವ್ಯವಸ್ಥೆಯು 'ಪ್ರಿನ್ಸಿಪೇಟ್' ಎಂದು ಕರೆಯಲ್ಪಟ್ಟಿತು.
- 'ಆಗಸ್ಟಸ್‌ನು ರೋಮನ್ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಾದ 'ಪ್ರಿನ್ಸಿಪೇಟ'ನ್ನು ಸ್ಥಾಪಿಸಿದನು.
- ವೇತನ ಪಡೆದು ಸೇವೆ ಸಲ್ಲಿಸುವ ಪ್ರಬಲವಾದ ಸೈನ್ಯವಿತ್ತು.

## ರೋಮಿನ ಸಾಂಸ್ಕೃತಿಕ ಕೊಡುಗೆಗಳು

ಭಾಷೆ, ಸಾಹಿತ್ಯ, ಕಲೆ ಮತ್ತು ನಗರ ಯೋಜನೆ ಮೊದಲಾದ ಕ್ಷೇತ್ರಗಳಲ್ಲಿ ರೋಮನ್ ಕೊಡುಗೆಗಳು ಇಂದಿಗೂ ನೆಲೆ ನಿಂತಿವೆ. ನೀರಾವರಿಗಾಗಿ ನಿರ್ಮಿಸಲಾದ ಕಮಾನು ಆಕೃತಿಯ ಕಾಲುವೆಗಳಾದ ಅಕ್ವಿಡೆಕ್ಟ್‌ಗಳೂ, ವಿಶಾಲವಾದ ತೆರೆದ ಸಭಾಂಗಣವಾದ

ಕಲೋಸಿಯಂ ಇತ್ಯಾದಿ ರೋಮ್ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆಗಳಾಗಿವೆ.



ಚಿತ್ರ 2.3 **ಅಕ್ವಿಡೆಕ್ಟ್**



ಚಿತ್ರ 2.3 **ಕೊಲೊಸಿಯಂ**

ರೋಮ್‌ನಲ್ಲಿ ನೆಲೆ ನಿಂತಿದ್ದ ಬೇರೆ ಬೇರೆ ಆಡಳಿತ ವ್ಯವಸ್ಥೆಗಳ ಕುರಿತು ಟಿಪ್ಪಣಿ ತಯಾರಿಸಿರಿ.



## ಭಾರತದಲ್ಲಿ ರಾಷ್ಟ್ರ ರೂಪೀಕರಣ

ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ ವಿವಾನ್‌ನ ವಿವರಣೆಯನ್ನು ಗಮನಿಸಿರಿ.



ನಾನು ವಿವಾನ್ ಭಾರತವನ್ನು ಪ್ರತಿನಿಧೀಕರಿಸಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ಸಿಂಧೂ ನದಿ ಮತ್ತು ಇತರ ಉಪನದಿಗಳ ತೀರಗಳಲ್ಲಿ ನೆಲೆನಿಂತಿದ್ದ ಹರಪ್ಪ ಸಂಸ್ಕೃತಿಯ ಕುರಿತು ನೀವು ಕೇಳಿರಬಹುದಲ್ಲವೇ? ಹರಪ್ಪನಾಗರಿಕತೆಯ ಅವನತಿಯ ಅನಂತರ ಅಂದಾಜು ಬಿ.ಸಿ.ಇ. 1500 ರಲ್ಲಿ ಆರ್ಯರು ಭಾರತ ಉಪಭೂಖಂಡದ ವಾಯುವ್ಯದಲ್ಲಿರುವ ಸಪ್ತಸಿಂಧೂ ಪ್ರದೇಶಗಳಲ್ಲಿ ವಾಸವನ್ನು ಆರಂಭಿಸಿದರು. ಆ ಕಾಲದಲ್ಲಿ ರಚಿಸಲ್ಪಟ್ಟ ವೇದಗಳಿಂದ ಇವರ ಕುರಿತು ನಮಗೆ ಮಾಹಿತಿಗಳು ಲಭಿಸುತ್ತವೆ. ವೇದಗಳು ರಚಿಸಲ್ಪಟ್ಟ ಈ ಕಾಲಘಟ್ಟವನ್ನು ವೇದಕಾಲ ಎನ್ನುತ್ತಾರೆ. ಅನಂತರದ ವೇದಕಾಲದಲ್ಲಿ ಆರ್ಯರು ಸಪ್ತಸಿಂಧೂ ಪ್ರದೇಶದಿಂದ ಗಂಗಾ ಮತ್ತು ಅದರ ಪೋಷಕ ನದಿಗಳ ತೀರಗಳಿಗೆ ಬಂದು ಸೇರಿದರು. ಕಬ್ಬಿಣದ ಸಂಶೋಧನೆ ಮತ್ತು ಉಪಯೋಗವು ಕೃಷಿಯು ವಿಸ್ತರಿಸಲು ಮತ್ತು ಆ ಮೂಲಕ ಉತ್ಪಾದನೆಯು ಹೆಚ್ಚಾಗಲು ಕಾರಣವಾಯಿತು. ಹೆಚ್ಚಾದ ಉತ್ಪಾದನೆಯು ವ್ಯಾಪಾರ ಕೇಂದ್ರಗಳ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟಿತು. ಈ ವ್ಯಾಪಾರ ಕೇಂದ್ರಗಳು ಮುಂದೆ ನಗರಗಳಾಗಿ ಬದಲಾದವು. ಈ ನಗರಗಳನ್ನು ಕೇಂದ್ರೀಕರಿಸಿ ಜನಪದಗಳು ರೂಪುಗೊಂಡವು.

ವಿವಾನ್ ಪುರಾತನ ಭಾರತದ ಇತಿಹಾಸದ ಕುರಿತು ನೀಡಿದ ವಿವರಣೆಯನ್ನು ಕೇಳಿದಿರಲ್ಲವೇ? ಇದರಿಂದ ಭಾರತದ ಜನಪದಗಳ ಬೆಳವಣಿಗೆಯನ್ನು ತಿಳಿಸುವ ಇತಿಹಾಸದ ದಾರಿಗಳನ್ನು ಕಂಡುಹಿಡಿದು ಕೆಳಗೆ ಕೊಟ್ಟಿರುವ ವರ್ಕ್‌ಶೀಟ್‌ನ್ನು ಪೂರ್ತಿಗೊಳಿಸಿರಿ.

## ವರ್ಕ್‌ಶೀಟ್




## ಜನಪದಗಳಿಂದ ಮಹಾಜನಪದಗಳೆಡೆಗೆ

ಪ್ರಾಚೀನ ಭಾರತದಲ್ಲಿ ರೂಪುಗೊಂಡ ನಗರಗಳನ್ನು ಕೇಂದ್ರೀಕರಿಸಿ ಜನಪದಗಳು ರೂಪುಗೊಂಡಿರುವುದು ಕಂಡುಬರುತ್ತದೆ. ಫಲವತ್ತಾದ ನದಿ ತೀರಗಳು, ಸಮೃದ್ಧವಾದ ಕಾಡುಗಳು ಕೆಲವು ಜನಪದಗಳನ್ನು ಹೆಚ್ಚು ಬಲಿಷ್ಠಗೊಳಿಸಿದುವು. ನೆರೆಯ ಜನಪದಗಳನ್ನು ವಶಪಡಿಸಿಕೊಂಡ ಪ್ರಬಲವಾದ ಜನಪದಗಳು ಮಹಾಜನಪದಗಳಾಗಿ ಅಭಿವೃದ್ಧಿ ಹೊಂದಿದವು. ಮಹಾ ಜನಪದಗಳ ಕಾಲವನ್ನು ಭಾರತದ 'ಎರಡನೇ ನಗರೀಕರಣ' ಎಂದು ಕರೆಯಲಾಗುತ್ತದೆ.

## ಮಗಧ ಪ್ರಬಲ ಶಕ್ತಿಯಾಗುತ್ತದೆ

ಬಿ.ಸಿ.ಇ. 6ನೇ ಶತಮಾನದಲ್ಲಿ ಭಾರತದಲ್ಲಿ ಅಸ್ತಿತ್ವದಲ್ಲಿದ್ದ 16 ಮಹಾಜನಪದಗಳಲ್ಲಿ ಮಗಧವು ಪ್ರಬಲ ಶಕ್ತಿಯಾಯಿತು.

### ಜನಪದಗಳು

'ಜನಪದ' ಎಂದರೆ ಜನರು ವಾಸಿಸುವ ಸ್ಥಳ ಎಂದರ್ಥ. ಸಂಪನ್ಮೂಲಗಳು ಲಭ್ಯವಿರುವ ಪ್ರದೇಶಗಳಲ್ಲಿ, ಕೃಷಿಜಮೀನುಗಳು ಮತ್ತು ವಸತಿ ಪ್ರದೇಶವನ್ನು ರೂಪಿಸಿದ ಜನರು ಅಲ್ಲಿ ಶಾಶ್ವತವಾಗಿ ನೆಲೆಸಿದರು. ಹೀಗೆ ಜನಪದಗಳು ರೂಪಗೊಂಡವು.

### ಹದಿನಾರು ಮಹಾ ಜನಪದಗಳು

ಕಾಂಬೋಜ, ಗಾಂಧಾರ, ಮಗಧ, ಅಂಗ, ವಜ್ಜಿ, ಮಲ್ಲ, ಕಾಶಿ, ವತ್ಸ, ಕೋಸಲ, ಚೇದಿ, ಪಾಂಚಾಲ, ಅಶ್ಮಕ, ಅವಂತಿ, ಸುರಸೇನ, ಕುರು, ಮತ್ಸ್ಯ ಇವುಗಳು ಮಹಾ ಜನಪದಗಳಾಗಿವೆ.




ಭೂಪಟ 2.2 - **ಮಹಾಜನಪದಗಳಲ್ಲಿ ಪ್ರಬಲ ಶಕ್ತಿಯಾಗಿದ್ದ ಮಗಧ**

ಭೂಪಟ 2.2 ನ್ನು ನಿರೀಕ್ಷಣೆ ಮಾಡಿ ಮಗಧದ ಸ್ಥಾನವನ್ನು ಕಂಡುಹಿಡಿಯಿರಿ.

ಮಗಧವು ಪ್ರಬಲವಾದ ಒಂದು ಮಹಾಜನಪದವಾಗಲು ಸಹಾಯಕವಾದ ಘಟಕಗಳು ಯಾವುವೆಂದು ನೋಡೋಣ.




ಆರಂಭದಲ್ಲಿ ರಾಜಗೃಹ (ಬಿಹಾರದ ರಾಜಗೀರ್) ಮತ್ತು ಅನಂತರ ಪಾಟಲೀಪುತ್ರ (ಪಾಟ್ನಾ) ಮಗಧದ ರಾಜಧಾನಿಗಳಾಗಿದ್ದವು.

## ಮೌರ್ಯ ಸಾಮ್ರಾಜ್ಯ

ಬಿ.ಸಿ.ಇ. 321 ರಲ್ಲಿ ಮಗಧದ ಆಡಳಿತಗಾರನಾಗಿದ್ದ ಧನನಂದನನ್ನು ಸೋಲಿಸಿ ಚಂದ್ರಗುಪ್ತ ಮೌರ್ಯನು ಮಗಧದ ಅಧಿಕಾರವನ್ನು ವಶಪಡಿಸಿಕೊಂಡನು. ಚಂದ್ರಗುಪ್ತ ಮೌರ್ಯನು ಮಗಧದ ಜೊತೆಗೆ ನೆರೆಯ ಪ್ರದೇಶಗಳನ್ನು ಸೇರಿಸಿ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಮಗಧವನ್ನು

**ಮಗಧದ ಪ್ರಮುಖ ಆಡಳಿತಗಾರರು**

- ಬಿಂಬಿಸಾರ
- ಅಜಾತಶತ್ರು
- ಮಹಾಪದ್ಮನಂದ
- ಧನನಂದ

ವಿಶಾಲವಾದ ಮೌರ್ಯ ಸಾಮ್ರಾಜ್ಯವಾಗಿ ಪರಿವರ್ತಿಸಲು ಮತ್ತು ಉತ್ತಮ ಆಡಳಿತ ವ್ಯವಸ್ಥೆಯನ್ನು ರೂಪಿಸಲು ಚಂದ್ರಗುಪ್ತ ಮೌರ್ಯನಿಗೆ ಸಹಾಯ ಮಾಡಿರುವುದು ಅವನ ಮಂತ್ರಿಯಾಗಿದ್ದ ಕೌಟಿಲ್ಯ ಅಥವಾ ಚಾಣಾಕ್ಯನಾಗಿದ್ದಾನೆ.

ಮೌರ್ಯ ಸಾಮ್ರಾಜ್ಯದ ಉತ್ತಮ ಆಡಳಿತಗಾರನಾಗಿದ್ದ ಅಶೋಕನು ಕಾಶ್ಮೀರ ಮತ್ತು ಕಳಿಂಗವನ್ನು (ಇಂದಿನ ಒಡಿಶಾದ ಕರಾವಳಿ ಪ್ರದೇಶ) ವಶಪಡಿಸಿಕೊಂಡು ರಾಜ್ಯವನ್ನು ವಿಸ್ತರಿಸಿದನು. ನೀಡಿರುವ ನಕ್ಷೆಯಿಂದ ಮೌರ್ಯ ಸಾಮ್ರಾಜ್ಯದ ವಿಸ್ತೀರ್ಣವನ್ನು ಗಮನಿಸಿರಿ. (ನಕ್ಷೆ 3)




ಭೂಪಟ 2.3 - **ಅಶೋಕನ ಆಡಳಿತ ಕಾಲದಲ್ಲಿ ಮೌರ್ಯ ಸಾಮ್ರಾಜ್ಯ**

**ಕೌಟಿಲ್ಯನ ಅರ್ಥಶಾಸ್ತ್ರ**

ಕೌಟಿಲ್ಯನ 'ಅರ್ಥಶಾಸ್ತ್ರ'ದಿಂದ ನಮಗೆ ಮೌರ್ಯ ಸಾಮ್ರಾಜ್ಯದ ಬಗ್ಗೆ ಮಾಹಿತಿ ಸಿಗುತ್ತದೆ. ಈ ಕೃತಿಯು ರಾಜನು ಹೇಗೆ ಆಳಬೇಕು ಮತ್ತು ಸಾಮ್ರಾಜ್ಯದ ಪ್ರದೇಶವನ್ನು ಹೇಗೆ ವಿಸ್ತರಿಸಬೇಕು ಎಂಬುದನ್ನು ವಿವರಿಸುತ್ತದೆ. ದಾಳಿಗಳಿಂದ ದೇಶವನ್ನು ಹೇಗೆ ರಕ್ಷಿಸಬೇಕು ಮತ್ತು ತೆರಿಗೆಗಳನ್ನು ಹೇಗೆ ಸಂಗ್ರಹಿಸಬೇಕು ಎಂಬುದರ ಕುರಿತು ವಿಸ್ತೃತವಾದ ವಿವರಣೆಯನ್ನು ನೀಡುವ ಗ್ರಂಥ ಇದಾಗಿದೆ.

ಮಹಾ ಜನಪದವಾಗಿದ್ದ ಮಗಧವು ಪ್ರಬಲವಾದ ಮೌರ್ಯ ಸಾಮ್ರಾಜ್ಯವಾಗಿ ಹೇಗೆ ಬೆಳೆಯಿತು ಎಂಬುದರ ಬಗ್ಗೆ ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## ಪ್ರಾಚೀನ ಭಾರತದ ತತ್ವದರ್ಶನಗಳು

ಪ್ರಾಚೀನ ಭಾರತದಲ್ಲಿದ್ದ ಆರಂಭಿಕ ಕಾಲದ ರಾಷ್ಟ್ರ ರಚನೆಯ ಬಗ್ಗೆ ನಾವು ನೋಡಿದೆವಲ್ಲವೆ. ಇನ್ನು ನಾವು ಈ ಕಾಲಘಟ್ಟದಲ್ಲಿ ರೂಪುಗೊಂಡ ಕೆಲವು ತತ್ವದರ್ಶನಗಳನ್ನು ಪರಿಚಯಿಸಿಕೊಳ್ಳೋಣ.

### ಜೈನಮತ

ಜೈನ ಮತವು ಬಿ.ಸಿ.ಇ. 6ನೇ ಶತಮಾನದಲ್ಲಿ ಭಾರತದಲ್ಲಿ ಹುಟ್ಟಿಕೊಂಡ ತತ್ವದರ್ಶನವಾಗಿದೆ. ವರ್ಧಮಾನ ಮಹಾವೀರನು ಜೈನ ಮತವನ್ನು ಪ್ರಚಾರ ಮಾಡಿದನು. ಅವನು ಜೈನ ಮತದ 24ನೇ ತೀರ್ಥಂಕರನಾಗಿದ್ದನು. ಲೌಕಿಕ ಸುಖಗಳನ್ನು ಗೆದ್ದವನು ಎಂಬ ಅರ್ಥದಲ್ಲಿ ಅವನು 'ಜಿನ' ಎಂದು ಪ್ರಸಿದ್ಧನಾಗಿದ್ದನು.



ಚಿತ್ರ 2.5
**ವರ್ಧಮಾನ ಮಹಾವೀರ**

**ಜೈನ ಮತದ ಆಶಯಗಳು**

- ಎಲ್ಲಾ ವಸ್ತುಗಳಿಗೂ ಜೀವವಿದೆ.
- ಜೀವವಿರುವ ಯಾವುದನ್ನೂ ಹಿಂಸಿಸಬಾರದು.(ಅಹಿಂಸೆ)
- ಸುಳ್ಳು ಹೇಳಬಾರದು. ಕಳ್ಳತನ ಮಾಡಬಾರದು.
- ಸರಿಯಾದ ನಂಬಿಕೆ, ಸರಿಯಾದ ಜ್ಞಾನ, ಸರಿಯಾದ ನಡತೆ(ತ್ರಿರತ್ನಗಳು) ಎಂಬಿವುಗಳನ್ನು ಆಚರಿಸಿರಿ.

**ತೀರ್ಥಂಕರರು**

ತೀರ್ಥಂಕರ ಪದದ ಅರ್ಥ ತಪಸ್ಸಿನ ಮೂಲಕ ಜ್ಞಾನವನ್ನು ಪಡೆದವರು ಎಂದಾಗಿದೆ.

ಜೈನ ಧರ್ಮದ ಪ್ರಕಾರ 24 ತೀರ್ಥಂಕರರು ಇದ್ದರು.

## ಬೌದ್ಧ ಮತ

ಬೌದ್ಧ ಮತವು ಪ್ರಾಚೀನ ಭಾರತದಲ್ಲಿ ರೂಪುಗೊಂಡ ಇನ್ನೊಂದು ಪ್ರಧಾನ ತತ್ವದರ್ಶನವಾಗಿದೆ. ಬೌದ್ಧ ಮತವನ್ನು ಗೌತಮ ಬುದ್ಧನು ಸ್ಥಾಪಿಸಿದನು. ಅವನ ನಿಜವಾದ ಹೆಸರು ಸಿದ್ಧಾರ್ಥ. ಅವನು ಬಿಹಾರದ ಬುದ್ಧ ಗಯಾದಲ್ಲಿ ಜ್ಞಾನೋದಯ ಪಡೆದು ಗೌತಮ ಬುದ್ಧ ಎಂದು ಪ್ರಸಿದ್ಧನಾದನು.



ಚಿತ್ರ 2.6
**ಗೌತಮ ಬುದ್ಧ**

**ಬೌದ್ಧಮತ ಸಿದ್ಧಾಂತಗಳು**

- ಹಿಂಸೆ ಮಾಡದಿರುವುದು.
- ಸುಳ್ಳು ಹೇಳದಿರುವುದು.
- ಸತ್ಯ ಸಂಧತೆಯನ್ನು ಪಾಲಿಸುವುದು.
- ಪರರ ಸೊತ್ತಿಗೆ ಆಸೆಪಡದಿರುವುದು.

ಜೈನಮತ ಮತ್ತು ಬೌದ್ಧಮತದ ಸಿದ್ಧಾಂತಗಳ ಸಾಮಾನ್ಯ ಅಂಶಗಳನ್ನು ವಿಶ್ಲೇಷಿಸಿರಿ.

### ಚಾರ್ವಾಕ ಸಿದ್ಧಾಂತ

ಚಾರ್ವಾಕ ಸಿದ್ಧಾಂತವು ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಮತ್ತೊಂದು ಪ್ರಧಾನ ತತ್ವದರ್ಶನವಾಗಿದೆ. ಈ ಸಿದ್ಧಾಂತವು 'ಲೋಕಾಯತ' ಎಂದು ತಿಳಿಯಲ್ಪಟ್ಟಿತು. 'ನಂಬಿಕೆ ಇಡು' ಎಂಬುದಕ್ಕಿಂತಲೂ 'ಅನ್ವೇಷಣೆ ಮಾಡಿ' ಎಂಬ ತತ್ವವನ್ನು ಚಾರ್ವಾಕ ಸಿದ್ಧಾಂತವು ಒತ್ತಿ ಹೇಳಿತು.

ಬಿ.ಸಿ.ಇ. 6ನೇ ಶತಮಾನದಿಂದ ಪ್ರಪಂಚದಾದ್ಯಂತ ಮಾನವ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ನವೀನ ದೃಷ್ಟಿಕೋನಗಳು ರೂಪುಗೊಳ್ಳಲು ಆರಂಭವಾದವು. ಈ ಅವಧಿಯಲ್ಲಿ ಪ್ರಪಂಚದ ವಿವಿಧ ಭಾಗಗಳಲ್ಲಿ ಉಂಟಾದ ರಾಜಕೀಯ-ತಾತ್ವಿಕವಾದ ಬೆಳವಣಿಗೆಗಳ ಬಗ್ಗೆ ನಾವು ಈ ಪಾಠದಲ್ಲಿ ಚರ್ಚಿಸಿದ್ದೇವೆ. ರಾಷ್ಟ್ರ ರಚನೆ, ಆಡಳಿತ ವ್ಯವಸ್ಥೆಗಳು, ಸಾಂಸ್ಕೃತಿಕ ಪ್ರಗತಿ ಮೊದಲಾದ ಕ್ಷೇತ್ರಗಳಲ್ಲಿ ಉಂಟಾದ ಬದಲಾವಣೆಗಳನ್ನು ನಾವು ಪರಿಚಯಿಸಿಕೊಂಡಿದ್ದೇವೆ. ರಾಷ್ಟ್ರ ಮತ್ತು ಆಡಳಿತ ವ್ಯವಸ್ಥೆಯ ವೈಶಿಷ್ಟ್ಯಗಳು ಮತ್ತು ವಿಶೇಷತೆಗಳು ಯಾವುವೆಂದು ಮುಂದಿನ ಪಾಠಗಳಿಂದ ತಿಳಿದುಕೊಳ್ಳೋಣ.

## ಮುಂದುವರಿದ ಚಟುವಟಿಕೆಗಳು

- ಆರಂಭಕಾಲದ ಗ್ರೀಸ್, ಇಟಲಿ, ಇರಾನ್ ಮತ್ತು ಭಾರತ ದೇಶಗಳನ್ನು ಜಾಗತಿಕ ಭೂಪಟದಲ್ಲಿ ಗುರುತಿಸಿ ಸಮಾಜ ವಿಜ್ಞಾನ ನಿರೀಕ್ಷಣಾ ಪುಸ್ತಕದಲ್ಲಿ ಸೇರಿಸಿರಿ.
- ಪುರಾತನ ಜಗತ್ತಿನ ರಾಷ್ಟ್ರ ನಿರ್ಮಾಣದ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ ಒಂದು ವಿಶೇಷಾಂಕ/ ಡಿಜಿಟಲ್ ಆಲ್ಬಂ ತಯಾರಿಸಿ.
- ವರ್ಧಮಾನ ಮಹಾವೀರ ಮತ್ತು ಗೌತಮ ಬುದ್ಧನಿಗೆ ಸಂಬಂಧಿಸಿದ ಕಥೆಗಳನ್ನು ಸಂಗ್ರಹಿಸಿ ಅದನ್ನು ಸಮಾಜ ವಿಜ್ಞಾನ ಕ್ಲಬ್‌ನಲ್ಲಿ ಪ್ರಸ್ತುತಪಡಿಸಿ.
- ಅಟ್ಲಾಸನ್ನು ನಿರೀಕ್ಷಣೆ ಮಾಡಿ ಆಧುನಿಕ ಭಾರತದಲ್ಲಿ ರಾಜ್‌ಗಿರಿ ಮತ್ತು ಪಾಟ್ನಾದ ಸ್ಥಾನವನ್ನು ಕಂಡುಹಿಡಿದು ಭಾರತದ ಭೂಪಟದಲ್ಲಿ ಇದನ್ನು ಗುರುತಿಸಿ ಸಮಾಜ ವಿಜ್ಞಾನ ನಿರೀಕ್ಷಣಾ ಪುಸ್ತಕದಲ್ಲಿ ಸೇರಿಸಿ.



# 3

# ರಾಷ್ಟ್ರ ಮತ್ತು ಸರಕಾರ




ಹಿಟ್ಲರ್‌ನ ಸೈನಿಕ ದಾಳಿಯಿಂದ ತನ್ನದೇ ದೇಶದಲ್ಲಿ ಒಂದು ಇಕ್ಕಟ್ಟಾದ ಕೋಣೆಯಲ್ಲಿ ಅಡಗಿಕೊಂಡು ಜೀವನ ನಡೆಸಬೇಕಾಗಿ ಬಂದ ಆನ್ ಫ್ರಾಂಕ್ ತನ್ನ ನೆಚ್ಚಿನ ಡೈರಿಯಾದ 'ಕಿಟ್ಟಿ'ಯಲ್ಲಿ ಬರೆದಿರುವ ಸಾಲುಗಳನ್ನು ಮೇಲೆ ಕೊಡಲಾಗಿದೆ.

ಇಲ್ಲಿ ಆನ್ ಫ್ರಾಂಕ್ ಏನನ್ನೆಲ್ಲಾ ಬಯಸುತ್ತಾಳೆ.

- ಸ್ವಾತಂತ್ರ್ಯದಿಂದ ಕೂಡಿದ ಬದುಕು
- ..........................................................
- ..........................................................
- ..........................................................

ನಿಮ್ಮ ಮಾತೃದೇಶವು ನಮಗೆ ಯಾವುದನ್ನೆಲ್ಲ ಖಾತರಿಪಡಿಸುತ್ತದೆ? ಚರ್ಚಿಸಿರಿ.

## ರಾಷ್ಟ್ರ ಮತ್ತು ಜನರು




ಮೇಲೆ ಕೊಟ್ಟಿರುವ ಕೋಲಾಷನ್ನು ನೋಡಿರಿ. ಇಲ್ಲಿ ಜನರ ಅಗತ್ಯಗಳನ್ನು ಪೂರೈಸಲು ಮತ್ತು ಅವರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ಯಾರು?

ರಾಷ್ಟ್ರವು ಜನರಿಗಾಗಿ ಯಾವ ಯಾವ ಸೇವೆಯನ್ನು ಒದಗಿಸುತ್ತದೆ.

- ಜನರ ಜೀವ ಮತ್ತು ಆಸ್ತಿಯ ರಕ್ಷಣೆ.
- 
- 
- 

ರಾಷ್ಟ್ರವು ಜನರಿಗೆ ಸ್ವತಂತ್ರವಾಗಿ ಮತ್ತು ಅಭಿಮಾನದಿಂದ ನಿರ್ಭಯರಾಗಿ ಬದುಕಲು ಸಹಾಯ ಮಾಡುವ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ರಾಷ್ಟ್ರದ ಇನ್ನಷ್ಟು ವೈಶಿಷ್ಟ್ಯಗಳನ್ನು ತಿಳಿಯೋಣ.

## ರಾಷ್ಟ್ರ ಎಂದರೇನು?

ರಾಷ್ಟ್ರವು ಜನರಿಂದ ರೂಪೀಕರಿಸಲ್ಪಟ್ಟ ಅತ್ಯಂತ ದೊಡ್ಡ ಸಾಮಾಜಿಕ ರಾಜಕೀಯ ಸಂಸ್ಥೆಯಾಗಿದೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಶಾಶ್ವತವಾಗಿ ವಾಸಿಸುವ ಮತ್ತು ಒಂದು ಸಾರ್ವಭೌಮ ಸರಕಾರವನ್ನು ಒಳಗೊಂಡ ಒಂದು ಜನತೆಯ ಗುಂಪು ಒಂದು ರಾಷ್ಟ್ರವಾಗಿದೆ. ಜನಸಂಖ್ಯೆ, ಭೂಪ್ರದೇಶ, ಸರಕಾರ, ಸಾರ್ವಭೌಮತ್ವ ಈ ಅಂಶಗಳಿಂದ ರಾಷ್ಟ್ರವು ರೂಪುಗೊಳ್ಳುತ್ತದೆ. ಕಾನೂನುಗಳನ್ನು ರಚಿಸುವುದು ಮತ್ತು ಜನರ ಕಲ್ಯಾಣವನ್ನು ಖಚಿತಪಡಿಸುವುದು ರಾಷ್ಟ್ರದ ಕರ್ತವ್ಯವಾಗಿದೆ. ರಾಷ್ಟ್ರವು ಜನರ ಹಕ್ಕುಗಳನ್ನು ಸಂರಕ್ಷಿಸುತ್ತದೆ ಮಾತ್ರವಲ್ಲದೆ ಜನರು ರಾಷ್ಟ್ರಕ್ಕೆ ಸಲ್ಲಿಸಬೇಕಾದ ಜವಾಬ್ದಾರಿಗಳನ್ನು ವ್ಯಾಖ್ಯಾನಿಸುತ್ತದೆ.

### ರಾಷ್ಟ್ರ ಮತ್ತು ರಾಜ್ಯಶಾಸ್ತ್ರ

ರಾಜ್ಯಶಾಸ್ತ್ರವು ರಾಷ್ಟ್ರದ ವೈಜ್ಞಾನಿಕ ಅಧ್ಯಯನವಾಗಿದೆ. ಪುರಾತನ ಗ್ರೀಸ್‌ನಲ್ಲಿ ಅರಿಸ್ಟಾಟಲನು ರಾಷ್ಟ್ರದ ಕುರಿತು ಅಧ್ಯಯನವನ್ನು ಆರಂಭಿಸಿದನು. ನಗರ - ರಾಷ್ಟ್ರಗಳು ರಾಷ್ಟ್ರಕ್ಕೆ ಸಂಬಂಧಿಸಿದ ಅಧ್ಯಯನದ ಮೂಲ ಘಟಕವಾಗಿತ್ತು. ರಾಷ್ಟ್ರಕ್ಕೆ ಸಂಬಂಧಿಸಿದ ಚಿಂತನೆಗಳನ್ನು ಪ್ರಾರಂಭಿಸಿದವರು ಗ್ರೀಕ್ ಚಿಂತಕರಾದ ಸಾಕ್ರೆಟಿಸ್, ಪ್ಲೇಟೋ, ಅರಿಸ್ಟಾಟಲ್ ಆಗಿದ್ದಾರೆ. 'ಪೊಲಿಟಿಕ್ಸ್' ಅಥವಾ ರಾಜಕೀಯ ಎಂಬ ಪದವನ್ನು ಮೊದಲಾಗಿ ಬಳಸಿದವರು ರಾಜ್ಯಶಾಸ್ತ್ರ ಪಿತಾಮಹ ಎಂದು ಕರೆಯಲ್ಪಡುವ ಅರಿಸ್ಟಾಟಲ್ ಆಗಿದ್ದಾರೆ. 'ಪೊಲಿಟಿಕ್ಸ್' ಅರಿಸ್ಟಾಟಲ್ ಅವರ ಪ್ರಸಿದ್ಧ ಗ್ರಂಥವಾಗಿದೆ.



ನಿಕೋಲೊ ಮ್ಯಾಕ್ಯವೆಲ್ಲಿ

### ರಾಷ್ಟ್ರ (State)

ನಗರ ರಾಷ್ಟ್ರಗಳನ್ನು ಸೂಚಿಸಲು ಗ್ರೀಕರು ಪೊಲಿಸ್(Polis) ಪದವನ್ನು ಬಳಸಿದರು ಮತ್ತು ರೋಮನರು ಸಿವಿಟಾಸ್(Civitas) ಎಂಬ ಪದವನ್ನು ಬಳಸಿದರು. ಇಟಲಿಯ ವಿದ್ವಾಂಸನಾದ ನಿಕೋಲೊ ಮ್ಯಾಕ್ಯವೆಲ್ಲಿ ಆಧುನಿಕ ಅರ್ಥದಲ್ಲಿ 'ಸ್ಟೇಟ್' (State) ಎಂಬ ಪದವನ್ನು ಮೊದಲು ಬಳಸಿದನು. ಜರ್ಮನಿಯ ಪ್ರಾಚೀನ ಬುಡಕಟ್ಟು ವಿಭಾಗಗಳಾದ ಟ್ಯುಟೋನ್‌ಗಳ ಎಡೆಯಲ್ಲಿ ಪ್ರಚಾರದಲ್ಲಿ ಇದ್ದ 'ಸ್ಟಾಟಸ್' ಎಂಬ ಪದದಿಂದ 'ಸ್ಟೇಟ್' ಎಂಬ ಇಂಗ್ಲಿಷ್ ಪದವು ರೂಪುಗೊಂಡಿದೆ.

ರಾಷ್ಟ್ರದ ಪ್ರತಿಯೊಂದು ಘಟಕಗಳನ್ನು ನಾವು ವಿವರವಾಗಿ ಪರಿಶೀಲಿಸೋಣ.

## ಜನಸಂಖ್ಯೆ (Population)



ಚಿತ್ರ 3.1 (ಎ)




ಚಿತ್ರ 3.1 (ಬಿ)

ಮೇಲೆ ನೀಡಿರುವ ಚಿತ್ರಗಳನ್ನು ನೋಡಿರಿ.

ಇವುಗಳಲ್ಲಿ ಒಂದು ಪೂರ್ಣ ಅರ್ಥದಲ್ಲಿ ಶಾಲೆಯಾಗಿರುವುದು ಯಾವುದು?

ಒಂದು ಶಾಲೆಯು ಶಾಲೆಯಾಗಿರಬೇಕಾದರೆ ಇತರ ಸೌಲಭ್ಯಗಳೊಂದಿಗೆ ಮಕ್ಕಳು, ಶಿಕ್ಷಕರು, ಮತ್ತು ಸಿಬ್ಬಂದಿ ವರ್ಗದವರು ಇರಬೇಕು. ಎಲ್ಲವೂ ಒಟ್ಟಾಗಿ ಕ್ರಿಯಾತ್ಮಕವಾಗಿ ಕೆಲಸ ಮಾಡಿದರೆ ಮಾತ್ರ ಶಾಲೆಯೆಂಬ ಪರಿಕಲ್ಪನೆಯು ಪೂರ್ಣಗೊಳ್ಳುತ್ತದೆ. ರಾಷ್ಟ್ರದ ವಿಷಯದಲ್ಲೂ ಇದುವೇ ಆಗಿದೆ.

ಜನರಿಲ್ಲದೆ ಒಂದು ರಾಷ್ಟ್ರಕ್ಕೆ ಅಸ್ತಿತ್ವವಿಲ್ಲ. ಆದರೆ ರಾಷ್ಟ್ರ ರಚನೆಗೆ ಅಗತ್ಯವಿರುವ ಜನಸಂಖ್ಯೆ ಎಷ್ಟು ಎಂಬುದನ್ನು ನಿರ್ಧರಿಸಲಾಗಿಲ್ಲ. ಒಂದು ರಾಷ್ಟ್ರದ ಜನಸಂಖ್ಯೆಯಲ್ಲಿ ವಿವಿಧ ಮತ, ವರ್ಗ, ವರ್ಣ ವಿಭಾಗಗಳು ಒಳಗೊಂಡಿರಬಹುದು. ಪರಸ್ಪರ ಅವಲಂಬನೆ, ಸಮಾನ ಆಸಕ್ತಿ ಮತ್ತು ಸಮಾನ ಚಿಂತನೆಯಿಂದ ಒಗ್ಗೂಡಿದಾಗ ಜನರು ರಾಷ್ಟ್ರದ ಭಾಗವಾಗುತ್ತಾರೆ.

ನಿಮಗೆ ಕಂಡುಹಿಡಿಯಬಹುದೇ?

ಅತಿ ಹೆಚ್ಚು ಜನಸಂಖ್ಯೆ ಇರುವ ದೇಶ : ..............................................

ಅತಿ ಕಡಿಮೆ ಜನಸಂಖ್ಯೆ ಇರುವ ದೇಶ : ..............................................

ವರ್ಕ್‌ಶೀಟ್ ಪೂರ್ತಿಗೊಳಿಸಿರಿ.

| ಕೆಳಗೆ ಕೊಟ್ಟಿರುವ ಹೇಳಿಕೆಗಳಲ್ಲಿ ಸರಿಯಾದುದಕ್ಕೆ 🙂 ತಪ್ಪಾದುದಕ್ಕೆ ☹️ ಬಿಡಿಸಿರಿ. | 🙂 | ☹️ |
|---|---|---|
| ರಾಷ್ಟ್ರ ರೂಪೀಕರಣಕ್ಕೆ ಅಗತ್ಯವಾಗಿರುವ ಜನಸಂಖ್ಯೆಯನ್ನು ಒಂದು ಲಕ್ಷ ಎಂದು ನಿಗದಿಪಡಿಸಲಾಗಿದೆ. | | |
| ಒಂದು ರಾಷ್ಟ್ರದ ಜನ ಸಂಖ್ಯೆಯಲ್ಲಿ ವಿವಿಧ ಮತ, ವರ್ಗ, ವಿಭಾಗಗಳು ಒಳಗೊಂಡಿವೆ. | | |
| ರಾಷ್ಟ್ರವು ಜನರಿಂದ ರೂಪುಗೊಂಡ ಅತಿದೊಡ್ಡ ರಾಜಕೀಯ ಸಂಸ್ಥೆಯಾಗಿದೆ. | | |
| ಒಂದು ರಾಷ್ಟ್ರವು ಜನರು ಇಲ್ಲದೆ ಅಸ್ತಿತ್ವದಲ್ಲಿರಬಹುದು. | | |

## ಭೂಪ್ರದೇಶ (Territory)




ಭೂಪಟ 3.1




ಭೂಪಟ 3.2

2011 ರಲ್ಲಿ ರೂಪುಗೊಂಡ ದಕ್ಷಿಣ ಸುಡಾನ್‌ನ ಭೂಪಟವನ್ನು ಮೇಲೆ ಕೊಡಲಾಗಿದೆ.

ದಕ್ಷಿಣ ಸುಡಾನ್ ಯಾವ ಭೂಖಂಡದಲ್ಲಿದೆ?

ಯಾವ ನದಿಯು ಈ ದೇಶವನ್ನು ಜಲಸಮೃದ್ಧಗೊಳಿಸಿದೆ?

ದಕ್ಷಿಣ ಸುಡಾನಿನ ಗಡಿಯಲ್ಲಿರುವ ದೇಶಗಳನ್ನು ಹುಡುಕಿ ಬರೆಯಿರಿ.

ಉತ್ತರ ________ ಪೂರ್ವ ________

ದಕ್ಷಿಣ ________ ಪಶ್ಚಿಮ ________

ಆಫ್ರಿಕಾದ ಅತಿ ದೊಡ್ಡ ದೇಶವಾದ ಸುಡಾನ್‌ನಿಂದ ಸ್ವತಂತ್ರಗೊಳಿಸಲ್ಪಟ್ಟ 10 ದಕ್ಷಿಣ ರಾಜ್ಯಗಳನ್ನು ಸೇರಿಸಿ ರೂಪೀಕರಿಸಿದ ದೇಶವು ದಕ್ಷಿಣ ಸುಡಾನ್ ಆಗಿದೆ. ದಕ್ಷಿಣ ಸುಡಾನ್‌ನಂತೆ ಯಾವುದೇ ರಾಷ್ಟ್ರದ ರಚನೆಗೆ ನಿರ್ದಿಷ್ಟ ಭೂಪ್ರದೇಶದ ಅಗತ್ಯವಿದೆ ಎಂದು ಇದರಿಂದ ತಿಳಿಯಿತಲ್ಲವೇ?

ರಾಷ್ಟ್ರವೊಂದು ಅಸ್ತಿತ್ವದಲ್ಲಿರಬೇಕಾದರೆ ಸ್ಥಿರವಾದ ಮತ್ತು ಸ್ಪಷ್ಟವಾಗಿ ನಿರ್ವಚಿಸಲ್ಪಟ್ಟ ಭೂಪ್ರದೇಶವು ಅನಿವಾರ್ಯವಾಗಿದೆ.

ಆದರೆ ರಾಷ್ಟ್ರವೊಂದರ ರೂಪೀಕರಣಕ್ಕೆ ಅಗತ್ಯವಾದ ಭೂಪ್ರದೇಶದ ವಿಸ್ತೀರ್ಣವು ಎಷ್ಟು ಎಂದು ನಿಗದಿಪಡಿಸಲಾಗಿಲ್ಲ. ಒಂದು ರಾಷ್ಟ್ರದ ಪ್ರದೇಶವು ಭೂಮಿ, ಜಲ, ವಾಯು, ಕರಾವಳಿ ಪ್ರದೇಶಗಳು ಅದರ ಪರಿಧಿಯಲ್ಲಿ ಒಳಪಡುತ್ತವೆ. ಆಧುನಿಕ ರಾಷ್ಟ್ರಗಳು ಸಾಮಾನ್ಯವಾಗಿ ಭೂ ಪ್ರದೇಶದ ದೃಷ್ಟಿಯಲ್ಲಿ ದೊಡ್ಡದಾಗಿದೆ.

ವಿಶ್ವದ ಅತ್ಯಂತ ದೊಡ್ಡ ದೇಶವಾದ ರಷ್ಯಾವನ್ನು ಮತ್ತು ಅತ್ಯಂತ ಚಿಕ್ಕ ದೇಶವನ್ನು ಸಮಾಜಶಾಸ್ತ್ರ ಪ್ರಯೋಗಾಲಯದ ನಕ್ಷೆಯನ್ನು ಪರಿಶೀಲಿಸಿ ಗುರುತಿಸಿರಿ.




ರಾಷ್ಟ್ರ ರೂಪೀಕರಣದಲ್ಲಿ ಭೂ ಪ್ರದೇಶವು ವಹಿಸುವ ಪಾತ್ರದ ಬಗ್ಗೆ ಟಿಪ್ಪಣಿ ಒಂದನ್ನು ತಯಾರಿಸಿರಿ.

## ಸರಕಾರ (Government)




ಮೇಲೆ ಕೊಟ್ಟಿರುವ ವಾರ್ತೆಗಳನ್ನು ಗಮನಿಸಿರಿ.

ಒಂದು ರಾಷ್ಟ್ರದ ಜನರ ಕಲ್ಯಾಣವನ್ನು ಖಾತರಿಪಡಿಸುವಲ್ಲಿ ಸರಕಾರವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ರಾಷ್ಟ್ರ ಮತ್ತು ಜನರ ನಡುವಿನ ಸಂಬಂಧವನ್ನು ಜೀವಂತವಾಗಿಡಲು ಸರಕಾರವು ಸಹಕಾರಿಯಾಗಿದೆ. ಜನರು ವಾಸಿಸುತ್ತಾರೆ ಎಂಬ ಕಾರಣಕ್ಕಾಗಿ ಮಾತ್ರ ಒಂದು ನಿರ್ದಿಷ್ಟ ಪ್ರದೇಶವು ರಾಷ್ಟ್ರವಾಗಬೇಕೆಂದಿಲ್ಲ. ಅಲ್ಲಿಯ ಸಂಪನ್ಮೂಲ ಮತ್ತು ಜನರನ್ನು ಒಂದಾಗಿ ಮುನ್ನಡೆಸಲು ಸರಕಾರವೆಂಬ ವ್ಯವಸ್ಥೆ ಅನಿವಾರ್ಯವಾಗಿದೆ. ರಾಷ್ಟ್ರವು ಒಂದು ಶಾಶ್ವತ ಸಂಸ್ಥೆಯಾಗಿಯೂ ಸರಕಾರವು

ಬದಲಾಗುತ್ತಾ ಇರುವುದು ಆಗಿದೆ. ರಾಷ್ಟ್ರದ ನೀತಿಗಳನ್ನು ರೂಪಿಸುವ ಮತ್ತು ಪ್ರಕಟಿಸುವ ಹಾಗೂ ನೀತಿಗಳ್ನು ಜಾರಿಗೊಳಿಸುವ ಸಂಸ್ಥೆಯು ಸರಕಾರವಾಗಿದೆ. ಶಾಂತಿ ಸುವ್ಯವಸ್ಥೆ, ಕಾನೂನು ಸುವ್ಯವಸ್ಥೆ, ರಕ್ಷಣೆ, ವಿದೇಶಿ ಸಂಬಂಧಗಳು, ರಸ್ತೆಗಳು, ಸೇತುವೆಗಳು, ಕುಡಿಯುವ ನೀರು, ವಿದ್ಯುತ್, ಶಿಕ್ಷಣ, ಇತ್ಯಾದಿ ಎಲ್ಲವನ್ನೂ ಸರಕಾರವೇ ನಿರ್ವಹಿಸುತ್ತದೆ.

ಸರಕಾರದ ಪ್ರಧಾನ ಜವಾಬ್ದಾರಿಗಳಿಗೆ ಸಂಬಂಧಪಟ್ಟಂತೆ ನೀಡಿರುವ ಆಶಯ ಚಿತ್ರವನ್ನು ಪೂರ್ತಿಗೊಳಿಸಿರಿ.

**ಸರಕಾರ**

- ....................................................................................
- ....................................................................................
- ....................................................................................
- ....................................................................................
- ರಾಷ್ಟ್ರದ ಸಾರ್ವಭೌಮತೆ ಮತ್ತು ಏಕತೆಯನ್ನು ಕಾಪಾಡುವುದು.

## ಸಾರ್ವಭೌಮತ್ವ (Sovereignty)




ಮೇಲೆ ನೀಡಿರುವ ವಾರ್ತೆಗಳ ಶೀರ್ಷಿಕೆಗಳನ್ನು ಗಮನಿಸಿರಿ.

ಪ್ರತಿಯೊಂದು ವಾರ್ತೆಯಲ್ಲಿಯು ದೇಶಗಳು ತಮ್ಮ ಅಧಿಕಾರವನ್ನು ಚಲಾಯಿಸುವ ಮೂಲಕ ವಿವಿಧ ಕ್ಷೇತ್ರಗಳಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಹೇಳಲಾಗಿದೆ. ಈ ರೀತಿಯಲ್ಲಿ ಬಾಹ್ಯ ಒತ್ತಡಗಳಿಗೆ ಒಳಗಾಗದೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಪರಮಾಧಿಕಾರವು ಸಾರ್ವಭೌಮತ್ವವಾಗಿದೆ. ಇದು ಒಂದು ರಾಷ್ಟ್ರಕ್ಕೆ ಮಾತ್ರ ವಿರುವ ವಿಶೇಷ ಅಧಿಕಾರವಾಗಿದೆ. ಕಾನೂನುಗಳನ್ನು ರೂಪಿಸುವುದು ಮತ್ತು ರಾಷ್ಟ್ರೀಯ ತೀರ್ಮಾನಗಳನ್ನು ಕೈಗೊಳ್ಳುವುದು ಸಾರ್ವಭೌಮತ್ವದ ಭಾಗವಾಗಿದೆ.

ರಾಷ್ಟ್ರವು ಅದರ ಪರಮಾಧಿಕಾರವನ್ನು ಪ್ರಯೋಗಿಸುವುದು, ಸಂರಕ್ಷಿಸುವುದು ಸರಕಾರದ ಮೂಲಕವಾಗಿದೆ. ಜನರು, ಭೂ ಪ್ರದೇಶ, ಸರಕಾರ ಎಂಬಿವುಗಳಿದ್ದರೂ ಸಾರ್ವಭೌಮತ್ವವಿಲ್ಲದಿದ್ದರೆ ರಾಷ್ಟ್ರವು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ.




ಕೊಟ್ಟಿರುವ ವಾರ್ತೆಗಳಲ್ಲಿ ಯಾವುದರಲ್ಲಿ ಸಾರ್ವಭೌಮತ್ವವನ್ನು ಪರಿಪಾಲಿಸಲಾಗಿದೆ? ಯಾಕಾಗಿ? ಟಿಪ್ಪಣಿ ತಯಾರಿಸಿರಿ.

ರಾಷ್ಟ್ರದ ಮೂಲಭೂತ ಘಟಕಗಳನ್ನು ಬರೆದಿರುವ ಚೀಟಿಗಳನ್ನು ಮೇಜಿನ ಮೇಲೆ ಒಂದು ಕರಡಿಗೆಯಲ್ಲಿ ಹಾಕಿರಿ. ಅವುಗಳಿಂದ ಪ್ರತಿಯೊಬ್ಬರು ಒಂದೊಂದು ಚೀಟಿಯನ್ನು ಹೆಕ್ಕಲಿ. ಒಂದೇ ವಿಷಯ ಸಿಕ್ಕಿದವರು ಒಂದಾಗಿ ಒಂದು ಗುಂಪು ಮಾಡಲಿ. ಪ್ರತಿಯೊಂದು ಗುಂಪು ತಮಗೆ ಸಿಕ್ಕಿದ ವಿಷಯದ ಬಗ್ಗೆ ಚರ್ಚಿಸಲಿ. ಆನಂತರ ಅವುಗಳ ಕುರಿತು ಬೇರೆ ಬೇರೆ ರೀತಿಯಲ್ಲಿ ಮಂಡಿಸಲಿ. (ಟಿಪ್ಪಣಿ, ಭಾಷಣ, ಪ್ಯಾನೆಲ್ ಚರ್ಚೆ, ಇತ್ಯಾದಿ.)

## ರಾಷ್ಟ್ರ ರಚನೆ: ಸಿದ್ಧಾಂತಗಳು

ರಾಷ್ಟ್ರದ ವಿವಿಧ ಘಟಕಗಳು ಯಾವುವೆಂದು ಚರ್ಚಿಸಿರುವೆವು.

ಇನ್ನು ರಾಷ್ಟ್ರವು ಹೇಗೆ ರೂಪೀಕರಣವಾಯಿತು ಎಂದು ಪರಿಶೋಧಿಸುವ. ರಾಷ್ಟ್ರ ನಿರ್ಮಾಣಕ್ಕೆ ಸಂಬಂಧಿಸಿ ತರಗತಿಯಲ್ಲಿ ಪ್ಯಾನೆಲ್ ಚರ್ಚೆಯನ್ನು ಸಂಘಟಿಸಲಾಗಿದೆ. ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಹೇಗೆ ಅಭಿವ್ಯಕ್ತಪಡಿಸಿದ್ದಾರೆ ಎಂದು ನೋಡಿ.



ರಾಷ್ಟ್ರ ರಚನೆಯ ಬಗ್ಗೆ ಮಕ್ಕಳು ನಡೆಸಿದ ಅಭಿಪ್ರಾಯ ಮಂಡನೆಗಳನ್ನು ಗಮನಿಸಿದಿರಲ್ಲವೇ? ರಾಷ್ಟ್ರ ರಚನೆಗೆ ಕಾರಣವಾದ ವಿವಿಧ ಸಿದ್ಧಾಂತಗಳನ್ನು ಅವರು ಚರ್ಚಿಸಿದರು. ಕೆಳಗೆ ಕೊಟ್ಟಿರುವ ಆಶಯ ಚಿತ್ರವನ್ನು ಪೂರ್ತಿ ಮಾಡಬಲ್ಲಿರಾ.

**ರಾಷ್ಟ್ರ ರಚನೆಯ ಸಿದ್ಧಾಂತಗಳು**

- **ಬಲ ಸಿದ್ಧಾಂತ**
- **ಸಾಮಾಜಿಕ ಒಪ್ಪಂದ / ಕರಾರು ಸಿದ್ಧಾಂತ** – ಜನರು ಮಾಡಿಕೊಂಡ ಒಪ್ಪಂದಗಳೇ ರಾಷ್ಟ್ರ ರಚನೆಗೆ ಆಧಾರ.
- **ಸಾಮಾಜಿಕ ಪರಿಣಾಮ ಸಿದ್ಧಾಂತ**

ರಾಷ್ಟ್ರ ರಚನೆಯ ಸಿದ್ಧಾಂತಗಳಲ್ಲಿ ಅತ್ಯಂತ ಜನಪ್ರಿಯ ಹಾಗೂ ಅಂಗೀಕರಿಸಲ್ಪಟ್ಟ ಸಿದ್ಧಾಂತವೆಂದರೆ ಸಾಮಾಜಿಕ ಪರಿಣಾಮ ಸಿದ್ಧಾಂತ. ಇದರ ಪ್ರಕಾರ ರಾಷ್ಟ್ರವು ಯಾರ ಸೃಷ್ಟಿಯೂ ಅಲ್ಲ ದೀರ್ಘ ಕಾಲಾವಧಿಯಲ್ಲಿ ಅನೇಕ ಅಂಶಗಳು ಒಟ್ಟಾಗಿ ಕಾರ್ಯನಿರ್ವಹಿಸಿದ್ದರ ಪರಿಣಾಮವಾಗಿ ರಾಷ್ಟ್ರ ನಿರ್ಮಾಣವಾಗಿದೆ.

## ಬುಡಕಟ್ಟು ರಾಷ್ಟ್ರದಿಂದ ದೇಶ ರಾಷ್ಟ್ರದಡೆಗೆ

ಆಧುನಿಕ ರಾಷ್ಟ್ರಗಳ ಸ್ವರೂಪವು ಆರಂಭಿಕ ರಾಷ್ಟ್ರಗಳಿಗಿಂತ ತೀರಾ ಭಿನ್ನವಾಗಿದೆ ರಾಷ್ಟ್ರಗಳ ಸ್ವರೂಪದಲ್ಲಿನ ಬದಲಾವಣೆಗಳನ್ನು ನಾವು ಪರಿಶೀಲಿಸೋಣ.

| | |
|---|---|
| **ಬುಡಕಟ್ಟು ರಾಷ್ಟ್ರಗಳು** | ರಾಷ್ಟ್ರೀಯ ಸಂಸ್ಥೆಗಳ ಸ್ವರೂಪವು ಪ್ರಾಚೀನ ಕಾಲದಲ್ಲಿ ಸ್ವಲ್ಪ ಮಟ್ಟಿಗಾದರು ಗೋತ್ರ ಸಂಘಗಳಲ್ಲಿ ಕಂಡುಬರುತ್ತಿತ್ತು. ಒಂದೇ ಕುಲದಲ್ಲಿ ಜನನ, ಸಮಾನ ಆಸಕ್ತಿಗಳು, ಸಮಾನ ಆರ್ಥಿಕ ಚಟುವಟಿಕೆಗಳು, ಮೊದಲಾದವುಗಳ ಪ್ರಭಾವವು ಬುಡಕಟ್ಟು ರಾಷ್ಟ್ರಗಳ ರಚನೆಗೆ ಕಾರಣವಾಯಿತು. |
| **ಪೌರಸ್ಯ ಆಡಳಿತ ಕೇಂದ್ರಗಳು** | ಪೌರಸ್ಯ ದೇಶಗಳು ಆಧುನಿಕ ರಾಷ್ಟ್ರಗಳಿಗೆ ಸಮಾನವಾದ ಗುಣಲಕ್ಷಣಗಳನ್ನು ಹೋಲುತ್ತದೆ. ನದಿತೀರ ನಾಗರಿಕತೆಗಳಾದ ಮೆಸೊಪೊಟೋಮಿಯ, ಈಜಿಪ್ಟ್ ಮತ್ತು ಚೀನಾವು ಇದಕ್ಕೆ ಉದಾಹರಣೆಗಳಾಗಿವೆ. ಕಂಚಿನ ಯುಗದಲ್ಲಿ ಸಾಂಸ್ಕೃತಿಕ ಕೇಂದ್ರಗಳಾಗಿದ್ದ ಈ ಸ್ಥಳಗಳಲ್ಲಿ ಜನರು ನಾಗರಿಕ ಜೀವನವನ್ನು ನಡೆಸಿದ್ದಾರೆ. |
| **ಗ್ರೀಕ್ ನಗರ ರಾಷ್ಟ್ರಗಳು** | ಗ್ರೀಕ್ ನಗರ ರಾಷ್ಟ್ರಗಳು ಆಧುನಿಕ ರಾಷ್ಟ್ರಗಳನ್ನು ಹೋಲುತ್ತವೆ. ಅಥೆನ್ಸ್ ಮತ್ತು ಸ್ಪಾರ್ಟಾ ಇದಕ್ಕೆ ಉದಾಹರಣೆಗಳಾಗಿವೆ. |
| **ರೋಮನ್ ಸಾಮ್ರಾಜ್ಯ** | ರೋಮ್ ಸಾಮ್ರಾಜ್ಯದಲ್ಲಿ ನೆಲೆನಿಂತಿದ್ದ ಆಡಳಿತ ಕಾನೂನು ಮತ್ತು ಮೂಲಸೌಕರ್ಯಗಳು ಆಧುನಿಕ ರಾಷ್ಟ್ರಗಳಿಗೆ ಸಮಾನವಾಗಿದ್ದವು. |

| | |
|---|---|
| **ಫ್ಯೂಡಲ್ ರಾಷ್ಟ್ರಗಳು** | ರೋಮ್ ಸಾಮ್ರಾಜ್ಯದ ಪತನದ ಅನಂತರ ಊಳಿಗಮಾನ್ಯ ಅಥವಾ ಫ್ಯೂಡಲ್ ರಾಷ್ಟ್ರಗಳು ರೂಪುಗೊಂಡವು. 'ಫ್ಯೂಡಲಿಸಂ' ಈ ರಾಷ್ಟ್ರಗಳ ಪ್ರಧಾನ ವಿಶೇಷತೆಯಾಗಿತ್ತು. ರಾಜರು-ಪ್ರಭುಗಳು-ಕೃಷಿಕರು ಈ ಕ್ರಮದಲ್ಲಿ ಅಧಿಕಾರ ಶ್ರೇಣಿಯನ್ನು ವಿಂಗಡಿಸಲಾಗಿತ್ತು. ರಾಜನ ಅಧಿಕಾರವು ಸೀಮಿತವಾಗಿತ್ತು. ಆಡಳಿತ ಅಧಿಕಾರವು ಪ್ರಭುಗಳದ್ದಾಗಿತ್ತು. |
| **ದೇಶ ರಾಷ್ಟ್ರಗಳು** | ಯುರೋಪಿನಲ್ಲಿ ಆಧುನಿಕ ರಾಷ್ಟ್ರಗಳು ರೂಪುಗೊಂಡವು. ನವೋತ್ಥಾನದೊಂದಿಗೆ ವೈಚಾರಿಕತೆ ಮತ್ತು ವೈಜ್ಞಾನಿಕ ಚಿಂತನೆ ಮೊದಲಾದವು ಸಾಮಾಜಿಕ ರಚನೆಯಲ್ಲಿ ಮಹತ್ತರವಾದ ಬದಲಾವಣೆಯನ್ನು ತಂದಿತು. ಕೈಗಾರಿಕಾ ಕ್ರಾಂತಿ, ವಸಹಾತುಶಾಹಿ ರಾಷ್ಟ್ರೀಯತೆಗಳು ದೇಶಿಯ ರಾಷ್ಟ್ರಗಳ ಬೆಳವಣಿಗೆಗೆ ಕಾರಣವಾಯಿತು. ಕ್ರಮೇಣ ಜನಸಂಖ್ಯೆ, ಪ್ರದೇಶ, ಸರಕಾರ, ಸಾರ್ವಭೌಮತ್ವದಂತಹ ಅಂಶಗಳ ಆಧಾರದ ಮೇಲೆ ದೇಶ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂತು. |

### ಫ್ಯೂಡಲಿಸಂ (Feudalism)

ಕೃಷಿ ಭೂಮಿಯಲ್ಲಿ ದುಡಿಯುವ ಭೂ ಹಿಡುವಳಿದಾರರನ್ನು ಗುಲಾಮರನ್ನಾಗಿ ಬಳಸಿಕೊಳ್ಳುವ ಸಾಮಾಜಿಕ-ಆಡಳಿತ ವ್ಯವಸ್ಥೆಯೇ ಫ್ಯೂಡಲಿಸಂ (ಊಳಿಗಮಾನ್ಯ ಪದ್ಧತಿ). ಊಳಿಗಮಾನ್ಯ ಎಂಬ ಪದವು ಒಂದು ತುಂಡು ಭೂಮಿ ಎಂಬ ಜರ್ಮನ್ ಪದವಾದ ಫ್ಯೂಡ್‌ನಿಂದ ಹುಟ್ಟಿಕೊಂಡಿದೆ. ಮಧ್ಯಕಾಲೀನ ಯುರೋಪಿನಲ್ಲಿ ಉಳಿಗಮಾನ್ಯ ಪದ್ಧತಿಯು ಅಸ್ತಿತ್ವದಲ್ಲಿತ್ತು.

### ನವೋತ್ಥಾನ (Renaissance)

14 -15ನೇ ಶತಮಾನದಲ್ಲಿ ಇಟಲಿ ಮತ್ತು ಇತರ ಯುರೋಪಿಯನ್ ರಾಷ್ಟ್ರಗಳಲ್ಲಿ ಕಲೆ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಉಂಟಾದ ನೂತನ ಜಾಗೃತಿಯೇ ನವೋತ್ಥಾನ. ಈ ಕಾಲಘಟ್ಟದ ಮುಖ್ಯ ಲಕ್ಷಣವೆಂದರೆ ಧರ್ಮಕ್ಕಿಂತಲೂ ಮಾನವರಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಪೆಟ್ರಾರ್ಕ್, ಡಾಂಟೆ, ಡಾವಿಂಚಿ ಮೊದಲಾದವರು ವಿವಿಧ ಕ್ಷೇತ್ರಗಳಲ್ಲಿ ನವೋತ್ಥಾನದ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳಾಗಿದ್ದಾರೆ.

ರಾಷ್ಟ್ರಗಳ ಉಗಮ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವರ್ಕ್‌ಶೀಟನ್ನು ಪೂರ್ತಿಗೊಳಿಸಿರಿ.

| | |
|---|---|
| ರಾಜ - ಪ್ರಭುಗಳು - ಕೃಷಿಕ ಎಂಬೀ ಅಧಿಕಾರ ಶ್ರೇಣಿಯಲ್ಲಿ ರಾಜನಿಗೆ ಸೀಮಿತ ಅಧಿಕಾರವಿದೆ. | ಫ್ಯೂಡಲ್ ರಾಷ್ಟ್ರ |
| ತಾರ್ಕಿಕ ಚಿಂತನೆ, ವೈಜ್ಞಾನಿಕ ಚಿಂತನೆ, ಕೈಗಾರಿಕಾ ಕ್ರಾಂತಿ, ರಾಷ್ಟ್ರ ಪ್ರಜ್ಞೆ ಇತ್ಯಾದಿಗಳು ರಾಷ್ಟ್ರಗಳ ಉಗಮಕ್ಕೆ ಕಾರಣವಾಯಿತು. | |
| ಕಂಚಿನ ಯುಗದ ಸಾಂಸ್ಕೃತಿಕ ಕೇಂದ್ರಗಳು ಈ ಆಡಳಿತ ವ್ಯವಸ್ಥೆಯಲ್ಲಿ ಒಳಗೊಂಡಿವೆ. | |
| ಒಂದೇ ವರ್ಗದಲ್ಲಿನ ಜನನ, ಸಾಮಾನ್ಯ ಆಸಕ್ತಿಗಳು ಮತ್ತು ಸಮಾನ ಆರ್ಥಿಕ ಚಟುವಟಿಕೆಗಳು ಈ ವರ್ಗದ ರಾಷ್ಟ್ರದ ಗುಣಲಕ್ಷಣಗಳಾಗಿವೆ. | |

## ರಾಷ್ಟ್ರ ಮತ್ತು ಸರಕಾರ: ಪರಸ್ಪರ ಸಂಬಂಧ

ಸರಕಾರವು ರಾಷ್ಟ್ರಗಳಲ್ಲಿ ಆಡಳಿತ ನಿರ್ವಹಣೆಯನ್ನು ನಡೆಸುವುದು ಎಂದು ನಾವು ತಿಳಿದು ಕೊಂಡಿರುವೆವು ಅಲ್ಲವೇ. ಅವುಗಳ ಹೆಚ್ಚಿನ ವೈಶಿಷ್ಟ್ಯಗಳನ್ನು ನೋಡೋಣ.



ರಾಷ್ಟ್ರ ಮತ್ತು ಸರಕಾರದ ನಡುವಿನ ಹೋಲಿಕೆ ಮಾಡಲು ಕಿರಣ್ ಸಂಗ್ರಹಿಸಿದ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ. ಕೊಟ್ಟಿರುವ ಕೋಷ್ಟಕದಲ್ಲಿ ಅವುಗಳನ್ನು ಸರಿಯಾಗಿ ಕ್ರಮೀಕರಿಸಿ ಬರೆಯಿರಿ.

- ಪರಮಾಧಿಕಾರವಿದೆ.
- ಬದಲಾಗುತ್ತಿರುವುದಾಗಿದೆ.
- ಇದು ವಿಶಾಲವಾದ ಪರಿಕಲ್ಪನೆಯಾಗಿದೆ.
- ಒಂದು ಸುಸ್ಥಿರ ಸಂಸ್ಥೆಯಾಗಿದೆ.
- ರಾಷ್ಟ್ರವು ಒಂದು ಘಟಕವಾಗಿದೆ.
- ಇದು ಎಲ್ಲಾ ಜನರನ್ನು ಒಳಗೊಂಡಿದೆ.
- ಆಡಳಿತ ನಿರ್ವಾಹಕರೂ ಉದ್ಯೋಗಿಗಳು ಇದರಲ್ಲಿ ಸೇರಿದ್ದಾರೆ.
- ಈ ಸಂಸ್ಥೆಯ ಮೂಲಕ ಸಾರ್ವಭೌಮತ್ವವನ್ನು ಚಲಾಯಿಸಲಾಗುತ್ತದೆ.

| ರಾಷ್ಟ್ರ | ಸರಕಾರ |
|---|---|
| | |
| | |
| | |
| | |

ರಾಷ್ಟ್ರ ಮತ್ತು ಜನರ ನಡುವಿನ ಸಂಬಂಧವನ್ನು ಜೀವಂತವಾಗಿಡಲು ಸರಕಾರವು ನಮಗೆ ಸಹಾಯಮಾಡುತ್ತದೆ. ಸರಕಾರವಿಲ್ಲದೆ ರಾಷ್ಟ್ರವು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ರಾಷ್ಟ್ರದ ಕಾನೂನುಗಳು ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಸರಕಾರದ ವಿವಿಧ ಘಟಕಗಳ ಮೂಲಕ ಕಾರ್ಯಗತಗೊಳಿಸಲಾಗುತ್ತದೆ. ಅವು ಯಾವುವೆಂದು ನೋಡೋಣ.

## ಸರಕಾರದ ಅಂಗಗಳು

**ಶಾಸಕಾಂಗ**
(Legislature)

ದೇಶಕ್ಕೆ ಅಗತ್ಯವಿರುವ ಕಾನೂನುಗಳನ್ನು ನಿರ್ಮಿಸುವುದು ಮತ್ತು ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಬದಲಾವಣೆ ಮಾಡುವುದು ಶಾಸಕಾಂಗದ ಪ್ರಧಾನ ಜವಾಬ್ದಾರಿಯಾಗಿದೆ. ರಾಷ್ಟ್ರದ ಆಡಳಿತವನ್ನು ನಿಯಂತ್ರಿಸುವಲ್ಲಿ ಶಾಸಕಾಂಗ ವಿಭಾಗವು ಮಹತ್ತರವಾದ ಪಾತ್ರ ವಹಿಸುತ್ತದೆ.

**ಕಾರ್ಯಾಂಗ**
(Executive)

ಕಾರ್ಯಾಂಗವು ಶಾಸಕಾಂಗ ಮಾಡಿದ ಶಾಸನಗಳನ್ನು ಕಾರ್ಯಗತಗೊಳಿಸುತ್ತದೆ ಮತ್ತು ಆಡಳಿತವನ್ನು ನಿರ್ವಹಿಸುತ್ತದೆ. ಸರಕಾರದ ದೈನಂದಿನ ಚಟುವಟಿಕೆಗಳ ನಿರ್ವಹಣೆಯೂ ಕಾರ್ಯಾಂಗದ ಹೊಣೆಗಾರಿಕೆ ಆಗಿದೆ.

**ನ್ಯಾಯಾಂಗ**
(Judiciary)

ಕಾನೂನನ್ನು ವ್ಯಾಖ್ಯಾನಿಸುವುದು, ವಿವಾದಗಳಿಗೆ ತೀರ್ಪು ಕಲ್ಪಿಸುವುದು, ಅಪರಾಧಿಗಳನ್ನು ಶಿಕ್ಷಿಸುವುದು ನ್ಯಾಯಾಂಗವಾಗಿದೆ. ಶಾಸಕಾಂಗವು ಕಾನೂನುಗಳನ್ನು ರೂಪಿಸುವಾಗ ಕಾರ್ಯಾಂಗವು ಅದನ್ನು ಜಾರಿಗೊಳಿಸುತ್ತದೆ. ಈ ಪ್ರಕ್ರಿಯೆಯಲ್ಲಿ ವಿವಾದಗಳನ್ನು ಪರಿಹರಿಸುವುದು ನ್ಯಾಯಾಂಗ ವಿಭಾಗವಾಗಿದೆ.

ಸರಕಾರದ ಸುಗಮವಾದ ಕಾರ್ಯನಿರ್ವಹಣೆಗೆ ಈ ಮೂರು ವಿಭಾಗಗಳು ಒಟ್ಟಾಗಿ ಕೆಲಸ ಮಾಡುವುದು ಅತ್ಯಗತ್ಯವಾಗಿದೆ.

ಕೆಳಗೆ ಕೊಟ್ಟಿರುವ ವಾರ್ತೆಗಳ ಶೀರ್ಷಿಕೆಗಳನ್ನು ಪರಿಶೀಲಿಸಿರಿ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಇವುಗಳಲ್ಲಿ ಯಾವುದರ ಅಧಿಕಾರ ಪರಿಧಿಯಲ್ಲಿ ಇವು ಬರುತ್ತವೆ ಎಂದು ಕಂಡುಹಿಡಿಯಿರಿ.

- 'ನ್ಯಾಯಾಲಯದ ಕಲಾಪಗಳನ್ನು ನೇರ ಪ್ರಸಾರ ಮಾಡಲಾಗುವುದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.
- ಶಿಕ್ಷಣ ಹಕ್ಕು ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸರಕಾರ ಸಜ್ಜಾಗಿದೆ.
- ಪರಿಸರ ಸಂರಕ್ಷಣೆ: ಕೂಡಲೆ ಕಾನೂನು ತಿದ್ದುಪಡಿ
- ಶಾಲೆಗಳಲ್ಲಿ ಹಸಿರು ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು: ಶಿಕ್ಷಣ ಇಲಾಖೆ
- ಸಂಚಾರ ಕಾನೂನು ಪರಿಷ್ಕರಣೆ: ಪ್ರಗತಿಯನ್ನು ವರದಿ ಮಾಡವಂತೆ ನ್ಯಾಯಾಲಯದ ಆದೇಶ.
- ಹೊಸ ಸಂಚಾರ ಕಾನೂನು ಪರಿಷ್ಕರಣೆಗೆ ಸಂಸತ್ತು ಅನುಮೋದನೆ ನೀಡಿದೆ.

ನಾವು ರಾಷ್ಟ್ರದ ಪರಿಕಲ್ಪನೆಯ ಮೂಲ ಮತ್ತು ಬೆಳವಣಿಗೆಯ ಬಗ್ಗೆ ಪರಿಚಯಿಸಿಕೊಂಡಿದ್ದೇವೆ. ಪ್ರಾಚೀನ ಬುಡಕಟ್ಟು ಆಡಳಿತ ವ್ಯವಸ್ಥೆಯಿಂದ ಪ್ರಜಾಪ್ರಭುತ್ವದ ಆಧಾರದ ಮೇಲೆ ಆಧುನಿಕ ರಾಷ್ಟ್ರಗಳ ಮಟ್ಟಕ್ಕೆ ನಮ್ಮ ದೇಶಗಳು ಬೆಳೆದಿವೆ. ಮಾನವೀಯತೆ, ಸಮಾನತೆ, ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಕ್ಕೆ ಹೆಚ್ಚು ಒತ್ತು ಕೊಡುವ ಆಧುನಿಕ ದೇಶ ರಾಷ್ಟ್ರಗಳು ಮಾನವ ಪ್ರಗತಿಯ ಸಂಕೇತವಾಗಿವೆ.

## ಮುಂದುವರಿದ ಚಟುವಟಿಕೆಗಳು

- ಶಾಸಕಾಂಗ ಕಾರ್ಯಾಂಗ ಮತ್ತು ನ್ಯಾಯಾಂಗದ ಚಟುವಟಿಕೆಗಳ ನೇರವಾದ ಅನುಭವವನ್ನು ಪಡೆಯಲು ಶಾಸನಸಭೆ, ಕಲೆಕ್ಟರೇಟ್, ನ್ಯಾಯಾಲಯಗಳಿಗೆ ಅಧ್ಯಯನ ಪ್ರವಾಸವನ್ನು ಕೈಗೊಳ್ಳಿರಿ.
- ರಾಷ್ಟ್ರ ರಚನೆಯ ವಿವಿಧ ಹಂತಗಳು ಮತ್ತು ಬೆಳವಣಿಗೆಯನ್ನು ಒಳಗೊಂಡ 'ಬುಡಕಟ್ಟು ರಾಜ್ಯಗಳಿಂದ ದೇಶ ರಾಷ್ಟ್ರದವರೆಗೆ' ಎಂಬ ವಿಷಯದಲ್ಲಿ ವಿಚಾರ ಸಂಕಿರಣವನ್ನು ಆಯೋಜಿಸಿರಿ.

  ಉಪವಿಷಯಗಳು
  - ಬುಡಕಟ್ಟು ರಾಷ್ಟ್ರಗಳು
  - ಗ್ರೀಕ್ ನಗರ ರಾಷ್ಟ್ರಗಳು
  - ಫ್ಯೂಡಲ್ ರಾಷ್ಟ್ರಗಳು
  - ಪೌರಸ್ತ್ಯ ಆಡಳಿತ ವ್ಯವಸ್ಥೆಗಳು
  - ರೋಮನ್ ಸಾಮ್ರಾಜ್ಯ
  - ದೇಶ ರಾಷ್ಟ್ರಗಳು
- ಸಮಾಜ ವಿಜ್ಞಾನ ಕ್ಲಬ್ಬಿನ ಆಶ್ರಯದಲ್ಲಿ ಶಾಸಕಾಂಗ ಕಾರ್ಯಾಂಗ ಮತ್ತು ನ್ಯಾಯಾಂಗ ಇದರ ಪ್ರತಿನಿಧಿಗಳೊಂದಿಗೆ ಸಂದರ್ಶನ ನಡೆಸಲು ತೀರ್ಮಾನಿಸಲಾಗಿದೆ. ಗುಂಪಿನಲ್ಲಿ ಸಂದರ್ಶನಕ್ಕೆ ಬೇಕಾದ ಪ್ರಶ್ನಾವಳಿಗಳನ್ನು ತಯಾರಿಸಿ ಸಂದರ್ಶನವನ್ನು ನಡೆಸಿರಿ.




# 4

# ಭೂಗೋಳದಿಂದ ಭೂಪಟದೆಡೆಗೆ...

> ಸೂರ್ಯಲ್‌ನಿನ್ನೊರು ಚೂಡುತೀಕ್ಕುಡಮಾಯ್
> ಶೂನ್ಯಕಾಶ ಸರಸ್ಸಿಲ್
> ವೀಣುತಣುತ್ತು ಕಿಡನ್ನು ಮಯಂಜಿ
> ಯುಣರ್ನವಳಲ್ಲೋ ಭೂಮಿ.
> ವಾಯುವಿಲೀರನ್ ಜೀವಕಣಜಳೆ
> ವಾರಿಚ್ಚೂಡಿಯ ಭೂಮಿ.
>
> **ಭೂಮಿ ಸನಾಥಯಾಣ್ ವಯಲಾರ್ ರಾಮವರ್ಮ**



*ಸೂರ್ಯನಿಂದ ಬೇರ್ಪಟ್ಟ ಒಂದು ಬಿಸಿ ಉಂಡೆಯು, ಶೂನ್ಯಾಕಾಶವೆಂಬ ಸರೋವರದಲ್ಲಿ ನಿದ್ದೆಗೆ ಜಾರಿ ಬಿದ್ದು ತಣಿದು ಭೂಮಿಯಾಗಿ ರೂಪುಗೊಂಡಿರುವುದಾಗಿಯೂ ವಾತಾವರಣದಲ್ಲಿ ಆರ್ದ್ರತೆಯು ವಾಯು ಮತ್ತು ಜೀವಕಣಗಳನ್ನು ಅಪ್ಪಿಹಿಡಿದುಕೊಂಡಿದೆ ಎಂದೂ ವಯಲಾರ್ ರಾಮವರ್ಮ ಅವರು ಭೂಮಿಯ ಕುರಿತು ಹಾಡಿದ್ದಾರೆ.*

ವಾತಾವರಣ, ನೀರು ಮತ್ತು ಅನುಕೂಲಕರ ಹವಾಮಾನ ಎಂಬಿವುಗಳಿಂದ ಸಮೃದ್ಧವಾಗಿರುವ ನಮ್ಮ ಭೂಮಿಯು, ವಿಶ್ವದಲ್ಲಿ ಜೀವಜಾಲಗಳು ಅಸ್ತಿತ್ವವಿರುವ ಏಕೈಕ ಆಕಾಶಕಾಯವಾಗಿದೆ.

ಭೂಮಿಯ ಚಲನೆಗಳು, ಆಕೃತಿ, ಇತರ ವಿಶೇಷತೆಗಳು ಇತ್ಯಾದಿಗಳನ್ನು ನಾವು ಹಿಂದಿನ ತರಗತಿಯಲ್ಲಿ ತಿಳಿದುಕೊಂಡಿರುವೆವಲ್ಲವೇ.

ಬಾಹ್ಯಾಕಾಶದಿಂದ ತೆಗೆದ ಚಿತ್ರವು ನಮಗೆ ಭೂಮಿಯ ಸರಿಯಾದ ಆಕೃತಿಯನ್ನು ತೋರಿಸುವುದು.

ಭೂಮಿಯು ಗೋಳಾಕೃತಿಯಲ್ಲಿದೆಯೇ?

ಭೂಮಿಯು ಧ್ರುವಗಳಲ್ಲಿ ಸ್ವಲ್ಪ ಚಪ್ಪಟೆಯಾಗಿ ಮತ್ತು ಮಧ್ಯಭಾಗದಲ್ಲಿ ಸ್ವಲ್ಪ ಒಳಭಾಗಕ್ಕೆ ತಳ್ಳಲ್ಪಟ್ಟ ಆಕೃತಿಯಲ್ಲಿರುವುದು. ಭೂಮಿಯ ಈ ವಿಶೇಷವಾದ ಆಕೃತಿಯನ್ನು ಜಿಯೋಯಿಡ್ ಎಂದು ಕರೆಯುತ್ತಾರೆ.

ಭೂಗೋಳವು ಭೂಮಿಯ ನಿಜವಾದ ಮಾದರಿಯಾಗಿದೆಯಲ್ಲವೆ? ಭೂಮೇಲ್ಮೈಯ ವಿಶೇಷತೆಗಳನ್ನು ತಿಳಿದುಕೊಳ್ಳಲು ಮತ್ತು ಸ್ಥಾನ ನಿರ್ಣಯ ಮಾಡಲು ಭೂಗೋಳವನ್ನು ಉಪಯೋಗಿಸುವರು.

ಭೂಗೋಳದಲ್ಲಿ ಲಂಬವಾಗಿ ಮತ್ತು ಅಡ್ಡವಾಗಿ ಇರುವ ರೇಖೆಗಳು ಯಾವುವೆಂದು ಹಿಂದಿನ ತರಗತಿಗಳಲ್ಲಿ ತಿಳಿದಿರುವಿರಲ್ಲವೇ? ಈ ರೇಖೆಗಳ ಹೆಚ್ಚಿನ ವಿಶೇಷತೆಗಳನ್ನು ತಿಳಿದುಕೊಳ್ಳೋಣ.

## ಅಕ್ಷಾಂಶ ರೇಖೆಗಳು (Lines of Latitude)

ಅಕ್ಷಾಂಶ ರೇಖೆಗಳು ಭೂಕೇಂದ್ರವನ್ನು ಅಧಾರವಾಗಿರಿಸಿ ಭೂಮಧ್ಯರೇಖೆಯ ಎರಡೂ ಭಾಗಗಳಲ್ಲಿ ಸಮಾನ ಕೋನದ ಅಂತರದ ಬಿಂದುಗಳನ್ನು ಪರಸ್ಪರ ಜೋಡಿಸಿ ಎಳೆದ ಕಾಲ್ಪನಿಕ ರೇಖೆಗಳಾಗಿವೆ. ಇವುಗಳು ಭೂಮಿಯ ಮೇಲ್ಮೈಯಲ್ಲಿ ಭೂಮಧ್ಯರೇಖೆಗೆ ಸಮಾನಾಂತರವಾಗಿ ಎಳೆಯುವ ಅಕ್ಷಾಂಶ ವೃತ್ತಗಳಾಗಿವೆ.




ಚಿತ್ರ 4.1

ಚಿತ್ರ(4.1) ನಿರೀಕ್ಷಿಸಿ ಅತಿ ದೊಡ್ಡ ಅಕ್ಷಾಂಶ ವೃತ್ತವನ್ನು (Circle of Latitude) ಕಂಡುಹಿಡಿಯಿರಿ.

0° ಅಕ್ಷಾಂಶ ವೃತ್ತ ಅತಿ ದೊಡ್ಡದಾಗಿರುವುದೆಂದು ಕಂಡುಹಿಡಿದಿರಲ್ಲವೇ. ಇದುವೇ ಭೂಮಧ್ಯರೇಖೆ (Equator).

ಭೂಗೋಳದಲ್ಲಿ ಭೂಮಧ್ಯರೇಖೆಯ ಉತ್ತರ ಮತ್ತು ದಕ್ಷಿಣದಲ್ಲಿ ಎಳೆದಿರುವ ಅಕ್ಷಾಂಶ ರೇಖೆಗಳನ್ನು ನಿರೀಕ್ಷಿಸಿರಿ. ಎಲ್ಲಾ ಅಕ್ಷಾಂಶ ವೃತ್ತಗಳು ಒಂದೇ ಗಾತ್ರದಲ್ಲಿರುವುದೇ?

ಭೂಮಧ್ಯರೇಖೆಯಿಂದ ಎರಡೂ ಧ್ರುವಗಳಿಗೆ ಹೋದಂತೆ ಅಕ್ಷಾಂಶ ರೇಖೆಗಳ ಗಾತ್ರ ಚಿಕ್ಕದಾಗುತ್ತಿರುವುದನ್ನು ಕಾಣಬಹುದು.

### ಅಕ್ಷಾಂಶ ರೇಖೆಗಳನ್ನು ಎಳೆದು ನೋಡೋಣವೇ?

ಒಳಭಾಗ ಟೊಳ್ಳಾಗಿರದ ಒಂದು ರಬ್ಬರ್ ಚೆಂಡನ್ನು ಮಧ್ಯಭಾಗದಿಂದ ಛೇದಿಸಿರಿ. ಲಭ್ಯವಾದ ಎರಡು ಭಾಗಗಳಲ್ಲಿ ಕೋನ ಮಾಪಕವನ್ನು ಉಪಯೋಗಿಸಿ ಚಿತ್ರದಲ್ಲಿ ಕಾಣುವಂತೆ 0°ಯಿಂದ 90°ವರೆಗೆ ಕೋನದ ಅಳತೆಗಳನ್ನು ಗುರುತಿಸಿರಿ. ಕೋನದ ಅಳತೆಗಳಿಂದ ಚಿತ್ರದಲ್ಲಿ ತೋರಿಸಿರುವಂತೆ ಛೇದಿಸಿದ ಭಾಗದ ಮಧ್ಯಭಾಗದೆಡೆಗೆ ಗೆರೆಗಳನ್ನು ಎಳೆದು ಜೋಡಿಸಿರಿ. ಬಳಿಕ ಈ ಗೆರೆಗಳನ್ನು ಭೂಮೇಲ್ಮೈಗೆ ಮುಂದುವರಿಸಿ ಸಮಾನ ಕೋನದ ಅಳತೆಗಳನ್ನು ಜೋಡಿಸಿರಿ. ಅನಂತರ ಇನ್ನೊಂದು ಅರ್ಧಭಾಗದಲ್ಲಿ ಇದೇ ರೀತಿ ಗೆರೆಗಳನ್ನು ಎಳೆಯಿರಿ. ಎರಡು ಅರ್ಧಭಾಗಗಳನ್ನು ಸೇರಿಸಿ ಅಂಟಿಸಿರಿ. ಆಗ ಅಕ್ಷಾಂಶ ವೃತ್ತಗಳು ಬರೆದ ಚೆಂಡು ಲಭಿಸುವುದು.



ಭೂಮಧ್ಯರೇಖೆಯನ್ನು ಆಧಾರವಾಗಿರಿಸಿ ಭೂಮಿಯನ್ನು ಎರಡು ಅರ್ಧಗೋಳಗಳಾಗಿ ಕಲ್ಪಿಸಿಕೊಳ್ಳಬಹುದು. ಭೂಮಧ್ಯರೇಖೆಯ ಉತ್ತರ ಭಾಗದಲ್ಲಿರುವ ಅರ್ಧಗೋಳವನ್ನು ಉತ್ತರಾರ್ಧಗೋಳ (Northern Hemisphere) ಎಂದೂ ದಕ್ಷಿಣ ಭಾಗದಲ್ಲಿರುವ ಅರ್ಧಗೋಳವನ್ನು ದಕ್ಷಿಣಾರ್ಧಗೋಳ (Southern Hemisphere) ಎಂದೂ ಕರೆಯಲಾಗುತ್ತದೆ.



ಚಿತ್ರ 4.2

ಭೂಗೋಳವನ್ನು ನಿರೀಕ್ಷಿಸಿ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

ಭೂಮಧ್ಯರೇಖೆ (0° ಅಕ್ಷಾಂಶ ವೃತ್ತ) ಯಿಂದ ಉತ್ತರಕ್ಕೂ ದಕ್ಷಿಣಕ್ಕೂ ಹೋದಂತೆ

| ಉತ್ತರಾರ್ಧಗೋಳದಲ್ಲಿ ವ್ಯಾಪಿಸಿರುವ ಭೂಖಂಡಗಳು | ದಕ್ಷಿಣಾರ್ಧಗೋಳದಲ್ಲಿ ವ್ಯಾಪಿಸಿರುವ ಭೂಖಂಡಗಳು | ಎರಡೂ ಅರ್ಧಗೋಳಗಳಲ್ಲಿ ವ್ಯಾಪಿಸಿರುವ ಭೂಖಂಡಗಳು |
|---|---|---|
| | | |

ವೃತ್ತಗಳ ಗಾತ್ರ ಕಡಿಮೆಯಾಗುತ್ತಿರುವುದು ಗಮನಿಸಿದ್ದೀರಲ್ಲವೇ? ಅಕ್ಷಾಂಶ ವೃತ್ತಗಳ ಗಾತ್ರ ಕಡಿಮೆಯಾಗಿ 90° ಉತ್ತರ 90° ದಕ್ಷಿಣ ಎಂಬೀ ಬಿಂದುಗಳಲ್ಲಿ ಕೊನೆಗೊಳ್ಳುವುದನ್ನು ಕಾಣಬಹುದು. 90° ಉತ್ತರ ಅಕ್ಷಾಂಶವನ್ನು ಉತ್ತರಧ್ರುವ (North Pole) ಎಂದು 90° ದಕ್ಷಿಣ ಅಕ್ಷಾಂಶವನ್ನು ದಕ್ಷಿಣಧ್ರುವ (South Pole) ಎಂದು ಕರೆಯುವರು.



ಚಿತ್ರ 4.3

ಆಶಯ ವ್ಯಕ್ತಪಡಿಸಲಿರುವ ಚಿತ್ರೀಕರಣ

ಭೂಮಧ್ಯರೇಖೆಯ ಉತ್ತರಕ್ಕಿರುವ ಅಕ್ಷಾಂಶಗಳನ್ನು ಉತ್ತರ ಅಕ್ಷಾಂಶಗಳೆಂದೂ ದಕ್ಷಿಣಕ್ಕಿರುವ ಅಕ್ಷಾಂಶಗಳನ್ನು ದಕ್ಷಿಣ ಅಕ್ಷಾಂಶಗಳೆಂದು ಕರೆಯಲಾಗುತ್ತದೆ.



ಚಿತ್ರ 4.4

ಚಿತ್ರದಲ್ಲಿ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವಗಳನ್ನು ನಿರೀಕ್ಷಿಸಿರಿ. ಧ್ರುವಗಳನ್ನು ಜೋಡಿಸುವಂತೆ ಭೂಮಿಯ ಒಳಭಾಗದಲ್ಲಾಗಿ ಒಂದು ಸರಳ ರೇಖೆಯನ್ನು ಕಲ್ಪಿಸಿಕೊಂಡರೆ ಅದು ಭೂಮಿಯ ಆಧಾರ ರೇಖೆಯಾಗಿದೆ(Axis).

ಈ ಕಾಲ್ಪನಿಕ ಆಧಾರ ರೇಖೆಯನ್ನು ಆಧರಿಸಿ ಭೂಮಿಯ ಭ್ರಮಣ ನಡೆಸುವುದು. ಆಧಾರ ರೇಖೆಗೆ ಭೂಮಿಯ ಪರಿಕ್ರಮಣದ ಲಂಬದಿಂದ 23½° ವಾಲುವಿಕೆ ಇರುವುದು.

ಚಿತ್ರ 4.5 ಬಿ ನಿರೀಕ್ಷಿಸಿ ಆಧಾರ ರೇಖೆಯ ವಾಲುವಿಕೆಯನ್ನು ತಿಳಿದುಕೊಳ್ಳಿರಿ.




ಚಿತ್ರ 4.5 ಎ ಆಶಯ ವ್ಯಕ್ತಪಡಿಸಲಿರುವ ಚಿತ್ರೀಕರಣ




ಚಿತ್ರ 4.5 ಬಿ ಆಶಯ ವ್ಯಕ್ತಪಡಿಸಲಿರುವ ಚಿತ್ರೀಕರಣ

ಚಿತ್ರ 4.5 ಎ ಯನ್ನು ನಿರೀಕ್ಷಿಸಿ ಪ್ರಮುಖ ಅಕ್ಷಾಂಶ ರೇಖೆಗಳ ಪಟ್ಟಿ ಪೂರ್ತಿಗೊಳಿಸಿರಿ.

| ಪ್ರಮುಖ ಅಕ್ಷಾಂಶ ರೇಖೆಗಳು | ಡಿಗ್ರಿ ಅಳತೆ |
|---|---|
| ಭೂಮಧ್ಯರೇಖೆ | 0° |
| ಉತ್ತರಾಯಣ ರೇಖೆ | .................................................... |
| .................................................... | 23½° ದಕ್ಷಿಣ |
| ಆರ್ಟಿಕ್ ವೃತ್ತ | .................................................... |
| ಅಂಟಾರ್ಟಿಕ್ ವೃತ್ತ | 66½° ದಕ್ಷಿಣ |

## ರೇಖಾಂಶ ರೇಖೆಗಳು (Lines of Longitude)

ರೇಖಾಂಶ ರೇಖೆಗಳು ಭೂಕೇಂದ್ರವನ್ನು ಆಧರಿಸಿ ಉತ್ತರ - ದಕ್ಷಿಣ ಧ್ರುವಗಳನ್ನು ಜೋಡಿಸಿರುವ ಭೂಮಿಯ ಮೇಲ್ಮೈಯ ಮೂಲಕ ಎಳೆಯುವ ಕಾಲ್ಪನಿಕ ರೇಖೆಗಳಾಗಿವೆ. ಇವುಗಳು ಒಂದೇ ಗಾತ್ರದ ಅರ್ಧವೃತ್ತಗಳಾಗಿವೆ. ರೇಖಾಂಶ ರೇಖೆಗಳ ಆಧಾರದಲ್ಲಿ ಭೂಮಿಯಲ್ಲಿ ಸಮಯವನ್ನು ನಿರ್ಣಯಿಸಲಾಗುತ್ತದೆ. 0° ರೇಖಾಂಶ ಮತ್ತು 180° ರೇಖಾಂಶ ಪ್ರಧಾನ ರೇಖಾಂಶ ರೇಖೆಗಳಾಗಿವೆ. 1° ಅಂತರದಲ್ಲಿ ಭೂಮಿಯ ಎರಡು ಧ್ರುವಗಳನ್ನು ಜೋಡಿಸಿ ರೇಖಾಂಶ ರೇಖೆಗಳನ್ನು ಎಳೆಯುವುದೆಂದು ಸಂಕಲ್ಪಿಸಿರಿ. ಹಾಗಾದರೆ ಒಟ್ಟು 360 ರೇಖಾಂಶ ರೇಖೆಗಳನ್ನು ರಚಿಸಲು ಸಾಧ್ಯವಾಗುವುದು.




ಅಕ್ಷಾಂಶ ರೇಖೆಗಳನ್ನು ಗುರುತಿಸಿದಂತೆ ಚಿತ್ರವನ್ನು ನಿರೀಕ್ಷಿಸಿ ರಬ್ಬರ್ ಚೆಂಡಿನಲ್ಲಿ ರೇಖಾಂಶ ರೇಖೆಗಳನ್ನು ಗುರುತಿಸಿ ಅಳತೆಗಳನ್ನು ಬರೆಯಿರಿ.

ಚಿತ್ರ 4.6, 4.7 ನಿರೀಕ್ಷಿಸಿ ಪ್ರಧಾನ ರೇಖಾಂಶ ರೇಖೆಗಳನ್ನು ಪ್ರತ್ಯೇಕವಾಗಿ ಗುರುತಿಸಿರುವುದನ್ನು ಗಮನಿಸಿದಿರಲ್ಲವೇ? ಭೂಗೋಳವನ್ನು ನಿರೀಕ್ಷಿಸಿ ಈ ರೇಖೆಗಳನ್ನು ತಿಳಿಯಿರಿ. ಇವುಗಳ ಪ್ರತ್ಯೇಕತೆಗಳು ಯಾವುವು?

**ಪ್ರಧಾನ ರೇಖಾಂಶ ರೇಖೆಗಳು**




**ಚಿತ್ರ 4.6**




**ಚಿತ್ರ 4.7**

ಆಶಯ ವ್ಯಕ್ತಪಡಿಸಲಿರುವ ಚಿತ್ರೀಕರಣ

0° ರೇಖಾಂಶ ರೇಖೆ (ಅಂತಾರಾಷ್ಟ್ರೀಯ ಸಮಯರೇಖೆ)ಯನ್ನು ಪ್ರೈಮ್ ಮೆರಿಡಿಯನ್ ರೇಖೆ (Prime Meridian) ಎಂದು ಕರೆಯುವರು. ಲಂಡನ್‌ನ ಸಮೀಪದ ಗ್ರೀನ್ವಿಚ್ ಎಂಬ ಸ್ಥಳದ ಮೂಲಕ ಈ ರೇಖೆ ಹಾದುಹೋಗುವ ಕಾರಣ ಇದನ್ನು 'ಗ್ರೀನ್ವಿಚ್ ರೇಖೆ' ಎಂದು ಕರೆಯುತ್ತಾರೆ. 0° ರೇಖಾಂಶ ರೇಖೆಯ ನೇರ ವಿರುದ್ಧ ಭಾಗದಲ್ಲಿರುವುದು 180° ರೇಖಾಂಶ ರೇಖೆಯಾಗಿದೆ. ಇದನ್ನು ಆಧರಿಸಿ 'ಅಂತಾರಾಷ್ಟ್ರೀಯ ದಿನಾಂಕ ರೇಖೆ' (International Date Line) ಎಳೆಯಲಾಗಿದೆ. ಆದರೆ ಅಂತಾರಾಷ್ಟ್ರೀಯ ದಿನಾಂಕ ರೇಖೆ ಒಂದು ನೇರ ರೇಖೆಯಲ್ಲ. ಕಾರಣವನ್ನು ತಿಳಿಯಿರಿ.

ಪ್ರೈಮ್ ಮೆರಿಡಿಯನ್‌ನ ಆಧಾರದಲ್ಲಿ ಭೂಮಿಯನ್ನು ಪೂರ್ವಾರ್ಧ (Eastern Hemisphere), ಪಶ್ಚಿಮಾರ್ಧ ಗೋಳ (Western Hemisphere) ಎಂದು ಎರಡಾಗಿ ವಿಭಜಿಸಬಹುದು. ಗ್ರೀನ್ವಿಚ್ ರೇಖೆಯ ಪೂರ್ವದಲ್ಲಿರುವ ರೇಖಾಂಶಗಳನ್ನು ಪೂರ್ವ ರೇಖಾಂಶಗಳೆಂದೂ, ಪಶ್ಚಿಮದಲ್ಲಿರುವವುಗಳನ್ನು ಪಶ್ಚಿಮ ರೇಖಾಂಶಗಳೆಂದೂ ಕರೆಯುವರು.




ಚಿತ್ರ 4.8

ಚಿತ್ರ 4.8 ನ್ನು ನಿರೀಕ್ಷಿಸಿರಿ. ಪಶ್ಚಿಮಾರ್ಧಗೋಳ ಮತ್ತು ಪೂರ್ವಾರ್ಧಗೋಳವನ್ನು ತಿಳಿದುಕೊಳ್ಳಿರಿ. ಕೆಳಗೆ ಕೊಟ್ಟಿರುವ ದೇಶಗಳ ಯಾವ ಅರ್ಧಗೋಳದಲ್ಲಿರುವುದೆಂದು ಭೂಗೋಳದ ಸಹಾಯದಿಂದ ಕಂಡುಹಿಡಿದು ದೇಶಗಳ ಹೆಸರಿನ ಮುಂದೆ ಬರೆಯಿರಿ.

- ಭಾರತ ..............................................................
- ಅಮೇರಿಕಾ ಸಂಯುಕ್ತ ರಾಷ್ಟ್ರಗಳು ..............................................................
- ಬ್ರೆಜಿಲ್ ..............................................................
- ಇಂಡೋನೇಷ್ಯಾ ..............................................................

ಅಕ್ಷಾಂಶ - ರೇಖಾಂಶ ರೇಖೆಗಳ ಪರಿಚಯವಾಯಿತಲ್ಲವೇ. ಈ ಅಕ್ಷಾಂಶ - ರೇಖಾಂಶರೇಖೆಗಳನ್ನು ಅಧಾರವಾಗಿರಿಸಿ ಭೂಮಿಯಲ್ಲಿ ಒಂದು ಸ್ಥಳದ, ಪ್ರದೇಶದ ಮತ್ತು ವಸ್ತುವಿನ ನಿಖರವಾದ ಸ್ಥಾನ ನಿರ್ಣಯ ನಡೆಸುವುದು.

ಅಕ್ಷಾಂಶ-ರೇಖಾಂಶ ರೇಖೆಗಳನ್ನು ಚಿತ್ರೀಕರಿಸಿರುವುದನ್ನು ನೋಡಿರಿ (ಚಿತ್ರ 4.9). ಇದು ಅಕ್ಷಾಂಶ, ರೇಖಾಂಶ ರೇಖೆಗಳ ಜಾಲವಾಗಿದೆ. ಇದನ್ನು ಗ್ರಾಟಿಕ್ಯೂಲ್ (Graticule) ಎಂದು ಕರೆಯುತ್ತಾರೆ. ಭೂಪಟಗಳಲ್ಲಿ, ಅಟ್ಲಾಸ್‌ಗಳಲ್ಲಿ ಅಕ್ಷಾಂಶ, ರೇಖಾಂಶ ರೇಖೆಗಳ ಜಾಲವನ್ನು ಕಾಣಲು ಸಾಧ್ಯವಿದೆ.



ಚಿತ್ರ 4.9

ಚಿತ್ರವನ್ನು ನಿರೀಕ್ಷಿಸಿರಿ. ಭಾರತದ ಸ್ಥಾನವು ಯಾವೆಲ್ಲಾ ಅಕ್ಷಾಂಶ ರೇಖಾಂಶ ರೇಖೆಗಳ ಮಧ್ಯದಲ್ಲಿದೆ ಎಂದು ಕಂಡುಹಿಡಿದು ಪಟ್ಟಿ ಮಾಡಿರಿ.




| ಭಾರತದ ಸ್ಥಾನ | | |
|---|---|---|
| ಅಕ್ಷಾಂಶ | ...................................... ಯಿಂದ | ...................................... ವರೆಗೆ |
| ರೇಖಾಂಶ | ...................................... ಯಿಂದ | ...................................... ವರೆಗೆ |

## ಭೂಪಟ ಪ್ರಕ್ಷೇಪಗಳು (Map Projections)

ಭೂಮಿಯ ಮೇಲ್ಮೈಯ ವಿಶೇಷತೆಗಳನ್ನು ಸೂಕ್ಷ್ಮವಾಗಿ ಕಲಿಯಲು ಭೂಗೋಳಗಳು ಮಾತ್ರ ಸಾಕಾಗುವುದೇ?

ಭೂಮಿಯಲ್ಲಿ ಭಾರತದ ಸ್ಥಾನವು ಎಲ್ಲಿ ಎಂದು ನಿಖರವಾಗಿ ನಿರ್ಣಯಿಸಲು ಅಕ್ಷಾಂಶ - ರೇಖಾಂಶ ರೇಖೆಗಳ ಜಾಲವು ನಮಗೆ ಸಹಾಯಕವಾಗಿದೆ.

ಭೂಪಟ ನಿರ್ಮಾಣಕ್ಕಿರುವ ಚೌಕಟ್ಟು ಎಂದರೆ ಈ ಅಕ್ಷಾಂಶ - ರೇಖಾಂಶ ರೇಖೆಗಳ ಜಾಲವಾಗಿದೆ. ಭೂಪಟವು ಭೂಮಿಯ ಮೇಲ್ಮೈಯ ವಿಶೇಷತೆಗಳನ್ನು ಚಿತ್ರೀಕರಿಸಿದ ಸಮತಲದ ಮೇಲ್ಮೈಯಲ್ಲಾಗಿದೆ ಎಂದು ನಮಗೆ ತಿಳಿದಿದೆ. ದುಂಡಗಿನ ಭೂಮಿಯ ಮೇಲ್ಮೈ ವಕ್ರವಾಗಿದ್ದರೂ ಭೂಪಟ ನಿರ್ಮಿಸಬೇಕಾದುದು ಸಮತಲ ಮೇಲ್ಮೈಯಲ್ಲಾಗಿದೆ. ದುಂಡಗಿನ ಮೇಲ್ಮೈಯ ವಿಶೇಷತೆಗಳನ್ನು ಸಮತಲ ಮೇಲ್ಮೈಗೆ ಬದಲಾಯಿಸಿ ಚಿತ್ರಿಸುವುದು ಭೂಪಟ ನಿರ್ಮಾಣದ ಪ್ರಧಾನ ಸವಾಲುಗಳಾಗಿವೆ. ಒಂದು ಭೂಗೋಳವನ್ನು ಹರಡಿ ನಮಗೆ ಹೇಗೆ ಭೂಪಟ ನಿರ್ಮಿಸಲು ಸಾಧ್ಯವಾಗುವುದು. ಚಿತ್ರದಲ್ಲಿ ಕಾಣುವಂತೆ ಒಮ್ಮೆ ಹರಡಿ ನೋಡೋಣವೇ?



ಚಿತ್ರ 4.10

ಭೂಗೋಳವನ್ನು ಸಮತಲದ ಮೇಲ್ಮೈಗೆ ಬದಲಾಯಿಸಿದಾಗ ಗೋಳಾಕೃತಿಯಲ್ಲಿದ್ದ ಚಿತ್ರದ ಧ್ರುವ ಪ್ರದೇಶಗಳಲ್ಲಿ ಕೆಲವು ಭೂಖಂಡಗಳು ತುಂಡರಿಸಿದಂತೆ ಕಾಣುವುದಿಲ್ಲವೇ. ಇಂತಹ ಭೂಗೋಳವನ್ನು ಹರಡಿ ಭೂಪಟ ನಿರ್ಮಿಸಿದರೆ ವಿಕಲವಾದ ಭೂಪಟವು ಲಭಿಸುವುದು. ಭೂಗೋಳವನ್ನು ಒಂದು ಟ್ರೇಸಿಂಗ್ ಕಾಗದದಲ್ಲಿ ಸುತ್ತಿದ ನಂತರ ಭೂಖಂಡವನ್ನು ರಚಿಸಲು ಪ್ರಯತ್ನಿಸಿರಿ. ಸುಕ್ಕುಗಳು ಮತ್ತು ಮಡಚುವಿಕೆ ಉಂಟಾಗುವುದರಿಂದ ತಪ್ಪುಗಳಿರುವ ಭೂಪಟ ಲಭಿಸುವುದಲ್ಲವೇ. ಗೋಲಾಕೃತಿಯಲ್ಲಿರುವ ಭೂಗೋಳದ ಮೇಲ್ಮೈಯ ವಿಶೇಷತೆಗಳನ್ನು ಇಂತಹ ಸುಕ್ಕುಗಳು ಮತ್ತು ಮಡಚುವಿಕೆಗಳಿಲ್ಲದೆ ಹರಡಿದ ಮೇಲ್ಮೈಗೆ ಬದಲಾಯಿಸಿ ಹೇಗೆ ಭೂಪಟ ನಿರ್ಮಿಸಬಹುದು. ಇದಕ್ಕಾಗಿ ಭೂಪಟ ಪ್ರಕ್ಷೇಪಗಳು (Projections) ಎಂಬ ತಂತ್ರಜ್ಞಾನವನ್ನು ಬಳಸಲಾಗುತ್ತದೆ.

ಅಕ್ಷಾಂಶ - ರೇಖಾಂಶ ರೇಖೆಗಳ ಜಾಲವನ್ನು (Graticule) ಯಾವುದಾದರೂ ಸಮತಲದ ಮೇಲ್ಮೈಗೆ ವೈಜ್ಞಾನಿಕವಾಗಿ ಬದಲಾಯಿಸುವ ವಿಧಾನವನ್ನು 'ಭೂಪಟ ಪ್ರಕ್ಷೇಪಗಳು' ಎಂದು ಕರೆಯುತ್ತಾರೆ. ಇದಕ್ಕನುಸಾರವಾಗಿ ಪಾರದರ್ಶಕ ಭೂಗೋಳದಲ್ಲಿ ಬೆಳಕನ್ನು ಸಜ್ಜುಗೊಳಿಸಿ ಅಕ್ಷಾಂಶ-ರೇಖಾಂಶ ರೇಖೆಗಳು ಮತ್ತು ಮೇಲ್ಮೈ ವಿಶೇಷತೆಗಳನ್ನು ಸಮತಲ ಮೇಲ್ಮೈಗೆ ಬದಲಾಯಿಸುವುದು ಪರಂಪರಾಗತ ರೀತಿಯಾಗಿದೆ.



ಚಿತ್ರ 4.11

ಇವುಗಳನ್ನು ಹೇಗೆ ಎಳೆಯುವುದೆಂದು ನೋಡೋಣವೇ? ಒಂದು ಗಾಜಿನ ಜಾರ್‌ನ ಬಾಯಿಯ ಭಾಗ ಕೆಳಭಾಗದಲ್ಲಿ ಬರುವಂತೆ ಇರಿಸಿರಿ. ಜಾರ್‌ನ ಮೇಲ್ಮೈಯಲ್ಲಿ ಚಿತ್ರದಲ್ಲಿ ತೋರಿಸಿರುವಂತೆ ಮಾರ್ಕರ್ ಪೆನ್‌ನಿಂದ ಅಕ್ಷಾಂಶ ರೇಖಾಂಶ ರೇಖೆಗಳನ್ನು ಎಳೆಯಿರಿ.

ಈ ಗಾಜಿನ ಜಾರ್‌ನ ಮೇಲೆ ಒಂದು ಹರಡಿದ ಚಾರ್ಟ್ ಕಾಗದವನ್ನು ಇರಿಸಿರಿ. ಅನಂತರ ಜಾರಿನ ಒಳಭಾಗದಲ್ಲಿ ಒಂದು ಬೆಳಕಿನ ಮೂಲವನ್ನು ಇರಿಸಿರಿ. ಏನು ಗೋಚರಿಸುವುದು?



ಚಿತ್ರ 4.12

ಜಾರಿನ ಮೇಲೆ ಎಳೆದಿರುವ ಅಕ್ಷಾಂಶ - ರೇಖಾಂಶ ರೇಖೆಗಳ ನೆರಳು ಹರಡಿದ ಕಾಗದದ ಮೇಲೆ ಬೀಳುವುದನ್ನು ಕಾಣಬಹುದು. ಈ ಜಾಲವನ್ನು ಕಾಗದದಲ್ಲಿ ಎಳೆಯಿರಿ. ಎಳೆದ ಅಕ್ಷಾಂಶ, ರೇಖಾಂಶಗಳ ಡಿಗ್ರಿ ಅಳತೆಗಳನ್ನು ದಾಖಲಿಸಿದ ನಂತರ ಅವುಗಳ ಆಧಾರದಲ್ಲಿ ಭೂಖಂಡಗಳು ಮತ್ತು ದೇಶಗಳನ್ನು ಚಿತ್ರಿಸಿ ಭೂಪಟ ನಿರ್ಮಿಸಬಹುದು. ಈ ರೀತಿಯಲ್ಲಿ ಭೂಮಿಯ ಪ್ರತಿಯೊಂದು ಪ್ರದೇಶದ ಅಕ್ಷಾಂಶ, ರೇಖಾಂಶ ರೇಖೆಗಳ ಜಾಲವನ್ನು ನಕಲು ಮಾಡಿ ಆ ಪ್ರದೇಶದ ಭೂಪಟ ನಿರ್ಮಿಸಬಹುದು. ಮೇಲ್ಮೈಯ ಬೆಳಕಿನ ಸ್ಥಾನ ಬದಲಾಯಿಸಿ ಭೂಪ್ರಕ್ಷೇಪಗಳನ್ನು ತಯಾರಿಸಲು ಸಾಧ್ಯವಿದೆ. ಮೇಲ್ಮೈ ಆಕೃತಿಯ ಆಧಾರದಲ್ಲಿ ಭೂಪಟ ಪ್ರಕ್ಷೇಪಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು. ಅವುಗಳನ್ನು ಪರಿಚಯಿಸಿಕೊಳ್ಳೋಣವೇ?

### ವೃತ್ತಸ್ತಂಭಾಕೃತಿಯ ಪ್ರಕ್ಷೇಪ (Cylindrical Projection)

ಚಿತ್ರ 4.13ನ್ನು ನಿರೀಕ್ಷಿಸಿರಿ.

ಒಂದು ಪಾರದರ್ಶಕ ಭೂಗೋಳದಲ್ಲಿ ಬೆಳಕನ್ನು ಸಜ್ಜುಗೊಳಿಸಲಾಗಿದೆ. ಅದನ್ನು ವೃತ್ತಸ್ತಂಭಾಕೃತಿಯಲ್ಲಿರುವ ಮೇಲ್ಮೈಯಿಂದ ಸುತ್ತಲಾಗಿದೆ. ಭೂಗೋಳವನ್ನು ಸುತ್ತಿಕೊಂಡಿರುವ ವೃತ್ತಸ್ತಂಭಾಕೃತಿಯ ಮೇಲ್ಮೈಯಲ್ಲಿ ಅಕ್ಷಾಂಶ - ರೇಖಾಂಶ ರೇಖೆಗಳನ್ನು ದಾಖಲಿಸುವುದು. ಇದುವೇ ವೃತ್ತಸ್ತಂಭಾಕೃತಿ ಪ್ರಕ್ಷೇಪವಾಗಿದೆ (Cylindrical Projection). ಭೂಮಧ್ಯ ಪ್ರದೇಶಗಳ ನಿಖರವಾದ ಭೂಪಟ ನಿರ್ಮಾಣಕ್ಕೆ ಈ ಭೂಪ್ರಕ್ಷೇಪವನ್ನು ಬಳಸಲಾಗುತ್ತದೆ.



ಚಿತ್ರ 4.13

ಸಿಲಿಂಡರ್ ಆಕೃತಿಯಲ್ಲಿರುವ ಮೇಲ್ಮೈಯಲ್ಲಿ ಭೂಮಿಯ ವಿಶೇಷತೆಗಳನ್ನು ನಕಲು ಮಾಡಿ ನಿರ್ಮಿಸಿದರೆ ಲಭಿಸುವ ಭೂಪಟ.

**ಚಿತ್ರ 4.13, 4.14 ಆಶಯ ವ್ಯಕ್ತತೆಗಿರುವ ಚಿತ್ರೀಕರಣ ಮಾನ ಆಧಾರವಾಗಿಲ್ಲ**

### ಶೀರ್ಷತಲ ಪ್ರಕ್ಷೇಪ (Zenithal Projection)

ಚಿತ್ರ 4.14ನ್ನು ನಿರೀಕ್ಷಿಸಿ ಯಾವ ಪ್ರದೇಶದ ಅಕ್ಷಾಂಶ - ರೇಖಾಂಶ ಜಾಲವನ್ನು ದಾಖಲಿಸಲು ಪ್ರಕ್ಷೇಪವನ್ನು ಬಳಸುವರೆಂದು ಕಂಡುಹಿಡಿಯಿರಿ.

ಪಾರದರ್ಶಕವಾದ ಒಂದು ಭೂಗೋಳದ ಕೇಂದ್ರಭಾಗದಲ್ಲಿ ಬೆಳಕಿನ ಮೂಲವನ್ನು ಮತ್ತು ಮೇಲ್ಭಾಗದಲ್ಲಿ ಸಮತಲವಾದ ಮೇಲ್ಮೈಯನ್ನು ಇರಿಸುವುದು. ದೀಪ ಬೆಳಗುವಾಗ ಮೇಲೆ ಇರಿಸಿದ ಮೇಲ್ಮೈಯಲ್ಲಿ ಆ ಪ್ರದೇಶದ ಅಕ್ಷಾಂಶ - ರೇಖಾಂಶ ರೇಖೆಗಳ ಜಾಲ ಗೋಚರಿಸುವುದು. ಈ ರೀತಿಯಲ್ಲಿ ಶೀರ್ಷತಲ ಪ್ರಕ್ಷೇಪಗಳನ್ನು ಉಪಯೋಗಿಸಿ ಅಕ್ಷಾಂಶ - ರೇಖಾಂಶಗಳ ಜಾಲವನ್ನು ಒಂದು ಸಮತಲವಾದ ಮೇಲ್ಮೈಯಲ್ಲಿ ತಯಾರಿಸುವುದು.

ಮೇಲ್ಮೈಯಲ್ಲಿ ಧ್ರುವ ಪ್ರದೇಶಗಳ ವಿಶೇಷತೆಗಳನ್ನು ನಕಲು ಮಾಡಿ ನಿರ್ಮಿಸಿದ ಭೂಪಟ



ಚಿತ್ರ 4.14

### ಶಂಕು ಪ್ರಕ್ಷೇಪ (Conical Projection)



ಆಶಯ ವ್ಯಕ್ತತೆಗಿರುವ ಚಿತ್ರೀಕರಣ ಮಾನ ಆಧಾರವಾಗಿಲ್ಲ

ಚಿತ್ರ 4.15

ಶಂಕುವಿನ ಅಕೃತಿಯಲ್ಲಿರುವ ಮೇಲ್ಮೈಯಲ್ಲಿ ಅಕ್ಷಾಂಶ, ರೇಖಾಂಶ ರೇಖೆಗಳ ಜಾಲವನ್ನು ನಿರ್ಮಿಸಿದಾಗ ಲಭಿಸುವ ಭೂಪಟ

ಶಂಕು ಪ್ರಕ್ಷೇಪವು ಶಂಕು ಆಕೃತಿಯ ಮೇಲ್ಮೈಯಲ್ಲಿ ಅಕ್ಷಾಂಶ - ರೇಖಾಂಶಗಳ ಜಾಲವನ್ನು ದಾಖಲಿಸಿ ತಯಾರಿಸುವ ಪ್ರಕ್ಷೇಪ ರೀತಿಯಾಗಿದೆ. ಅಕ್ಷಾಂಶ - ರೇಖಾಂಶ ರೇಖೆಗಳ ನೆರಳನ್ನು ಶಂಕುವಿನ ಆಕೃತಿಯ ಮೇಲ್ಮೈಯಲ್ಲಿ ಎಳೆದು ಭೂಪಟ ನಿರ್ಮಿಸುವುದು. ಭೂಮಧ್ಯರೇಖಾ ಪ್ರದೇಶಗಳ ಭೂಪಟ ನಿರ್ಮಾಣಕ್ಕೆ ಈ ಪ್ರಕ್ಷೇಪವನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.

ಭೂಪ್ರಕ್ಷೇಪಗಳ ವಿಶೇಷತೆಗಳನ್ನು ಒಳಗೊಳ್ಳಿಸಿದ ಆಶಯ ಚಿತ್ರವನ್ನು ಪೂರ್ತಿಗೊಳಿಸಿರಿ.



ಮೂರು ರೀತಿಯ ಪ್ರಕ್ಷೇಪಗಳನ್ನು ತಿಳಿದಿರಲ್ಲವೇ?

ಭೂಮಿಯ ಮೇಲ್ಮೈ ವಿಶೇಷತೆಗಳನ್ನು ಸಮತಲ ಮೇಲ್ಮೈಗೆ ಬದಲಾಯಿಸಲು ಭೂಪ್ರಕ್ಷೇಪಗಳಲ್ಲದೆ, ಗಣಿತ ಶಾಸ್ತ್ರದ ಸಂಕೇತಗಳನ್ನು ಉಪಯೋಗಿಸಲಾಗುತ್ತದೆ. ಹೊಸ ತಂತ್ರಜ್ಞಾನದ ಸಹಾಯದಿಂದ ಸೂಕ್ಷ್ಮತೆ ಮತ್ತು ನಿಖರತೆಯನ್ನು ಪಾಲಿಸಿ ಇಂದು ಭೂಪಟಗಳನ್ನು ತಯಾರಿಸಲಾಗುತ್ತದೆ.



**ನಗರಸಭೆಯಲ್ಲಿ ಜಿ. ಐ.ಎಸ್ ಮ್ಯಾಪಿಂಗ್ ಯೋಜನೆಗೆ ಆರಂಭ**

ಮಾಹಿತಿ ಸಂಗ್ರಹದಲ್ಲಿ ಹೆಚ್ಚಿನ ನಿಖರತೆ, ವೇಗ ಮತ್ತು ವೈಜ್ಞಾನಿಕತೆ ಲಭಿಸುವ ಉದ್ದೇಶದಿಂದ ಭೂ ಮಾಹಿತಿ ವ್ಯವಸ್ಥೆ (GIS)ನ್ನು ಉಪಯೋಗಿಸಿ ನಗರ ಸಭೆಯ ಸಂಪೂರ್ಣ ಡಿಜಿಟಲೈಸೇಷನ್ ಯೋಜನೆಯು ಆರಂಭವಾಯಿತು.

ವಾರ್ತೆಯನ್ನು ಓದಿದಿರಲ್ಲವೇ?

ಭೂ ಮಾಹಿತಿ ವ್ಯವಸ್ಥೆ (Geographic Information System) ಏನೆಂದು ಆಲೋಚಿಸಿರುವಿರಾ? ಭೂ ಮಾಹಿತಿ ವ್ಯವಸ್ಥೆ ಎಂದರೆ ಭೌಗೋಳಿಕ ಮಾಹಿತಿಯನ್ನು ಸಂಗ್ರಹಿಸುವುದು, ವಿಶ್ಲೇಷಿಸುವುದು ಮತ್ತು ಅಗತ್ಯದ ಸಂದರ್ಭಗಳಲ್ಲಿ ಭೂಪಟ, ಗ್ರಾಫ್, ಪಟ್ಟಿಗಳು ಇತ್ಯಾದಿ ರೂಪದಲ್ಲಿ ದೃಶ್ಯಾವಿಷ್ಕರಿಸಲು ಉಪಯೋಗಿಸುವ ವ್ಯವಸ್ಥೆಯಾಗಿದೆ. ಭೂಪಟಗಳನ್ನು ಆಧರಿಸಿ ಮಾಹಿತಿ ತಂತ್ರಜ್ಞಾನಗಳಲ್ಲಿ ಭೂಮಾಹಿತಿ ವ್ಯವಸ್ಥೆಯನ್ನು ಸೇರಿಸಲಾಗುತ್ತದೆ. ಭೂಪಟಗಳನ್ನು ಕಂಪ್ಯೂಟರ್‌ಗಳ ಸಹಾಯದಿಂದ ಡಿಜಿಟಲ್ ರೂಪಕ್ಕೆ ಬದಲಾಯಿಸಿ ಅಕ್ಷಾಂಶ-ರೇಖಾಂಶ ರೇಖೆಗಳ ಸ್ಥಾನ ನಿರ್ಣಯಿಸಲಾಗುತ್ತದೆ. ಭೂಪಟ ನಿರ್ಮಾಣ, ಸಂಪನ್ಮೂಲಗಳ ನಿರ್ವಹಣೆ, ಪ್ರಾಕೃತಿಕ ದುರಂತ ನಿವಾರಣೆ, ಪ್ರವಾಸೋದ್ಯಮ, ಸಾರಿಗೆ, ಮಾಹಿತಿವಿನಿಮಯ ಮುಂತಾದ ಕ್ಷೇತ್ರಗಳಲ್ಲಿ ಈ ತಂತ್ರಜ್ಞಾನ ಉಪಯೋಗಿಸಬಹುದು.



ನಿತ್ಯ ಜೀವನದಲ್ಲೂ ಭೂ ಮಾಹಿತಿ ವ್ಯವಸ್ಥೆ (GIS)ಯನ್ನು ಉಪಯೋಗಿಸುವ ವಿವಿಧ ಸಂದರ್ಭಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.

ಪ್ರಕೃತಿದತ್ತ ಮತ್ತು ಮನುಷ್ಯ ನಿರ್ಮಿತವಾದ ಎಲ್ಲಾ ಭೌಗೋಳಿಕ ವಿಶೇಷತೆಗಳ ನಿಖರವಾದ ಸ್ಥಾನ, ದಿಕ್ಕು, ಸಮುದ್ರಮಟ್ಟದಿಂದ ಇರುವ ಎತ್ತರ ಎಂಬಿವುಗಳನ್ನು ತಿಳಿದುಕೊಳ್ಳಲು, ಭೂಮಿಯ ಮೇಲ್ಮೈ ವಿಶ್ಲೇಷಣೆ, ಭೂಪಟ ಓದು ಅನಿವಾರ್ಯವಾಗಿದೆ. ಭೂ ಮೇಲ್ಮೈಯಲ್ಲಿನ ಜಲಮೂಲಗಳು, ಕಾಡುಗಳು, ಕೃಷಿ ಭೂಮಿಗಳು, ಪಾಳು (ಬಂಜರು) ಭೂಮಿಗಳು, ಗ್ರಾಮಗಳು, ಪಟ್ಟಣಗಳು, ಸಾರಿಗೆ, ವಾರ್ತಾ ವಿನಿಮಯ ವಿಧಾನಗಳು ಮುಂತಾದವುಗಳನ್ನು ಚಿತ್ರೀಕರಿಸಿದ ವಿವಿಧ ಭೂಪಟಗಳನ್ನು ಆಧುನಿಕ ಕಾಲದಲ್ಲಿ ಧಾರಾಳವಾಗಿ ಉಪಯೋಗಿಸಲಾಗುತ್ತಿದೆ. ಗೋಳಾಕೃತಿಯಲ್ಲಿರುವ ಭೂಮಿಯ ಮೇಲ್ಮೈ ವಿಶೇಷತೆಗಳನ್ನು ಸಮತಲ ಮೇಲ್ಮೈಗೆ ಬದಲಾಯಿಸುವಾಗ ಉಂಟಾಗುವ ಬದಲಾವಣೆಗಳನ್ನು ತಿಳಿದುಕೊಂಡಿರಲ್ಲವೆ. ನಿತ್ಯಜೀವನದಲ್ಲಿ ಭೂಪಟವನ್ನು ಬಳಸುವ ಸಂದರ್ಭಗಳಲ್ಲಿ ಸರಿಯಾದ ಭೂಪಟ ಓದು ಅನಿವಾರ್ಯವಾಗಿದೆ.

## ಮುಂದುವರಿದ ಚಟುವಟಿಕೆಗಳು

ಭಾರತದ ಅಕ್ಷಾಂಶ - ರೇಖಾಂಶ ಸ್ಥಾನವನ್ನು ಕಂಡುಕೊಂಡಂತೆ ಕೊಟ್ಟಿರುವ ದೇಶಗಳ ಅಕ್ಷಾಂಶ - ರೇಖಾಂಶ ಸ್ಥಾನವನ್ನು ಭೂಗೋಳ, ಅಟ್ಲಾಸ್, ಪ್ರಪಂಚ ಭೂಪಟ ಎಂಬಿವುಗಳ ಸಹಾಯದಿಂದ ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ದೇಶ | | ಅಕ್ಷಾಂಶ ಸ್ಥಾನ | ರೇಖಾಂಶ ಸ್ಥಾನ |
|---|---|---|---|
| 1 | ಜಪಾನ್ | .......... ಯಿಂದ .......... ವರೆಗೆ | .......... ಯಿಂದ .......... ವರೆಗೆ |
| 2 | ಶ್ರೀಲಂಕಾ | .......... ಯಿಂದ .......... ವರೆಗೆ | .......... ಯಿಂದ .......... ವರೆಗೆ |
| 3 | ಆಸ್ಟ್ರೇಲಿಯಾ | .......... ಯಿಂದ .......... ವರೆಗೆ | .......... ಯಿಂದ .......... ವರೆಗೆ |

- ಭೂಗೋಳ, ಅಟ್ಲಾಸ್, ಜಾಗತಿಕ ಭೂಪಟ ಎಂಬಿವುಗಳ ಸಹಾಯದಿಂದ ಕೊಟ್ಟಿರುವ ದೇಶಗಳು ಯಾವ ಅರ್ಧಗೋಳದಲ್ಲಿ ಒಳಪಡುವುದು ಎಂದು ಪಟ್ಟಿಯಲ್ಲಿ ಬರೆಯಿರಿ.

ಬ್ರೆಜಿಲ್ ನೋರ್ವೆ ಕೆನಡಾ
ಇಂಡೋನೇಷ್ಯಾ ದಕ್ಷಿಣ ಆಫ್ರಿಕಾ ಕಿನ್ಯಾ
ಸೌದಿ ಆರೇಬಿಯಾ ಅರ್ಜೆಂಟೀನಾ ಅಂಕೋಲಾ

| ಉತ್ತರಾರ್ಧಗೋಳದಲ್ಲಿ ಮಾತ್ರ ವ್ಯಾಪಿಸಿರುವ ದೇಶಗಳು | ದಕ್ಷಿಣಾರ್ಧಗೋಳದಲ್ಲಿ ಮಾತ್ರ ವ್ಯಾಪಿಸಿರುವ ದೇಶಗಳು | ಎರಡೂ ಅರ್ಧಗೋಳಗಳಲ್ಲಿ ವ್ಯಾಪಿಸಿರುವ ದೇಶಗಳು |
|---|---|---|
| | | |
| | | |
| | | |

- ಕೆಳಗೆ ನೀಡಿರುವ ವರ್ಕ್ ಶೀಟ್ ಪೂರ್ತಿಗೊಳಿಸಿರಿ.

| | |
|---|---|
| ಅತಿ ದೊಡ್ಡ ಅಕ್ಷಾಂಶ ವೃತ್ತ. | ಭೂಮಧ್ಯರೇಖೆ |
| ಭೂಮಧ್ಯರೇಖೆಯ ಉತ್ತರ ಭಾಗದಲ್ಲಿರುವ ಅರ್ಧಗೋಳ | ........................................... |
| ............................................................. | ದಕ್ಷಿಣಾರ್ಧಗೋಳ |
| ಭೂಕೇಂದ್ರವನ್ನು ಆಧಾರವಾಗಿಸಿ ಉತ್ತರ - ದಕ್ಷಿಣ ಧ್ರುವಗಳ ಜೋಡಿಸಿ ಎಳೆಯುವ ಕಾಲ್ಪನಿಕ ರೇಖೆಗಳು | ........................................... |
| $0^\circ$ ರೇಖಾಂಶರೇಖೆ | ........................................... |
| ............................................................. | ಅಂತರಾಷ್ಟ್ರೀಯ ದಿನಾಂಕರೇಖೆ |



# 5

# ಸಂಸ್ಕೃತಿ ಮತ್ತು ಸಾಂಸ್ಕೃತಿಕ ವೈವಿಧ್ಯಗಳು

ಭಾರತವು ಹಲವು ಬಣ್ಣಗಳು, ಭಾಷೆಗಳು, ಪರಂಪರೆಗಳನ್ನು ಹೊಂದಿರುವ ದೇಶವಾಗಿದೆ. ಉತ್ತರದ ಮಂಜು ಆವರಿಸಿದ ಹಿಮಾಲಯದಿಂದ ತೊಡಗಿ ದಕ್ಷಿಣದ ಕಡಲತೀರದ ವರೆಗೆ, ಪ್ರತಿ ಪ್ರದೇಶವು ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದೆ. ನಮ್ಮದು ಅಸಂಖ್ಯಾತ ಉತ್ಸವಗಳ ಮತ್ತು ಸಂಗೀತಗಳ ನಾಡಾಗಿದೆ. ವಿವಿಧ ನೃತ್ಯಪ್ರಕಾರಗಳಲ್ಲಿ ಪ್ರತಿಯೊಂದೂ ನಮ್ಮ ಜನರ ವಿಭಿನ್ನವಾದ ಕಥೆಗಳನ್ನು ಹೇಳುತ್ತವೆ. ಹಾಗಿದ್ದರೂ ಈ ವೈವಿಧ್ಯಗಳ ಮಧ್ಯೆ ಮಹಾನ್ ವ್ಯಕ್ತಿಗಳಾದ ಚಿಂತಕರ ಮತ್ತು ಸೈನಿಕರ ಜೀವನ ಕಥೆಗಳಿಂದ ಶ್ರೀಮಂತವಾದ ಮತ್ತು ಶಕ್ತಿಯುತವಾದ ಐಕ್ಯತೆಯನ್ನು ಹಂಚಿಕೊಳ್ಳುತ್ತಿದೆ. ಭಿನ್ನತೆಗಳನ್ನು ಅಂಗೀಕರಿಸಲೂ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣಲೂ ಇರುವ ಸಾಮರ್ಥ್ಯದಲ್ಲಿ ಭಾರತದ ಶಕ್ತಿ ಅಡಗಿದೆ.



ಆಕರ - 'ಭಾರತ ದರ್ಶನ' (1946) - ಜವಹರ್ ಲಾಲ್ ನೆಹರೂ

ಇದು ನಮ್ಮ ಭಾರತದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರೂರವರು ತಮ್ಮ 'ಭಾರತ ದರ್ಶನ' ಎಂಬ ಪುಸ್ತಕದಲ್ಲಿ ಭಾರತದ ವೈವಿಧ್ಯದ ಕುರಿತು ಹೇಳಿದ ಮಾತುಗಳಾಗಿವೆ.

ಇಲ್ಲಿ ಯಾವೆಲ್ಲಾ ವೈವಿಧ್ಯಗಳನ್ನು ಸೂಚಿಸಲಾಗಿದೆ?

- ಭಾಷೆ
-
-
-
-
-



ಮಿಲೆ ಸುರ್ ಮೇರಾ ತುಮ್ಹಾರಾ, ತೋ ಸುರ್ ಬನೇ ಹಮಾರಾ
ಸುರ್ ಕಿ ನದಿಯಾಂ ಹರ್ ದಿಶಾ ಸೆ, ಬಹ್‌ತೇ ಸಾಗರ್ ಮೇಂ ಮಿಲೇಂ...

* * * * *

ನನ್ನ ಸ್ವರವೂ ನಿಮ್ಮ ಸ್ವರವು, ಒಟ್ಟು ಸೇರಿ ನಮ್ಮ ಸ್ವರವಾಯಿತು

* * * * *

ಇವುಗಳು ಭಾರತದ ರಾಷ್ಟ್ರೀಯ ಐಕ್ಯತೆಯನ್ನು ಬಲಪಡಿಸುವುದಕ್ಕಾಗಿ 1988 ರಲ್ಲಿ ರಚಿಸಿದ ‘ಮಿಲೆ ಸುರ್ ಮೇರಾ’ ಎಂದು ಆರಂಭವಾಗುವ ಹಾಡಿನ ಕೆಲವು ಸಾಲುಗಳಾಗಿವೆ. ಈ ಹಾಡನ್ನು ‘ವಿವಿಧತೆಯಲ್ಲಿ ಏಕತೆ’ ಎಂಬ ಆಶಯವನ್ನು ಪ್ರತಿಬಿಂಬಿಸಿ, ವಿವಿಧ ಭಾಷೆಗಳ ಸಾಲುಗಳನ್ನು ಸೇರಿಸಿ ರಚಿಸಲಾಗಿದೆ. ವಿವಿಧ ನದಿಗಳು ಒಂದೇ ಸಾಗರದಲ್ಲಿ ಸಂಗಮಿಸುವಂತೆ ವಿವಿಧ ಜನರು, ಸಂಸ್ಕೃತಿಗಳು, ಆಶಯಗಳು ಒಟ್ಟು ಸೇರುವಾಗ ಸುಂದರವಾದ ಐಕ್ಯತೆ ಮೂಡುವುದು ಎಂಬ ಸಂದೇಶವು ಈ ಹಾಡಿನಲ್ಲಿದೆ. ಈ ಐಕ್ಯತೆಯು ವೈಯಕ್ತಿಕವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿಯೂ ಮುಖ್ಯವಾಗಿದೆ.

ರಾಷ್ಟ್ರೀಯ ಐಕ್ಯತೆ ಪ್ರತಿಬಿಂಬಿಸುವ ಕನ್ನಡದ ಕವಿತೆಗಳ ಮತ್ತು ಹಾಡುಗಳನ್ನು ಕಂಡುಕೊಂಡು ತರಗತಿಯಲ್ಲಿ ಗುಂಪಾಗಿ ಹಾಡಿರಿ.




ಕೇರಳ ರಾಜ್ಯೋತ್ಸವಕ್ಕೆ ಸಂಬಂಧಿಸಿ ತಯಾರಿಸಿದ ಕರಪತ್ರವನ್ನು ನಿರೀಕ್ಷಿಸಿರಿ. ನಾವೂ ಇದೇ ರೀತಿಯ ಕರಪತ್ರವನ್ನು ತಯಾರಿಸೋಣವೇ.

ತರಗತಿಯಲ್ಲಿ ಮಕ್ಕಳು ವಿವಿಧ ಗುಂಪುಗಳಾಗಿ, ಸಮಾಜ ವಿಜ್ಞಾನ ಲ್ಯಾಬ್‌ನ ಸೌಕರ್ಯಗಳನ್ನು ಬಳಸಿ ಭಾರತದ ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿ ಡಿಜಿಟಲ್ ಕರಪತ್ರವನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಿರಿ. ಭಾಷೆ, ವೇಷ, ಕಲೆ, ಹಬ್ಬಗಳು, ವಿನೋದ, ಆಹಾರ ಇತ್ಯಾದಿ ಮಾಹಿತಿಗಳನ್ನು ಸೇರಿಸುವಿರಲ್ಲವೇ.

ರಿಥಿಯು ರಾಜಸ್ಥಾನದಿಂದ ಉದ್ಯೋಗಕ್ಕಾಗಿ ಕೇರಳಕ್ಕೆ ಬಂದು ಸ್ಥಿರವಾಸ ಮಾಡಿದ ಒಂದು ಕುಟುಂಬದ ಸದಸ್ಯೆಯಾಗಿರುವಳು. ಚೋಳವನಂ ಸರಕಾರಿ ಯು.ಪಿ. ಶಾಲೆಯ ವಿದ್ಯಾರ್ಥಿಯಾದ ರಿಥಿಯು ತನ್ನ ಗೆಳೆಯರೊಂದಿಗೆ ಹಂಚಿಕೊಂಡ ಸಂದೇಶವನ್ನು ಓದಿರಿ.

ಗಿಳಿವಿಂಡು

ಪ್ರೀತಿಯ ಸ್ನೇಹಿತರೇ,
ನಮ್ಮ ಶಾಲೆಯಲ್ಲಿ ಏನೆಲ್ಲಾ ವಿಶೇಷಗಳಿವೆ? ಹರಿಯಾಲಿ ತೀಜ್ ಆಚರಿಸಲು ನಾನು ನನ್ನ ಊರಿಗೆ ಬಂದಿದ್ದೇನೆ. ಶ್ರಾವಣ ತಿಂಗಳಲ್ಲಿ (ಕೇರಳದಲ್ಲಿ ಸಿಂಹಮಾಸ) ನಾವು ತೀಜ್ ಆಚರಿಸುವೆವು. ಕೇರಳದಲ್ಲಿ ಓಣಂಗೆ ಉಯ್ಯಾಲೆ ಹಾಕುವರಲ್ಲವೇ. ಹಾಗೆಯೇ ತೀಜ್ ಗೆ ನಾವೂ ಸಹ ಉಯ್ಯಾಲೆ ಹಾಕುವೆವು. ಹೊಸ ಬಟ್ಟೆಬರೆಗಳು, ಸಿಹಿತಿಂಡಿಗಳು, ನೆಂಟರ ಮನೆಯಲ್ಲಿ ಔತಣಕೂಟ ಹೀಗೆ ಅನೇಕ ವಿಶೇಷಗಳು ಈ ಹಬ್ಬದ ಭಾಗವಾಗಿವೆ.
ಪುಷ್ಕರ್ ಮೇಳ ಮತ್ತು ಗಜಮೇಳಗಳನ್ನು ನಾವು ಆಚರಿಸುವೆವು. ಇಂತಹ ಹಬ್ಬದ ಸಮಯದಲ್ಲಿ ಗಂಡಸರು ರುಮಾಲು ಮತ್ತು ಕೋಟುಗಳನ್ನು ಧರಿಸುತ್ತಾರೆ. ಹೆಂಗಸರು ಚೋಲಿ, ರವಿಕೆ (ಕುಪ್ಪಸ) ಸೀರೆಯನ್ನು ಧರಿಸುವರು. ಹೆಚ್ಚಿನ ವಿಶೇಷಗಳನ್ನು ನೇರವಾಗಿ ತಿಳಿಸುವೆನು. ಓಣಂಗಿಂತ ಮೊದಲು ನಾನು ಅಲ್ಲಿಗೆ ಮರಳುತ್ತೇನೆ. ನಾವು ತಯಾರಿಸಿದ ಇಲ್ಲಿನ ವಿಶೇಷವಾದ ಸಿಹಿತಿಂಡಿಯನ್ನು ನಿಮಗೆಲ್ಲರಿಗೂ ತರುತ್ತೇನೆ.

20



14

ಓಣಂ ಹಬ್ಬದೊಂದಿಗೆ ಸಾಮ್ಯವಿರುವ ಯಾವೆಲ್ಲಾ ವಿಶೇಷತೆಗಳು ರಾಜಸ್ಥಾನದ 'ತೀಜ್' ಆಚರಣೆಗಿದೆ?

- 
- 

ಕೇರಳದಿಂದ ವ್ಯತ್ಯಸ್ತವಾದ ಯಾವೆಲ್ಲಾ ವಿಶೇಷತೆಗಳನ್ನು ರಾಜಸ್ಥಾನದಲ್ಲಿ ಕಾಣಲು ಸಾಧ್ಯವಿದೆ?

- 
- 
- 

ರಾಜಸ್ಥಾನ ಮತ್ತು ಕೇರಳದಲ್ಲಿನ ಆಹಾರ, ವಸ್ತ್ರ, ಆಚಾರಗಳು, ಆಚರಣೆಗಳು ಎಂಬಿವುಗಳಲ್ಲಿ ಕೆಲವು ಸಾಮ್ಯ ಮತ್ತು ವ್ಯತ್ಯಾಸಗಳಿವೆ ಎಂದು ನಾವು ತಿಳಿದೆವಲ್ಲವೇ. ಪ್ರತಿ ಊರಿನಲ್ಲೂ ಇಂತಹ ವಿಶೇಷಗಳನ್ನು ಧಾರಾಳವಾಗಿ ಕಾಣಬಹುದು.

ನಿಮ್ಮ ಊರಿನ ಪ್ರಮುಖ ಹಬ್ಬಗಳು, ಭಾಷೆ, ವಸ್ತ್ರವಿಧಾನ, ಆಹಾರ, ಕಲೆ - ಕ್ರೀಡಾ ವಿನೋದಗಳು, ಸ್ಮಾರಕಗಳು ಇತ್ಯಾದಿಗಳನ್ನು ಕೊಟ್ಟಿರುವ ಆಶಯ ಭೂಪಟದಲ್ಲಿ ಪೂರ್ತಿಗೊಳಿಸಿರಿ. ಹಿರಿಯರಲ್ಲಿ ಕೇಳಿ ತಿಳಿದು ಕೆಳಗೆ ಕೊಟ್ಟಿರುವ ಆಶಯ ಚಿತ್ರವನ್ನು ಪೂರ್ತಿಗೊಳಿಸಿರಿ.




ಪೂರ್ತಿಗೊಳಿಸಿದ ಆಶಯಚಿತ್ರದ ಆಧಾರದಲ್ಲಿ 'ನನ್ನ ಊರು' ಎಂಬ ಶೀರ್ಷಿಕೆಯಲ್ಲಿ ವಿವರಣೆಯನ್ನು ತಯಾರಿಸಿ ಸ್ಕೂಲ್ ವಿಕಿಯಲ್ಲಿ ಸೇರಿಸಿರಿ.

ನನ್ನ ಊರು ಎಂಬ ವಿವರಣೆಯಲ್ಲಿ ನಾವು ಸೇರಿಸಿರುವ ವಿಶೇಷತೆಗಳು ನಮ್ಮ ಊರಿನ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಸಂಸ್ಕೃತಿ ಎಂದರೇನು?

ನಮ್ಮ ಆಹಾರ, ವೇಷ, ಭಾಷೆ ಮುಂತಾದವು ಸೇರಿ ನಮ್ಮ ಸಂಸ್ಕೃತಿ ರೂಪುಗೊಳ್ಳುವುದು. ನಮ್ಮ ಆಲೋಚನೆ ಮತ್ತು ವರ್ತಿಸುವ ರೀತಿ ನಮ್ಮ ಸಂಸ್ಕೃತಿಯ ಭಾಗವೇ ಆಗಿದೆ. ಸಮಾಜದ ಸದಸ್ಯರೆಂಬ ನೆಲೆಯಲ್ಲಿ ನಮಗೆ ಪರಂಪರಾಗತವಾಗಿ ಲಭಿಸುವುದೇ ಸಂಸ್ಕೃತಿ. ಮಾನವರ ಎಲ್ಲಾ ಸಾಧನೆಗಳಿಗೆ ಸಂಸ್ಕೃತಿ ಎಂದು ಕರೆಯಬಹುದು.


ಇ.ಬಿ. ಟೈಲರ್

ಇ.ಬಿ. ಟೈಲರ್ 1871 ರಲ್ಲಿ ಪ್ರಕಟಿಸಿದ 'ಪ್ರಿಮಿಟ್ಟಿವ್ ಕಲ್ಚರ್' ಎಂಬ ಪುಸ್ತಕದ ಮೊದಲ ಸಾಲಿನಲ್ಲಿ ಸಂಸ್ಕೃತಿಯನ್ನು ಈ ರೀತಿಯಲ್ಲಿ ನಿರ್ವಚಿಸಿದ್ದಾರೆ. ಸಂಸ್ಕೃತಿ ಎಂದರೆ 'ಸಮಾಜದ ಒಬ್ಬ ಸದಸ್ಯರೆಂಬ ನೆಲೆಯಲ್ಲಿ ಮಾನವರು ಗಳಿಸಿದ ವಿಜ್ಞಾನ, ನಂಬಿಕೆ, ಕಲೆ, ಸದಾಚಾರ, ನಿಯಮ, ಸಂಪ್ರದಾಯ, ಇತರ ಸಾಮರ್ಥ್ಯಗಳು, ಅಭ್ಯಾಸಗಳು ಎಂಬಿವುಗಳ ಸಂಕೀರ್ಣವಾದ ಮೊತ್ತವಾಗಿದೆ.'

ಸಂಸ್ಕೃತಿಯು ಮಾನವರನ್ನು ಇತರ ಜೀವಜಾಲಗಳಿಂದ ಭಿನ್ನವಾಗಿಸುತ್ತದೆ. ಪ್ರತಿ ವ್ಯಕ್ತಿಯೂ ಪ್ರತಿ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಜನಿಸುತ್ತಾರೆ. ಪ್ರತಿ ವ್ಯಕ್ತಿಯೂ ಸಮಾಜೀಕರಣ ಪ್ರಕ್ರಿಯೆಯ (Socialisation) ಮೂಲಕ ಸ್ವ ಸಂಸ್ಕೃತಿಯನ್ನು ಗಳಿಸುವನು.

### ಸಮಾಜೀಕರಣ (Socialisation)

ಸಮಾಜೀಕರಣವು ನಾವು ಜೀವಿಸುವ ಸಮಾಜದಲ್ಲಿ ನಾವು ಹೇಗೆ ವರ್ತಿಸುವೆವು, ಹೇಗೆ ಹಸ್ತಕ್ಷೇಪಗಳನ್ನು ಮಾಡಬೇಕು ಎಂಬುದನ್ನು ಕಲಿಯುವ ಪ್ರಕ್ರಿಯೆಯಾಗಿದೆ. ಇದು ಜನನದಿಂದ ಆರಂಭವಾಗಿ ಜೀವನ ಪೂರ್ತಿ ಮುಂದುವರಿಯುವುದು. ಕುಟುಂಬ, ಶಿಕ್ಷಣ, ಗೆಳೆಯರು, ಮಾಧ್ಯಮಗಳು ಮುಂತಾದವುಗಳೆಲ್ಲ ಸಮಾಜೀಕರಣಕ್ಕೆ ಸಹಾಯ ಮಾಡುವ ಘಟಕಗಳಾಗಿವೆ.

ಕಲೆ, ಸಂಗೀತ, ಸಾಹಿತ್ಯ, ತತ್ವಶಾಸ್ತ್ರ, ಧರ್ಮ, ವಿಜ್ಞಾನ ಎಂಬಿವುಗಳೆಲ್ಲ ಸಂಸ್ಕೃತಿಯ ವಿಭಿನ್ನ ಘಟಕಗಳಾಗಿವೆ. ಇವುಗಳೆಲ್ಲ ಮಾನವ ನಿರ್ಮಿತವಲ್ಲವೇ? ಆದ್ದರಿಂದಲೇ ಸಂಸ್ಕೃತಿಯು ಮಾನವ ನಿರ್ಮಿತವೆಂದು ಪರಿಗಣಿಸಲಾಗಿದೆ. ಸಂಸ್ಕೃತಿಯಲ್ಲಿ ಭೌತಿಕ ಮತ್ತು ಭೌತಿಕೇತರವಾದ ಘಟಕಗಳಿವೆ. ಮೇಲ್ನೋಟಕ್ಕೆ ಕಾಣಲು ಸಾಧ್ಯವಿರುವ, ರೂಪಗಳಿರುವ ಆಹಾರ, ವೇಷಭೂಷಣ, ಗೃಹಪಯೋಗಿ ವಸ್ತುಗಳು ಮೊದಲಾದವು ಭೌತಿಕ ಸಂಸ್ಕೃತಿಯ (Material Culture) ಘಟಕಗಳಾಗಿವೆ. ಆದರೆ ಅಗೋಚರವಾದ, ರೂಪವಿಲ್ಲದ ನಂಬಿಕೆಗಳು, ಆಲೋಚನೆಗಳು, ಆಶಯಗಳು ಮೊದಲಾದವುಗಳು ಭೌತಿಕೇತರ ಸಂಸ್ಕೃತಿಯ (Non - Material Culture) ಘಟಕಗಳಾಗಿವೆ.



ಕೆಳಗೆ ನೀಡಿರುವವುಗಳನ್ನು ಭೌತಿಕ ಸಂಸ್ಕೃತಿ, ಭೌತಿಕೇತರ ಸಂಸ್ಕೃತಿ ಎಂದು ವರ್ಗೀಕರಿಸಿ ಪಟ್ಟಿ ಮಾಡಿರಿ. ಹೆಚ್ಚಿನ ಉದಾಹರಣೆಗಳನ್ನು ಕಂಡುಕೊಂಡು ಸೇರಿಸಿರಿ.

ಕನ್ನಡ, ಅಂಗಿ, ಪುಸ್ತಕ, ಧರ್ಮದ ನಂಬಿಕೆಗಳು, ಪಾತ್ರೆಗಳು, ಮನೆ, ಚೀಲ, ಸ್ನೇಹ, ದೂರವಾಣಿ, ಹಾರೆ, ಬಹುಮಾನ, ಜ್ಞಾನ

| **ಭೌತಿಕ ಸಂಸ್ಕೃತಿ** (Material Culture) | **ಭೌತಿಕೇತರ ಸಂಸ್ಕೃತಿ** (Non - Material Culture) |
|---|---|
| | |






ಆಶಯ ಚಿತ್ರವನ್ನು ನಿರೀಕ್ಷಿಸಿ ಸಂಸ್ಕೃತಿ, ಸಂಸ್ಕೃತಿಯ ಘಟಕಗಳು ಎಂಬಿವುಗಳನ್ನು ವಿವರಿಸಿ ಟಿಪ್ಪಣಿ ತಯಾರಿಸಿರಿ.

ಜಗತ್ತಿನಾದ್ಯಂತ ವೈವಿಧ್ಯಪೂರ್ಣವಾದ ಸಮಾಜಗಳು, ಸಂಸ್ಕೃತಿಗಳು ಅಸ್ತಿತ್ವದಲ್ಲಿವೆ. ನಮ್ಮ ದೇಶವಾದ ಭಾರತದ ಸಂಸ್ಕೃತಿಯೂ ವೈವಿಧ್ಯತೆಯಿಂದ ಸಮೃದ್ಧವಾಗಿದೆ. ನಮ್ಮದು ಅನೇಕ ಧರ್ಮಗಳು - ಜಾತಿಗಳು - ಬುಡಕಟ್ಟು ಸಮುದಾಯಗಳು ಹೀಗೆ ವಿವಿಧ ವೈವಿಧ್ಯಗಳಿರುವ ದೇಶವಾಗಿದೆ. ಪ್ರತಿಯೊಂದು ವಿಭಾಗಗಳಿಗೂ ತನ್ನದೇ ಆದ ಪರಂಪರೆ ಮತ್ತು ಸಂಸ್ಕೃತಿಯಿದೆ. ಅದೇ ರೀತಿ ವೈವಿಧ್ಯಮಯ ಭಾಷೆಗಳೂ ಭಾರತದಲ್ಲಿ ನೆಲೆನಿಂತಿವೆ.



ಚಿತ್ರ 5.1

- ನಮ್ಮ ಕರೆನ್ಸಿ ನೋಟಿನಲ್ಲಿ ಎಷ್ಟು ಭಾಷೆಗಳಿವೆ ಎಂದು ತಿಳಿಯಿರಿ.
- ನಮ್ಮ ಸಂವಿಧಾನದಲ್ಲಿ ಸೇರಿಸಿರುವ ಭಾಷೆಗಳು ಯಾವುವೆಂದು ತಿಳಿಯಿರಿ.

ವಿವಿಧ ದೇಶಗಳ ಸಾಂಸ್ಕೃತಿಕ ವಿಶೇಷತೆಗಳನ್ನು ಸೇರಿಸಿ ಪೋಸ್ಟರ್ ತಯಾರಿಸೋಣ. ಎಲ್ಲರೂ ಗುಂಪುಗಳಾಗಿರಿ. ವಿವಿಧ ದೇಶಗಳ ಹೆಸರು ಬರೆದಿರುವ ಕಾರ್ಡುಗಳಿಂದ ಪ್ರತಿ ಗುಂಪು ಒಂದು ಕಾರ್ಡನ್ನು ಆರಿಸಿರಿ. ಓದಿನ ಸಾಮಗ್ರಿಗಳ ಮತ್ತು ಇಂಟರ್‌ನೆಟ್‌ನ ಸಹಾಯದಿಂದ ಕೆಳಗೆ ನೀಡಿರುವ ಸಾಂಸ್ಕೃತಿಕ ವಿಶೇಷತೆಗಳ ಆಧಾರದಲ್ಲಿ ಪೋಸ್ಟರ್ ತಯಾರಿಸಿ ಮಂಡಿಸಿರಿ.

- ಪಾರಂಪರಿಕ ವಸ್ತ್ರಧಾರಣೆ
- ಪರಂಪರಾಗತ ಆಹಾರ
- ಮನೋರಂಜನೆಗಳು
- ಹಬ್ಬಗಳು
- ಭಾಷೆ
- ಸಂಶೋಧನೆಗಳು

ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ಸಂಸ್ಕೃತಿಗಳು ವಿಭಿನ್ನವಾಗಿರುವುದೆಂದು ತಿಳಿದಿರಲ್ಲವೇ. ಇಂತಹ ಸಂಸ್ಕೃತಿಗಳಿಗೆ ಅನೇಕ ವಿಶೇಷತೆಗಳಿವೆ. ಅವುಗಳು ಯಾವುವೆಂದು ತಿಳಿಯೋಣ.

## ಸಂಸ್ಕೃತಿಯ ವಿಶೇಷತೆಗಳು

### 1. ಸಂಸ್ಕೃತಿ ಕಲಿಕೆಯಿಂದ ಬರುವಂತದ್ದು (Culture is Learnt)


ಚಿತ್ರ 5.2

ಓಣಂ ಕೇರಳದ ಪ್ರಧಾನ ಹಬ್ಬಗಳಲ್ಲಿ ಒಂದಾಗಿದೆ. ನೀವೂ ಶಾಲೆಯಲ್ಲಿ ಓಣಂ ಹಬ್ಬವನ್ನು ಆಚರಿಸುತ್ತೀರಲ್ಲವೇ.

ಓಣಂ ಆಚರಣೆಗೆ ಯಾವೆಲ್ಲಾ ಪೂರ್ವ ಸಿದ್ಧತೆಗಳನ್ನು ನಡೆಸುತ್ತಾರೆ?

- 
- 

ಇಂತಹ ವಿಚಾರಗಳನ್ನು ನೀವು ಎಲ್ಲಿಂದ ಕಲಿತಿರುವಿರಿ?

- 
- 

ಸಂಸ್ಕೃತಿಯು ಜನ್ಮಸಿದ್ಧವಾಗಿ ಲಭಿಸಿರುವುದಲ್ಲ. ಸಂಸ್ಕೃತಿಯು ಕುಟುಂಬ, ಶಿಕ್ಷಣ, ಗೆಳೆಯರು, ಸಮಾಜ ಎಂಬಿವುಗಳೊಂದಿಗಿನ ಹಸ್ತಕ್ಷೇಪ ಮತ್ತು ಸಮಾಜೀಕರಣದ ಮೂಲಕ ನಾವು ಗಳಿಸುವುದಾಗಿದೆ. ಹಿರಿಯರನ್ನು ಗೌರವಿಸುವುದು ಹೇಗೆ ಎಂದು ನಾವು ಕುಟುಂಬದಿಂದ ಸಾಮಾನ್ಯವಾಗಿ ಕಲಿಯುವುದು. ಸಮಾಜದಲ್ಲಿ ನಾವು ಹೇಗೆ ವರ್ತಿಸಬೇಕೆಂದು ಕುಟುಂಬ, ಶಾಲೆ, ಗೆಳೆಯರು, ಸಮಾಜ ಮುಂತಾದವುಗಳಿಂದ ಕಲಿಯುವೆವು. ಸಮಾಜ ಮತ್ತು ವ್ಯಕ್ತಿಗಳನ್ನು ರೂಪಿಸುವಲ್ಲಿ ಸಂಸ್ಕೃತಿಯು ಪ್ರಧಾನ ಪಾತ್ರವಹಿಸುವುದು. ಒಬ್ಬ ವ್ಯಕ್ತಿ ಸ್ವ ಸಂಸ್ಕೃತಿಯ ಕುರಿತು ಕಲಿತು ಅದನ್ನು ರೂಢಿಸಿಕೊಳ್ಳುವುದನ್ನು ಸ್ವಸಂಸ್ಕೃತಿ ಅರ್ಜಿಸಿಕೊಳ್ಳುವಿಕೆ (Enculturation) ಎಂದು ಕರೆಯುತ್ತಾರೆ.

ನೀವು ಕಲಿತುಕೊಂಡ ಕೆಲವು ಸಂಸ್ಕೃತಿಯ ರೀತಿಗಳು ಯಾವುವು?

- ರಾಷ್ಟ್ರಗೀತೆ ಹಾಡುವ ಸಂದರ್ಭದಲ್ಲಿ ಎದ್ದು ನಿಲ್ಲುವುದು.
- 
- 
- 

## 2. ಸಂಸ್ಕೃತಿಯು ಹಂಚಿಕೊಳ್ಳಲ್ಪಟ್ಟುದು (Culture is Shared)

ಶಾಲೆಯಲ್ಲಿ ನೀವು ಓಣಂ ಸದ್ಯವನ್ನು ನಿಮ್ಮ ಗೆಳೆಯರ ಜೊತೆಯಾಗಿ ಸೇವಿಸುವುದಲ್ಲವೇ.
ಓಣಂ ಸದ್ಯದ ವಿಶೇಷತೆಗಳೇನು?

- ಎಲ್ಲಾ ವಿಭಾಗದ ಜನರು ಜೊತೆಯಾಗಿ ಕುಳಿತು ಆಹಾರ ಸೇವಿಸುವರು.
- 
- 

ಓಣಂ ಸದ್ಯ ಎನ್ನುವುದು ಕೇವಲ ಆಹಾರ ಮಾತ್ರವೇ? ಸಮಾಜದ ವಿವಿಧ ಸ್ತರದ ಜನರು ಒಟ್ಟು ಸೇರುವ ಅನುಭವ ಕೂಡ ಅಲ್ಲವೇ. ನೆಲದಲ್ಲಿ ಕುಳಿತು ಬಾಳೆ ಎಲೆಯಲ್ಲಿ ಬಡಿಸಿದ ಆಹಾರ ಸೇವಿಸುವಂತಹ ಸಾಮಾನ್ಯ ಸಂಪ್ರದಾಯ ಓಣಂನ ಭಾಗವಾಗಿದೆ. ಅದು ಏಕತೆಯ ಪ್ರಜ್ಞೆ ಮತ್ತು ಸಾಮಾಜಿಕ ಸಹಭಾಗಿತ್ವದ ಭಾವನೆಯನ್ನು ಬೆಳೆಸುವುದು. ಆಹಾರದ ಮೂಲಕ ಮತ್ತು ಹಬ್ಬಗಳ ಮೂಲಕ ಸಂಸ್ಕೃತಿಯನ್ನು ಒಟ್ಟಾಗಿ ಸ್ವೀಕರಿಸಿ ಹಸ್ತಾಂತರಿಸಲಾಗುತ್ತದೆ. ಈ ಮೂಲಕ ಸಮಾಜದ ಸದಸ್ಯರ ಮಧ್ಯೆ ಸಂಸ್ಕೃತಿಯ ಪರಸ್ಪರ ಹಂಚುವಿಕೆಯು ನಡೆಯುವುದು.

ನಿಮ್ಮ ಪ್ರದೇಶದಲ್ಲಿ ಕಂಡುಬರುವ ಉತ್ಸವಗಳ (ಕಾರ್ನಿವಲ್, ಕೃಷಿ ಮೇಳ, ಫಿಲ್ಮ್ ಫೆಸ್ಟಿವಲ್, ಸಾಹಿತ್ಯೋತ್ಸವ ಇತ್ಯಾದಿ) ಚಿತ್ರಗಳು ಮತ್ತು ಸಾಂಸ್ಕೃತಿಕ ವಿಶೇಷತೆಗಳನ್ನು ಸಂಗ್ರಹಿಸಿ ಭಿತ್ತಿಪತ್ರಿಕೆ ತಯಾರಿಸಿರಿ.

## 3. ಸಂಸ್ಕೃತಿಯು ಸಾಂಕೇತಿಕವಾದದ್ದು (Culture is Symbolic )

ನಮ್ಮ ರಾಷ್ಟ್ರೀಯತೆಯನ್ನು ಪ್ರತಿನಿಧೀಕರಿಸುವ ಯಾವೆಲ್ಲಾ ಸಂಕೇತಗಳು ನಿಮಗೆ ತಿಳಿದಿವೆ?

- ರಾಷ್ಟ್ರಗೀತೆ
- 
- 
- 



ಚಿತ್ರ 5.3

ಚಿತ್ರಗಳನ್ನು ಗಮನಿಸಿರಿ. ಇವುಗಳು ಭಾರತೀಯ ರಾಷ್ಟ್ರೀಯತೆ ಮತ್ತು ಸಂಸ್ಕೃತಿಯ ಕೆಲವು ಸಂಕೇತಗಳಾಗಿವೆ. ರಾಷ್ಟ್ರಗೀತೆ, ರಾಷ್ಟ್ರಧ್ವಜ, ದೇಶಭಕ್ತಿ ಗೀತೆ ಎಂಬಿವುಗಳು ನಮ್ಮಲ್ಲಿ ದೇಶಭಕ್ತಿಯ ಭಾವನೆಯನ್ನುಂಟು ಮಾಡುತ್ತವೆ. ರಾಷ್ಟ್ರೀಯತೆಯು ದೇಶಭಕ್ತಿ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಪ್ರತಿನಿಧೀಕರಿಸುತ್ತದೆ. ಈ ರೀತಿ ಭಾಷೆ, ಸನ್ನೆಗಳು (ಹಿರಿಯರು ಅಥವಾ ಅತಿಥಿಗಳನ್ನು ಕಂಡಾಗ ಕೈಮುಗಿಯುವುದು), ವಸ್ತುಗಳು (ಸ್ಮಾರಕಗಳು,ಧಾರ್ಮಿಕ ಚಿಹ್ನೆಗಳು) ಮುಂತಾದ ಸಂಕೇತಗಳನ್ನು ಸಂಸ್ಕೃತಿಯನ್ನು ಸೂಚಿಸಲು ಬಳಸುತ್ತಾರೆ. ಈ ಸಂಕೇತಗಳು ಸಂಸ್ಕೃತಿಯನ್ನು, ಮೌಲ್ಯಗಳನ್ನು ಪರಿಪೋಷಿಸಲು ಸಹಾಯ ಮಾಡುವುದು.

ನಿಮ್ಮ ಪ್ರದೇಶದಲ್ಲಿ ಸಂಸ್ಕೃತಿಯ ಭಾಗವಾಗಿ ಉಪಯೋಗಿಸುವ ಸಂಕೇತಗಳು ಮತ್ತು ಅವುಗಳ ವಿಶೇಷತೆಗಳನ್ನು ಕಂಡುಹಿಡಿದು ಭಿತ್ತಿ ಪತ್ರಿಕೆ ತಯಾರಿಸಿ ಪ್ರದರ್ಶಿಸಿರಿ.

### 4. ಸಂಸ್ಕೃತಿ ಕ್ರಿಯಾತ್ಮಕವಾದದ್ದು (Culture is Dynamic)

ವಿವಾಹ ವಾರ್ಷಿಕೋತ್ಸವಕ್ಕೆ ಆಗಮಿಸಿದ ಮೊಮ್ಮಕ್ಕಳು ಮತ್ತು ಅವರ ಗೆಳೆಯರಲ್ಲಿ ಅಜ್ಜಿಯು ವಿವಾಹ ಆಚರಣೆಗಳಲ್ಲಿ ಉಂಟಾದ ಬದಲಾವಣೆಗಳನ್ನು ಹಂಚಿಕೊಳ್ಳುವುದನ್ನು ಗಮನಿಸಿರಿ..



ನನ್ನ ಬಾಲ್ಯದಲ್ಲಿ ಮದುವೆಗಳು ಬಹಳ ಸರಳವಾಗಿದ್ದವು. ನಮ್ಮ ಮದುವೆ ನಡೆದುದು ಮನೆಯ ಅಂಗಳದ ಚಪ್ಪರದಲ್ಲಾಗಿತ್ತು. ಹತ್ತಿರದ ಸಂಬಂಧಿಗಳನ್ನು ಮತ್ತು ಕುಟುಂಬದವರನ್ನು ಮಾತ್ರ ಆಹ್ವಾನಿಸಲಾಗಿತ್ತು. ನನ್ನ ಸಂಬಂಧಿಕರೆಲ್ಲರು ಸೇರಿ ಒಟ್ಟಾಗಿ ಅಡುಗೆ ಮಾಡಿದರು. ಅಂದಿನ ಕಾಲದಲ್ಲಿ ಮದುವೆ ಸಮಾರಂಭಗಳಿಗೆ ಮತ್ತು ಆಚಾರಗಳಿಗೆ ಹೆಚ್ಚಿನ ಗಮನ ನೀಡಲಾಗಿತ್ತು.

ನನ್ನ ಮೊಮ್ಮಗಳ ಮದುವೆ ಒಂದು ಉತ್ಸವವೇ ಆಗಿತ್ತು. ಸುಂದರವಾಗಿ ಅಲಂಕರಿಸಿದ ಅತಿ ವಿಶಾಲವಾದ ಆಡಿಟೋರಿಯಂ, ವೇದಿಕೆಯ ತುಂಬ ಫೋಟೋಗ್ರಾಫರ್‌ಗಳು ಮತ್ತು ವೀಡಿಯೋಗ್ರಾಫರ್‌ಗಳು. ನಮ್ಮ ಕಾಲದಲ್ಲಿ ಕೇವಲ ಒಂದು ದಿನದ ಸಮಾರಂಭ ಮಾತ್ರವಿತ್ತು. ಆದರೆ ಇಂದು ಅರಶಿನ ಮದುವೆ, ಮದರಂಗಿ ಹಾಕುವುದರಿಂದ ಆರಂಭಿಸಿ ಮದುವೆಗೆ ಮೊದಲೇ ಏನೆಲ್ಲಾ ಸಮಾರಂಭಗಳು! ಮದುವೆ ಕಾರ್ಯದಲ್ಲಿ ಏನೆಲ್ಲಾ ಬದಲಾವಣೆಗಳಾಗಿವೆ... ಎಲ್ಲಾ ವಿಷಯಗಳಿಗೆ ಇವೆಂಟ್ ಮ್ಯಾನೇಜ್‌ಮೆಂಟ್ ತಂಡ ನೇತೃತ್ವ ನೀಡುತ್ತಿದೆ. ಅಡುಗೆ ತಯಾರಿಗೆ, ಆಹಾರ ಬಡಿಸಲು ಪ್ರತ್ಯೇಕ ತಂಡವೇ ಇತ್ತು. ನಾನು ಕಂಡು ಕೇಳರಿಯದ ಅನೇಕ ಆಹಾರ ಪದಾರ್ಥಗಳು ಊಟದಲ್ಲಿದ್ದವು. ಸರಳವಾದ ಸಮಾರಂಭವಾಗಿದ್ದ ಮದುವೆ ಕಾರ್ಯಕ್ರಮಗಳು ಎಷ್ಟೊಂದು ಬದಲಾವಣೆಯಾಗಿವೆ.....




ಚಿತ್ರ 5.4

ಇವುಗಳು ಮದುವೆ ಸಮಾರಂಭದಲ್ಲಿ ಉಂಟಾದ ಆಧುನಿಕ ಪ್ರವೃತ್ತಿಗಳನ್ನು ಸೂಚಿಸುವ ಚಿತ್ರಗಳಾಗಿವೆ. ಮದುವೆ ಸಮಾರಂಭಗಳಲ್ಲಿ ಉಂಟಾದ ಬದಲಾವಣೆಗಳನ್ನು ಅಜ್ಜಿ ಸೂಚಿಸಿದರಲ್ಲವೇ. ಅವುಗಳು ಯಾವುವು?

- ವಿವಾಹ ಸತ್ಕಾರದಲ್ಲಿ
-
-
-
-
-

ಸಂಬಂಧಿಕರು, ಗೆಳೆಯರು, ಊರವರು ಹೀಗೆ ಎಲ್ಲರೂ ಭಾಗವಹಿಸುವ ಮದುವೆ ಕಾರ್ಯಕ್ರಮವು ಒಂದು ಸಾಮಾಜಿಕ ಒಗ್ಗೂಡುವಿಕೆಯಾಗಿತ್ತು. ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಿಂದ ಮದುವೆಯಂತಹ ಸಮಾರಂಭಗಳಲ್ಲಿ ದೊಡ್ಡ ಬದಲಾವಣೆಗಳು ಉಂಟಾಗುತ್ತಿವೆ. ಮದುವೆಗೆ ಸಂಬಂಧಿಸಿ ನಡೆಯುವ ಆಡಂಬರಗಳಿಂದಾಗಿ ಈಗ ಹೊಸದಾಗಿ ಅನೇಕ ಉದ್ಯೋಗ ಕ್ಷೇತ್ರಗಳು ಅಭಿವೃದ್ಧಿಹೊಂದಿ ಅನೇಕ ಜನರಿಗೆ ಉದ್ಯೋಗ ಲಭಿಸುತ್ತಿದೆ. ಎಂಬ ಅಭಿಪ್ರಾಯವನ್ನು ನೀವು ಒಪ್ಪುವಿರಾ?

ಮದುವೆಯಂತಹ ಕಾರ್ಯಕ್ರಮಗಳನ್ನು ಬಹಳ ಅದ್ದೂರಿಯಾಗಿ ನಡೆಸುವುದರ ಬದಲು ತುಂಬಾ ಸರಳವಾಗಿ ನಡೆಸುವುದರ ಕುರಿತು ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

ಮದುವೆಯು ಸರಳವಾದ ಕಾರ್ಯಕ್ರಮಗಳಿಂದ ಅತಿ ಸಂಕೀರ್ಣವಾದ ಮತ್ತು ದುಬಾರಿ ಸಮಾರಂಭಗಳಾಗಿ ಬದಲಾಗಿವೆ. ಹಾಗಿದ್ದರೂ ವಿವಾಹದ ಸಂಪ್ರದಾಯಗಳು ಹೊಸ ಬದಲಾವಣೆಗಳೊಂದಿಗೆ ಅನುಸರಿಸುತ್ತಿರುವುದನ್ನು ನೀವು ಗಮನಿಸಿರುವಿರಲ್ಲವೇ. ಹೀಗೆ ಸಂಸ್ಕೃತಿಯು ಏಕಕಾಲದಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಸೇರಿಸಿಕೊಂಡು ಬದಲಾವಣೆಗಳಿಗೆ ಒಳಗಾಗುತ್ತಿದೆ.

ಸಾಮಾಜಿಕ ಜಾಲತಾಣಗಳ ವಿಕಾಸ ನಮ್ಮ ಸಂಸ್ಕೃತಿಯ ಭಾಗವಾದ ಆಹಾರ, ವೇಷಭೂಷಣ ಎಂಬಿವುಗಳ ಮೇಲೆ ಪ್ರಭಾವ ಬೀರಿದೆಯೇ? ತರಗತಿಯಲ್ಲಿ ಚರ್ಚಿಸಿ ಟಿಪ್ಪಣಿ ತಯರಿಸಿರಿ.

### 5. ಸಂಸ್ಕೃತಿ ಸಾಂಪ್ರದಾಯಿಕವಾದದ್ದು (Culture is Customary)

## ದೈವಾರಾಧನೆ



ದೈವಾರಾಧನೆ ಎಂಬುದು ಉತ್ತರ ಕೇರಳದ ಒಂದು ಅನುಷ್ಠಾನ ಕಲೆಯಾಗಿದೆ. ಈ ಕಲೆಯಲ್ಲಿ ವೈವಿಧ್ಯಪೂರ್ಣವಾದ ವಿಧಿ ವಿಧಾನಗಳಿವೆ. 'ವೀಳ್ಯ ಕೊಡುವುದು' (ಅಡಯಾಳಂ ಕೊಡುಕ್ಕಲ್) ಎಂಬುದು ಕೋಲದ ದಿನವನ್ನು ನಿಗದಿಪಡಿಸಿ, ವ್ಯಕ್ತಿಗೆ ಕೋಲ ಕಟ್ಟಲು ಒಪ್ಪಿಸುವ ಮೊದಲ ಕಾರ್ಯಕ್ರಮವಾಗಿದೆ. ದೈವ ಕಟ್ಟುವ ವ್ಯಕ್ತಿ ಒಂದರಿಂದ ಏಳು ದಿನಗಳವರೆಗೆ ವ್ರತವನ್ನು ಆಚರಿಸಬೇಕಾಗುತ್ತದೆ. ಬನಗಳಲ್ಲಿ ಮತ್ತು ದೈವಸ್ಥಾನಗಳಲ್ಲಿ ವರ್ಷದಲ್ಲೊಮ್ಮೆ ದೈವ ಕಟ್ಟುವ ಕಾರ್ಯಕ್ರಮವಿರುತ್ತದೆ. ಆಧುನಿಕ ಕಾಲದಲ್ಲೂ ನೆಲೆನಿಂತಿರುವ ದೈವಾರಾಧನೆಯು ಸಂಪ್ರದಾಯದ ಮುಂದುವರಿಕೆ ಹಾಗೂ ಸಾಂಸ್ಕೃತಿಕ ಸಮೃದ್ಧಿಯನ್ನು ನೆನಪಿಸುವ ಗ್ರಾಮೀಣ ದೃಶ್ಯಗಳಾಗಿವೆ.

ದೈವಾರಾಧನೆಗೆ ಸಂಬಂಧಿಸಿ ಕೆಲವು ಸಂಪ್ರದಾಯಗಳನ್ನು ಓದಿದಿರಲ್ಲವೇ. ಅವುಗಳು ಯಾವುವು?

- 
- 
- 
- 

ದೈವಾರಾಧನೆಯಂತಹ ಅನೇಕ ಅನುಷ್ಠಾನ ಕಲೆಗಳು ಕೇರಳದ ಸಮೃದ್ಧವಾದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಹೀಗೆ ನಮ್ಮ ಸಮಾಜದಲ್ಲಿ ಅನೇಕ ಸಾಂಪ್ರದಾಯಿಕ ರೀತಿಗಳು ನೆಲೆನಿಂತಿವೆ. ಅವುಗಳು ಪೂರ್ವಜರಿಂದ ಹೊಸತಲೆಮಾರಿಗೆ ಹಸ್ತಾಂತರಗೊಳ್ಳುವವುಗಳಾಗಿವೆ.

ದೈವಾರಾಧನೆಗಳಂತಹ ಅನುಷ್ಠಾನ ಕಲೆಗಳ ಕುರಿತು ಹೆಚ್ಚಿನ ಮಾಹಿತಿಗಳನ್ನು ತಿಳಿಯುವುದಕ್ಕಾಗಿ ಪರಂಪರಾಗತ ಕಲಾವಿದರೊಂದಿಗೆ ಸಂದರ್ಶನವೊಂದನ್ನು (ಆನ್ ಲೈನ್ / ಆಫ್ ಲೈನ್) ಏರ್ಪಡಿಸಿರಿ. ಸಂದರ್ಶನ ಪ್ರಶ್ನಾವಳಿಯನ್ನು ಅಧ್ಯಾಪಕರ ಸಹಾಯದಿಂದ ತಯಾರಿಸಿರಿ.

ಕೆಳಗೆ ನೀಡಿರುವ ಸೂಚಕಗಳು ಸಂಸ್ಕೃತಿಯ ಯಾವ ವಿಶೇಷತೆಗೆ ಸಂಬಂಧಿಸಿವೆ ಎಂದು ಕಂಡುಹಿಡಿದು ಆಶಯ ಚಿತ್ರವನ್ನು ಪೂರ್ತಿಗೊಳಿಸಿರಿ.

**ಸೂಚಕಗಳು**

• ಪಡೆಯಣಿಯ ಕಾರ್ಯಕ್ರಮಗಳು • ಇವೆಂಟ್ ಮ್ಯಾನೇಜ್‌ಮೆಂಟ್ • ಪೂವಲಿ • ಶಾಂತಿಯನ್ನು ಸೂಚಿಸುವ ಬಿಳಿಬಣ್ಣ • ಎಲ್ಲಾ ವಿಭಾಗದ ಜನರು ಒಟ್ಟು ಸೇರಿ ಓಣಂ ಭೋಜನ ಸೇವಿಸುವುದು.



## ಸಾಂಸ್ಕೃತಿಕ ಬದಲಾವಣೆಗಳು

ಸಂಸ್ಕೃತಿಯು ಕ್ರಿಯಾತ್ಮಕವಾಗಿ ಇರುವುದೆಂದು ನೀವು ಗಮನಿಸಿದಿರಲ್ಲವೇ. ಎಲ್ಲಾ ಸಮಾಜಗಳಿಗೂ ಸಂಸ್ಕೃತಿಯಿದೆ. ಸಂಸ್ಕೃತಿಯು ಸಮಾಜದ ಸದಸ್ಯರ ಮಾರ್ಗದರ್ಶಿಯಾಗಿರುವುದು. ಸಂಸ್ಕೃತಿಯ ಘಟಕಗಳು ಪ್ರತಿ ಸಮಯದಲ್ಲೂ ಬದಲಾವಣೆಗಳಿಗೆ ಒಳಗಾಗುತ್ತವೆ. ನಮ್ಮ ಆಹಾರ ರೀತಿಯಲ್ಲಿ, ವೇಷಭೂಷಣಗಳಲ್ಲಿ, ಕೌಟುಂಬಿಕ ಸಂಬಂಧಗಳಲ್ಲಿ, ಶಿಕ್ಷಣದಲ್ಲಿ ಬಂದಿರುವ ಬದಲಾವಣೆಗಳು ಇದಕ್ಕೆ ಉದಾಹರಣೆಗಳಾಗಿವೆ. ಭೌತಿಕ ಮತ್ತು ಭೌತಿಕೇತರ ಸಂಸ್ಕೃತಿಯ ಘಟಕಗಳಲ್ಲಿ ಕಾಲಕ್ಕೆ ತಕ್ಕಂತೆ ಉಂಟಾಗುವ ಪರಿವರ್ತನೆಯನ್ನು ಸಂಸ್ಕೃತಿಯ ಬದಲಾವಣೆಯೆಂದು ತಿಳಿಯಬಹುದು.

ಇತರ ಸಂಸ್ಕೃತಿಗಳೊಂದಿಗೆ ಸಂಪರ್ಕಕ್ಕೆ ಬಂದಾಗ ಸಂಸ್ಕೃತಿಯ ಬದಲಾವಣೆಯು ಉಂಟಾಗುವುದು. ಈ ಬದಲಾವಣೆಗಳು ಪ್ರಧಾನವಾಗಿ ಮೂರು ರೀತಿಯಲ್ಲಿ ಉಂಟಾಗುವುದು.

### 1. ಸಾಂಸ್ಕೃತಿಕ ಪ್ರಸರಣ (Cultural Diffusion)




ಚಿತ್ರ 5.5

ಚಿತ್ರದಲ್ಲಿ ವಿವಿಧ ಆಹಾರ ಪದಾರ್ಥಗಳ ಬಗೆಗಳನ್ನು ನೀಡಲಾಗಿದೆ.

ಇವುಗಳಲ್ಲಿ ಕೇರಳದ್ದಲ್ಲದ ಆಹಾರ ಪದಾರ್ಥಗಳು ಯಾವುವು?

ಕೇರಳದ ಆಹಾರ ಪದಾರ್ಥಗಳೊಂದಿಗೆ ವಿದೇಶಿ ಆಹಾರ ಪದಾರ್ಥಗಳು ಬೆರೆತಿರುವುದನ್ನು ಕಾಣಬಹುದು.

ಸಾಂಸ್ಕೃತಿಕ ಪ್ರಸರಣವು ಒಂದು ಸಂಸ್ಕೃತಿಯ ವಿಶೇಷತೆಗಳು ಇನ್ನೊಂದು ಸಂಸ್ಕೃತಿಯೊಂದಿಗೆ ಬೇರೆಯುವುದಾಗಿದೆ. ವಿಭಿನ್ನ ಸಂಸ್ಕೃತಿಗಳು ಪರಸ್ಪರ ಸಂವಹನ ನಡೆಸುವಾಗ ಸಾಂಸ್ಕೃತಿಕ ಪ್ರಸರಣವು ನಡೆಯುವುದು. ಒಂದು ಸಂಸ್ಕೃತಿಯಿಂದ ಇತರ ಸಂಸ್ಕೃತಿಗಳಿಗೂ, ಪ್ರತಿಯಾಗಿಯೂ ಈ ಪ್ರಸರಣ ನಡೆಯಬಹುದು. ಕೇರಳದಲ್ಲಿ ಅತಿಥಿ ಕಾರ್ಮಿಕರ ಸಂಖ್ಯೆ ಹೆಚ್ಚಿದಾಗ ಅವರ ಆಹಾರ ಪದಾರ್ಥಗಳು ಇಲ್ಲಿ ಸುಲಭವಾಗಿ ಲಭಿಸಲು ಆರಂಭವಾಯಿತು. ಪಾನಿಪೂರಿ, ಪನೀರ್ ಟಿಕ್ಕಾ, ದಾಲ್ ಮಖನಿ ಮುಂತಾದವು ಉದಾಹರಣೆಗಳಾಗಿವೆ. ವೇಷಭೂಷಣ, ಭಾಷೆ, ಉತ್ಸವಗಳು ಮುಂತಾದವುಗಳಲ್ಲಿ ಇಂತಹ ಬದಲಾವಣೆಗಳು ಕಂಡುಬರುವುದು. ಹೀಗೆ ವಿವಿಧ ಸಂಸ್ಕೃತಿಗಳು ಸೌಹಾರ್ದವಾಗಿ ವಿನಿಮಯಗೊಳ್ಳುವಾಗ ಸಾಂಸ್ಕೃತಿಕ ಪ್ರಸರಣವಾಗುವುದು.

ಸಾಂಸ್ಕೃತಿಕ ಪ್ರಸರಣಕ್ಕೆ ಇತರ ಉದಾಹರಣೆಗಳನ್ನು ಕಂಡುಕೊಂಡು ತರಗತಿಯಲ್ಲಿ ಚರ್ಚೆ ನಡೆಸಿರಿ.

**2. ಅನ್ಯ ಸಂಸ್ಕೃತಿಗಳ ಆರ್ಜೀಕರಣ (Acculturation)**

ರಿಥಿ ತನ್ನ ಊರಿನಲ್ಲಿ ತೀಜ್ ಹಬ್ಬವನ್ನು ಆಚರಿಸಿದ ಬಳಿಕ ನಮ್ಮೊಡನೆ ಓಣಂ ಹಬ್ಬವನ್ನು ಕೂಡ ಆಚರಿಸಿದಳಲ್ಲವೆ. ರಿಥಿ ತನ್ನ ಸಂಸ್ಕೃತಿಯನ್ನು ಕಲಿಯುವುದರ ಜೊತೆಗೆ ಇನ್ನೊಂದು ಪ್ರದೇಶದ ಸಂಸ್ಕೃತಿಯನ್ನೂ ಕಲಿಯುವಳು. ಹೀಗೆ ಇನ್ನೊಂದು ಸಂಸ್ಕೃತಿಯನ್ನು ಸಂಸ್ಕೃತಿಗಳ ಅರ್ಜಿಕರಣ ಎಂದು ಹೇಳುವರು. ಇತರ ಸಂಸ್ಕೃತಿಯ ಪ್ರಭಾವದಿಂದ ಸ್ವಂತ ಸಂಸ್ಕೃತಿಯಲ್ಲಿ ಭಾಗಿಕವಾದ ಬದಲಾವಣೆಗಳು ಉಂಟಾಗುವುದು. ಅದೇ ಸಮಯದಲ್ಲಿ ಸ್ವಂತ ಸಂಸ್ಕೃತಿಯ ಅನೇಕ ಘಟಕಗಳು ನೆಲೆನಿಲ್ಲುತ್ತವೆ.

ನಿಮಗೆ ಈ ರೀತಿಯ ಅನುಭವಗಳು ಉಂಟಾಗಿದೆಯೇ?

ಅನ್ಯ ಸಂಸ್ಕೃತಿಗಳ ಆರ್ಜೀಕರಣಕ್ಕೆ ಹೆಚ್ಚಿನ ಉದಾಹರಣೆಗಳನ್ನು ಕಂಡುಹಿಡಿಯಿರಿ.

**2. ಸಾಂಸ್ಕೃತಿಕ ಸಮೀಕರಣ(Cultural Assimilation)**

ವಿನು ಮತ್ತು ಕುಟುಂಬ ಐದು ವರ್ಷಗಳ ಮೊದಲು ಆಸ್ಟ್ರೇಲಿಯಾಕ್ಕೆ ವಲಸೆ ಹೋದವರು. ಆಸ್ಟ್ರೇಲಿಯಾದಲ್ಲಿ ಸ್ಥಿರವಾಸ್ತವ್ಯವನ್ನು ಹೊಂದಿ ನಾಲ್ಕು ವರ್ಷಗಳಾದಾಗ ಅವರಿಗೆ ಆಸ್ಟ್ರೇಲಿಯಾದ ಪೌರತ್ವ ಲಭಿಸಿತು. ಆರಂಭದ ದಿನಗಳಲ್ಲಿ ಅಲ್ಲಿನ ಹವಾಗುಣ, ಭಾಷೆ, ಜೀವನ ವಿಧಾನಗಳು, ಆಹಾರ ರೀತಿಗಳು ಎಂಬಿವುಗಳೊಂದಿಗೆ ಹೊಂದಿಕೊಳ್ಳಲು ಕಷ್ಟವಾಗುತ್ತಿತ್ತು. ಕ್ರಮೇಣ ಅವರು ಆಸ್ಟ್ರೇಲಿಯಾದ ಸಂಸ್ಕೃತಿಯೊಂದಿಗೆ ಹೊಂದಿಕೊಂಡರು.

ಉದ್ಯೋಗಕ್ಕೆ ಸಂಬಂಧಿಸಿ ಕೇರಳದಿಂದ ಆಸ್ಟ್ರೇಲಿಯಾಕ್ಕೆ ತೆರಳಿದ ವಿನುವಿನ ಅನುಭವಗಳನ್ನು ಓದಿದಿರಲ್ಲವೇ. ವಿನು ಮತ್ತು ಅವನ ಕುಟುಂಬದವರು ಅಲ್ಲಿನ ಯಾವೆಲ್ಲಾ ಸಾಂಸ್ಕೃತಿಕ ಘಟಕಗಳನ್ನು ಸ್ವೀಕರಿಸಬೇಕಾಯಿತು?

- 
- 
- 

ಆಸ್ಟ್ರೇಲಿಯಾದಲ್ಲಿ ಜೀವಿಸಲು ವಿನುವಿಗೆ ಅಲ್ಲಿನ ಭಾಷೆ, ಆಹಾರ ರೀತಿಗಳು ಮೊದಲಾದವುಗಳನ್ನು ಕಲಿಯಬೇಕಾಗಿ ಬಂತು. ಹೀಗೆ ಕೇರಳೀಯನಾದ ವಿನು ಆಸ್ಟ್ರೇಲಿಯಾದ ಸಂಸ್ಕೃತಿಗೆ ಬದಲಾಗಲು ನಿರ್ಬಂಧಿತನಾದನು. ಈ ರೀತಿಯಲ್ಲಿ ಒಂದು ಜೀವನ ರೀತಿ ಇನ್ನೊಂದು ಜೀವನ ರೀತಿಗೆ ಹಾಗೂ ಪ್ರಬಲ ಸಂಸ್ಕೃತಿಗೆ (Dominant Culture) ಮಾರ್ಪಾಡುಗೊಳ್ಳುವುದಿದೆ. ಈ ರೀತಿಯಲ್ಲಿ ಒಂದು ಸಂಸ್ಕೃತಿಯು ಇನ್ನೊಂದು ಸಂಸ್ಕೃತಿಯ ಸ್ವಾಧೀನಕ್ಕೊಳಗಾದಾಗ ಸಾಂಸ್ಕೃತಿಕ ಸಮೀಕರಣ ನಡೆಯುವುದು. ಈ ಮೂಲಕ ಒಂದು ಸಂಸ್ಕೃತಿಯ ವಿಶೇಷತೆಗಳು ಕ್ರಮೇಣ ನಷ್ಟವಾಗಿ ಇನ್ನೊಂದು ಸಂಸ್ಕೃತಿಯ ರೀತಿಯಲ್ಲಿ, ಅದರ ಬದಲಾಗಿ ಬರುವುದು.

ವಿವಿಧ ಸಂಸ್ಕೃತಿಗಳು ಪರಸ್ಪರ ಸಂಧಿಸುವಾಗ ಉಂಟಾಗುವ ಸಾಂಸ್ಕೃತಿಕ ಬದಲಾವಣೆಗಳಿಂದ ಅನ್ಯ ಸಂಸ್ಕೃತಿಗಳ ಆರ್ಜೀಕರಣ ಮತ್ತು ಸಾಂಸ್ಕೃತಿಕ ಸಮೀಕರಣ ಉಂಟಾಗುವುದು. ಆದರೆ ಒಂದು ಪ್ರಬಲ ಸಂಸ್ಕೃತಿಗಳ ವ್ಯಕ್ತಿಗಳು ಹೇಗೆ

ಹೊಂದಿಕೊಳ್ಳುವರು (Accommodation) ಎಂಬುದರಲ್ಲಿ ಇವರಿಬ್ಬರೂ ಭಿನ್ನವಾಗಿರುವರು. ಇದು ಹೇಗೆಂದು ನಾವು ನೋಡೋಣ.



ರಿಥಿಯ ಕುಟುಂಬವು ಕೇರಳದಲ್ಲಿ ವಾಸಿಸುವವರಾಗಿದ್ದರೂ ಅವರ ಸ್ವಂತ ಸಂಸ್ಕೃತಿಯ ರೀತಿಗಳನ್ನು ಉಳಿಸಿಕೊಂಡು ಕೇರಳದ ಪ್ರಬಲ ಸಂಸ್ಕೃತಿಯೊಂದಿಗೆ ಹೊಂದಿಕೊಳ್ಳುವರು. ವ್ಯಕ್ತಿಗಳು ಅಥವಾ ಜನರ ಗುಂಪು ತಮ್ಮ ಸ್ವಂತ ಸಂಸ್ಕೃತಿಯನ್ನು ಉಳಿಸಿಕೊಂಡು ಪ್ರಬಲ ಸಂಸ್ಕೃತಿಯೊಂದಿಗೆ ಹೊಂದಿಕೊಳ್ಳುವುದೇ ಅನ್ಯ ಸಂಸ್ಕೃತಿ ಆರ್ಜೀಕರಣ.



ವಿನು ಮತ್ತು ಕುಟುಂಬ ಸ್ವಂತ ಸಂಸ್ಕೃತಿಯ ರೀತಿಗಳಿಂದ ಬದಲಾಗಿ ಆಸ್ಟ್ರೇಲಿಯಾದ ಪ್ರಬಲ ಸಂಸ್ಕೃತಿಯನ್ನು ಸಮೀಕರಿಸುವುದು.

ವ್ಯಕ್ತಿಗಳು ಅಥವಾ ಜನರ ಗುಂಪು ಪ್ರಬಲ ಸಂಸ್ಕೃತಿಯನ್ನು ಪೂರ್ಣಪ್ರಮಾಣದಲ್ಲಿ ಹೊಂದಿಕೊಳ್ಳುವಾಗ ಸಾಂಸ್ಕೃತಿಕ ಸಮೀಕರಣ ಉಂಟಾಗುವುದು.

ಅನ್ಯ ಸಂಸ್ಕೃತಿ ಆರ್ಜೀಕರಣ ಮತ್ತು ಸಾಂಸ್ಕೃತಿಕ ಸಮೀಕರಣ ವ್ಯಕ್ತಪಡಿಸುವ ಒಂದು ಕಥೆಯ ಸನ್ನಿವೇಶದ ಸ್ಕ್ರಿಪ್ಟ್ ತಯಾರಿಸಿ ತರಗತಿಯಲ್ಲಿ ರೋಲ್ ಪ್ಲೇ ಮಂಡಿಸಿರಿ.

ಅನ್ಯ ಸಂಸ್ಕೃತಿ ಆರ್ಜೀಕರಣ, ಸಾಂಸ್ಕೃತಿಕ ಸಮೀಕರಣ, ಸಾಂಸ್ಕೃತಿಕ ಪ್ರಸರಣ, ಎಂಬಿವುಗಳು ಸಮಾಜದಲ್ಲಿ ಆಂತರಿಕ ಘಟಕಗಳ (Internal Factors) ಪ್ರಭಾವದಿಂದ ನಡೆಯುವುದಾಗಿದೆ. ಆದರೆ ಬಾಹ್ಯ ಘಟಕಗಳು (External Factors) ಸಾಂಸ್ಕೃತಿಕ ಬದಲಾವಣೆಗಳಿಗೆ ಕಾರಣವಾಗುವುದಿದೆ. ಸಾಂಸ್ಕೃತಿಕ ನವೀಕರಣ (Cultural Innovations), ಪರಿಸರ ಬದಲಾವಣೆ (Environmental Changes) ಮೊದಲಾದ ಸಾಂಸ್ಕೃತಿಕ ಬದಲಾವಣೆಗಳಿಗೆ ಕಾರಣವಾಗುವ ಬಾಹ್ಯಘಟಕಗಳಾಗಿವೆ. ಈ ಬಾಹ್ಯಘಟಕಗಳು ಸಾಂಸ್ಕೃತಿಕ ಬದಲಾವಣೆಗಳಿಗೆ ಹೇಗೆ ಕಾರಣವಾಗುವುದೆಂದು ನೋಡೋಣ.

## ಸಾಂಸ್ಕೃತಿಕ ನವೀಕರಣ ಮತ್ತು ಸಾಂಸ್ಕೃತಿಕ ಬದಲಾವಣೆ

ಚಿತ್ರಗಳನ್ನು ನಿರೀಕ್ಷಣೆ ಮಾಡಿರಿ.

**ವಿವಿಧ ರೀತಿಯ ಒಲೆಗಳು**



ಕಟ್ಟಿಗೆಯ ಒಲೆ



ಸೀಮೆಎಣ್ಣೆಯ ಒಲೆ (ಬತ್ತಿ)



ಸೀಮೆಎಣ್ಣೆಯ ಒಲೆ (ಒತ್ತಡ)



ಗ್ಯಾಸ್ ಒಲೆ



ಇಂಡಕ್ಷನ್ ಒಲೆ



ಓವೆನ್

ಚಿತ್ರ 5.6

ಅಡುಗೆಗಾಗಿ ಬಳಸುವ ವಿವಿಧ ರೀತಿಯ ಒಲೆಗಳ ಚಿತ್ರಗಳನ್ನು ನೀಡಲಾಗಿದೆ. ತಂತ್ರಜ್ಞಾನದ ವಿಕಾಸದಿಂದ ಒಲೆಗಳ ನಿರ್ಮಾಣ ಮತ್ತು ಅಡುಗೆಯ ರೀತಿಯಲ್ಲಿ ಬದಲಾವಣೆಗಳು ಉಂಟಾದವು. ಇದು ನಮ್ಮ ಆಹಾರ ಸಂಸ್ಕೃತಿಯ ಮೇಲೆ ಗಮನಾರ್ಹವಾದ ಪ್ರಭಾವ ಬೀರಿತು. ತಂತ್ರಜ್ಞಾನದಿಂದ ಉಂಟಾಗುವ ವಿಕಾಸಗಳು ಸಾಂಸ್ಕೃತಿಕ ನವೀಕರಣಕ್ಕೆ ಕಾರಣವಾಗುವುದು. ಇಂದು ಆಹಾರಕ್ಕಾಗಿ ಆನ್ಲೈನ್ ವ್ಯವಸ್ಥೆಯನ್ನು ಬಳಸುವುದನ್ನು ನೀವು ಗಮನಿಸಿರುವಿರಲ್ಲವೇ.

ತಂತ್ರಜ್ಞಾನದ ವಿಕಾಸ ಸಾಂಸ್ಕೃತಿಕ ನವೀಕರಣಕ್ಕೆ ಕಾರಣವಾಗುವುದಕ್ಕಿರುವ ಹೆಚ್ಚಿನ ಉದಾಹರಣೆಗಳನ್ನು ಕಂಡುಹಿಡಿದು ಡಿಜಿಟಲ್ ಆಲ್ಬಂ ತಯಾರಿಸಿರಿ.

## ಪರಿಸರದ ಬದಲಾವಣೆಗಳು ಮತ್ತು ಸಾಂಸ್ಕೃತಿಕ ಬದಲಾವಣೆಗಳು

ಪರಿಸರದಲ್ಲಿ ಉಂಟಾಗುವ ಬದಲಾವಣೆಗಳು ಮಾನವರ ಜೀವನದಲ್ಲಿ ಪ್ರತಿಫಲಿಸುವುದೇ? ಚಿತ್ರಗಳನ್ನು ನಿರೀಕ್ಷಿಸಿರಿ.



ಚಿತ್ರ 5.7

ಭೂಕುಸಿತ, ಬರಗಾಲ, ಪ್ರಳಯ, ಹೆಚ್ಚುತ್ತಿರುವ ಸಮುದ್ರಮಟ್ಟ ಮೊದಲಾದವುಗಳು ಜನರಿಗೆ ತಮ್ಮ ಸ್ವಂತ ಪ್ರದೇಶದಿಂದ ಬೇರೆ ಪ್ರದೇಶಕ್ಕೆ ಸ್ಥಳಾಂತರವಾಗಬೇಕಾದ ಸನ್ನಿವೇಶವನ್ನು ಸೃಷ್ಟಿಸುವುದು. ಇದು ಅವರ ದೈನಂದಿನ ಜೀವನದಲ್ಲಿ ಬದಲಾವಣೆಗಳನ್ನು ತರುವುದು. ಹೀಗೆ ಪ್ರಾಕೃತಿಕ ದುರಂತಗಳು, ಹವಾಮಾನ ಬದಲಾವಣೆ ಮೊದಲಾದ ಪರಿಸರ ಸಂಬಂಧಿ ಘಟಕಗಳು ಸಂಸ್ಕೃತಿಯ ಬದಲಾವಣೆಗೆ ಕಾರಣವಾಗುವುದು.

**ಸಾಂಸ್ಕೃತಿಕ ಬದಲಾವಣೆಗಳು**

**ಆಂತರಿಕ ಘಟಕಗಳು**
- ಸಾಂಸ್ಕೃತಿಕ ಪ್ರಸರಣ
- ಅನ್ಯ ಸಂಸ್ಕೃತಿ ಆರ್ಜೀಕರಣ
- ಸಾಂಸ್ಕೃತಿಕ ಸಮೀಕರಣ

**ಬಾಹ್ಯ ಘಟಕಗಳು**
- ಸಾಂಸ್ಕೃತಿಕ ನವೀಕರಣಗಳು
- ಪರಿಸರ ಬದಲಾವಣೆ

ಸಾಂಸ್ಕೃತಿಕ ಬದಲಾವಣೆಗಳಿಗೆ ಸಂಬಂಧಿಸಿ ನೀಡಿರುವ ಪತ್ರಿಕಾ ವರದಿಗಳ ಶೀರ್ಷಿಕೆಗಳನ್ನು ಪಟ್ಟಿಯಲ್ಲಿ ಕ್ರಮೀಕರಿಸಿರಿ.

1. ಪ್ರಾಕೃತಿಕ ದುರಂತದಲ್ಲಿ ಮನೆ ಕಳೆದುಕೊಂಡವರಿಗೆ ಸರಕಾರ ಟೌನ್‌ಶಿಪ್ ನಿರ್ಮಿಸಿ ಕೊಡುವುದು.
2. ಎಲ್ಲಾ ಬಿ.ಪಿ.ಎಲ್ ಕುಟುಂಬಗಳಿಗೆ ಅಡುಗೆಮನೆ ನವೀಕರಣಕ್ಕೆ ಸರಕಾರಿ ಯೋಜನೆ
3. ಬಣ್ಣಗಳನ್ನು ಎರಚಿ ಮಲಯಾಳಿಗಳಿಂದಲೂ ಹೋಳಿ ಆಚರಣೆ
4. ವಿದೇಶಿ ಪೌರತ್ವ ಪಡೆಯುವ ಮಲಯಾಳಿಗಳ ಸಂಖ್ಯೆ ಹೆಚ್ಚಳ
5. ಹೋಳಿ ಮತ್ತು ಓಣಂನ್ನು ಸಮಾನವಾಗಿ ಆಚರಿಸಿದ ಅತಿಥಿ ಕಾರ್ಮಿಕರು

| ಆಂತರಿಕ ಘಟಕಗಳು | | ಬಾಹ್ಯ ಘಟಕಗಳು | |
|---|---|---|---|
| ಸಾಂಸ್ಕೃತಿಕ ಪ್ರಸರಣ | | ಪರಿಸರ ಬದಲಾವಣೆ | |
| ಅನ್ಯ ಸಂಸ್ಕೃತಿ ಆರ್ಜೀಕರಣ | | ಸಾಂಸ್ಕೃತಿಕ ನವೀಕರಣ | |
| ಸಾಂಸ್ಕೃತಿಕ ಸಮೀಕರಣ | | | |

ಸಂಸ್ಕೃತಿಯು ಮನುಷ್ಯ ಜೀವನದ ಕ್ರಿಯಾತ್ಮಕ ಮತ್ತು ಅವಿಭಾಜ್ಯ ಘಟಕವಾಗಿದೆ. ಸಂಸ್ಕೃತಿ ಒಂದು ಸಮಾಜವನ್ನು ರೂಪಿಸುವುದು. ವಿವಿಧ ಸಂಸ್ಕೃತಿಯನ್ನು ಅನುಸರಿಸುವವರು ಒಟ್ಟಾಗಿ ಜೀವಿಸುವುದು ಸಾಮಾಜಿಕ ಜೀವನದ ಸೌಂದರ್ಯ ಮತ್ತು ಒಳಿತು ಆಗಿದೆ. ಆದ್ದರಿಂದ ವಿಭಿನ್ನ ಸಂಸ್ಕೃತಿಗಳಲ್ಲಿ ಗೌರವ ಮತ್ತು ಸಹಿಷ್ಣುತೆಯನ್ನು ಹೊಂದಬೇಕು. ಸಾಂಸ್ಕೃತಿಕ ಮತ್ತು ಐಕ್ಯತೆಯನ್ನು ಪ್ರೋತ್ಸಾಹಿಸಲೂ ಬೇಕು.

## ಮುಂದುವರಿದ ಚಟುವಟಿಕೆಗಳು

- ವಿವಿಧ ಸಂಸ್ಕೃತಿಗಳ ಆಹಾರ, ವೇಷಭೂಷಣ, ಪರಂಪರೆ ಎಂಬಿವುಗಳನ್ನು ಪ್ರತಿಬಿಂಬಿಸುವ ಕೊಲಾಷ್ ತಯಾರಿಸಿರಿ.
- ವಿವಿಧ ಗುಂಪುಗಳಾಗಿ ಯಾವುದಾದರೂ ಒಂದು ಉತ್ಸವವನ್ನು ಅಧಾರವಾಗಿರಿಸಿ ಒಂದು ಕಿರುನಾಟಕವನ್ನು ಪ್ರದರ್ಶಿಸಿರಿ.
- ಒಂದು ಸಂಸ್ಕೃತಿಯನ್ನು ಪ್ರತಿನಿಧಿಸುವ ಸಾಂಸ್ಕೃತಿಕೋತ್ಸವವನ್ನು ಶಾಲೆಯಲ್ಲಿ ಅಯೋಜಿಸಿರಿ. ಕೇರಳದ ಹೊರಗಿನಿಂದ, ವಿದೇಶದಿಂದ ಶಿಕ್ಷಣಕ್ಕಾಗಿ ಬರುವ ವಿದ್ಯಾರ್ಥಿಗಳನ್ನೂ ಒಳಗೊಳ್ಳಿಸಿ ಸಾಂಸ್ಕೃತಿಕ ಒಕ್ಕೂಟಗಳು ಮತ್ತು ಚರ್ಚೆಗಳನ್ನು ನಡೆಸುವಿರಲ್ಲವೇ?



6

# ಕೃಷಿಯಿಂದ ಕೈಗಾರಿಕೆಯ ಕಡೆಗೆ

*ಪಂಡ್ ಪಿತಾಮಹರ್ ಕಾಟ್ಟಿಲ್ ನಡುವಿಲ್*
*ಚಿಂತಕಳುರಸಿಡುಮಕ್ಕಾಲಂ*
*ವನ್ನು ಪಿರನ್ನಿತು ಚೆನ್ನಿಣಮೋಲುಂ*
*ವಾಳು ಕಣಕ್ಕೋರು ತೀ ನಾಳಂ!*

---------------------------------------

*ಕಾಡು ಪಡಲುಂ ವೆಣ್ಣೀರಾಕಿ*
*ಕ್ಕನಕಕ್ಕತಿರಿನು ವಳಮೇಕಿ*
*ಕಠಿನ ಮಿರುಂಬು ಕುಯಂಬಾಕಿ, ಪಲ*
*ಕರುನಿರ ವಾರ್ತ್ತು ಪಣಿಕ್ಕೇಕಿ!*

*ಆಕರ: 'ಪಂತಜಲ್' ವೈಲೊಪ್ಪಿಳ್ಳಿ ಶ್ರೀಧರ ಮೇನೊನ್*

ಕವಿತೆಯ ಆಶಯ:

ಹಿಂದಿನ ಕಾಲದಲ್ಲಿ ನಮ್ಮ ಪೂರ್ವಿಕರು ಕಾಡಿನ ಮದ್ಯೆ ವಾಸ ಮಾಡುತ್ತಿರುವ ಸಮಯದಲ್ಲಿ ಅವರ ಮನಸ್ಸಿನಲ್ಲಿ ಮೊಳಕೆಯೊಡೆದ ಖಡ್ಗದಂತಿರುವ ಒಂದು ಅಗ್ನಿ ಜ್ವಾಲೆ.

ಅಗ್ನಿಯ ಕಂಡುಹಿಡಿಯುವಿಕೆಯನ್ನು ಈ ಕವಿತೆಯ ಸಾಲುಗಳಲ್ಲಿ ವಿವರಿಸಲಾಗಿದೆ.

ಕಾಡು ಮೇಡು ಕಡಿದು ಅಗ್ನಿಗಾಹುತಿ ಮಾಡಿದರು. ಬಂಗಾರದಂತಹ ತೆನೆಗಳಿಗೆ ಗೊಬ್ಬರವಾಗಿ ಮಾರ್ಪಡಿಸಿದರು. ಕಠಿಣವಾದ ಕಬ್ಬಿಣವನ್ನು ಕೂಡ ಬೆಣ್ಣೆಯಂತೆ ತನ್ನ ವಜ್ರ ಮುಷ್ಠಿಯಲ್ಲಿ ಇರಿಸಿ ಕೆಲಸಕ್ಕೆ ಉಪಯೋಗ ಮಾಡಿದರು.

ಮನುಷ್ಯರು ತಮ್ಮ ಪರಿಸರವನ್ನು ರೂಪಿಸಿಕೊಂಡು ಕೃಷಿ ಆರಂಭಿಸಿದ ಬಗ್ಗೆ ವೈಲೊಪಿಳ್ಳಿ ಈ ಕವಿತೆಯ ಮೂಲಕ ಪ್ರಸ್ತುತಪಡಿಸಿದ್ದಾರೆ.

ಕೃಷಿಯ ಪ್ರಾರಂಭ ಮತ್ತು ಆಹಾರ ಸಂಗ್ರಹಣೆಯಿಂದ ಆಹಾರ ಉತ್ಪಾದನೆಯ ಕಡೆಗಿರುವ ಬದಲಾವಣೆಗಳ ಕುರಿತು ಹಿಂದಿನ ತರಗತಿಯಲ್ಲಿ ಚರ್ಚಿಸಿರುವಿರಲ್ಲವೇ.

ಭೂಮಿ, ಮಾನವ ಪರಿಶ್ರಮ ಎಂಬೀ ಘಟಕಗಳನ್ನು ಆರಂಭದ ದಿನಗಳಲ್ಲಿ ಕೃಷಿ ಉತ್ಪಾದನೆಗೆ ಮಾನವರು ಉಪಯೋಗಿಸುತ್ತಿದ್ದರು. ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಭೂಮಿಯನ್ನು ಕೃಷಿ ಯೋಗ್ಯವಾಗಿಸಲು ಆ ಸಮಯದಲ್ಲಿ ಹೆಚ್ಚಿನ ಮಾನವ ಪರಿಶ್ರಮ ಅಗತ್ಯವಾಗಿತ್ತು. ಕಾಲಕ್ರಮೇಣ ಕಬ್ಬಿಣದಿಂದ ನಿರ್ಮಿಸಿದ ಹರಿತವಾದ ಮತ್ತು ಬಲಿಷ್ಠವಾಗಿರುವ ಉಪಕರಣಗಳನ್ನು ಉಪಯೋಗಿಸಿ ಹೆಚ್ಚಿನ ಭೂಮಿಯನ್ನು ಕೃಷಿ ಯೋಗ್ಯವನ್ನಾಗಿಸಿದರು. ಇದು ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ನೆರವಾಯಿತು.

ಕೃಷಿಯ ವಿಸ್ತಾರಕ್ಕೆ ಕಾರಣವಾದ ಸನ್ನಿವೇಶಗಳು ಯಾವುವು? ಚರ್ಚಿಸಿರಿ.

## ವ್ಯಾಪಾರದ ಆರಂಭ

ನಿಶಾನ್ ಶಾಲೆಯ ಸಮಾಜ ವಿಜ್ಞಾನ ಪ್ರಯೋಗಾಲಯದಲ್ಲಿ ಪ್ರದರ್ಶಿಸಲಾದ ಮಾನವ ಪ್ರಗತಿಗೆ ಸಂಬಂಧಿಸಿದ ಚಿತ್ರಗಳನ್ನು ನಿರೀಕ್ಷಿಸುತ್ತಿದ್ದಾನೆ.




ಚಿತ್ರ 6.1

ಚಿತ್ರದ ನಿರೀಕ್ಷಣೆಯ ಮೂಲಕ ನಿಶಾನ್ ಕಂಡುಕೊಂಡ ಆಶಯಗಳನ್ನು ಅವುಗಳ ಕಾಲಾನುಕ್ರಮಮದಲ್ಲಿ ಪಟ್ಟಿ ಮಾಡಿರಿ.

- 
- 
- 
- 

ಕೃಷಿಯ ವಿಸ್ತಾರದೊಂದಿಗೆ ಉತ್ಪಾದನೆಯು ಹೆಚ್ಚಾಯಿತು ಮತ್ತು ಅದು ಮಿಗತೆ ಉತ್ಪಾದನೆಗೆ ದಾರಿ ಮಾಡಿಕೊಟ್ಟಿತು. ಮಿಗತೆಯಾದ ಆಹಾರ ಪದಾರ್ಥಗಳನ್ನು ಮಾನವರು ಭವಿಷ್ಯದ ಬಳಕೆಗಾಗಿ ಸಂಗ್ರಹಿಸಿಟ್ಟರು. ಕಾಲಕ್ರಮೇಣ ಆಹಾರ ಪದಾರ್ಥಗಳನ್ನು ಸಂಗ್ರಹಿಸುವುದು ಮಾತ್ರವಲ್ಲದೆ, ಅಗತ್ಯವಿರುವವರಿಗೆ ವಿನಿಮಯ ಮಾಡುತ್ತಿದ್ದರು.

ಸರಕುಗಳಿಗೆ ಬದಲು, ಸರಕುಗಳನ್ನು ವಿನಿಮಯ ಮಾಡಿಕೊಳ್ಳುವ ಸಂಪ್ರದಾಯವನ್ನು ಯಾವ ಹೆಸರಿನಿಂದ ಕರೆಯಲಾಯಿತು?

ಆರಂಭ ಕಾಲದಲ್ಲಿ ಇಂತಹ ವಿನಿಮಯವು ಸ್ಥಳೀಯವಾಗಿ ಮಾತ್ರ ಅಸ್ತಿತ್ವದಲ್ಲಿತ್ತು. ಅನಂತರ ಈ ವಿನಿಮಯ ರಾಜ್ಯಗಳನ್ನು ದಾಟಿ ವ್ಯಾಪಿಸಿತು.

ಕ್ರಮೇಣ ವಸ್ತುಗಳ ವಿನಿಮಯಕ್ಕಾಗಿ ತಾಮ್ರ, ಬೆಳ್ಳಿ ಮತ್ತು ಚಿನ್ನದಿಂದ ನಿರ್ಮಿಸಿದ ನಾಣ್ಯಗಳನ್ನು ವಿನಿಮಯ ಮಾಧ್ಯಮವಾಗಿ ಉಪಯೋಗಿಸಲು ಆರಂಭಿಸಿದರು. ಕರಕುಶಲ ವಸ್ತುಗಳು, ಬಟ್ಟೆಬರೆಗಳು, ಸುಗಂಧ ದ್ರವ್ಯಗಳು ಮೊದಲಾದವುಗಳು ಆಂತರಿಕ ವ್ಯಾಪಾರದ ಪ್ರಧಾನ ವಸ್ತುಗಳಾಗಿದ್ದವು.

**ಬಂಡವಾಳ**

ವ್ಯಾಪಾರವು ಪ್ರತಿಫಲವನ್ನು ಪಡೆದು ಸರಕುಗಳನ್ನು ಮತ್ತು ಸೇವೆಗಳನ್ನು ವಿನಿಮಯ ಮಾಡುವ ಪ್ರಕ್ರಿಯೆಯಾಗಿದೆ.

ಅನಂತರ ಸರಕುಗಳ ವಿನಿಮಯವು ದೂರ ದೇಶಗಳ ಮಧ್ಯೆಯೂ ಪ್ರಾರಂಭವಾಯಿತು. ವಿದೇಶ ವ್ಯಾಪಾರವು ಹೊಸ ವ್ಯಾಪಾರ ಮಾರ್ಗಗಳು ರೂಪಗೊಳ್ಳಲು ದಾರಿ ಮಾಡಿಕೊಟ್ಟಿತು. ಏಷ್ಯಾ ಭೂಖಂಡದ ಪೂರ್ವ ಮತ್ತು ಪಶ್ಚಿಮ ಭಾಗಗಳ ಮಧ್ಯೆ ಹಾಗೂ ಏಷ್ಯಾ, ಯೂರೋಪ್, ಆಫ್ರಿಕಾ, ಎಂಬಿವುಗಳ ಮಧ್ಯೆ ವಾಣಿಜ್ಯ ಸಂಬಂಧವು ನೆಲೆಗೊಂಡಿದ್ದ ರೇಷ್ಮೆದಾರಿಯು(Silk Route) ಇದಕ್ಕೆ ಉದಾಹರಣೆಯಾಗಿದೆ.




ನೀಡಿರುವ ಫ್ಲೋ ಚಾರ್ಟಿನ ಸಹಾಯದಿಂದ ಕೃಷಿಯ ವಿಸ್ತಾರದಿಂದ ನಗರಗಳ ರೂಪುಗೊಳ್ಳುವಿಕೆಯ ವರೆಗಿರುವ ಆಶಯಗಳನ್ನು ಸೇರಿಸಿ ಟಿಪ್ಪಣಿ ತಯಾರಿಸಿರಿ.

## ಆರ್ಥಿಕ ಚಟುವಟಿಕೆಗಳು

ಕೃಷಿಯಿಂದ ವ್ಯಾಪಾರದ ಕಡೆಗಿರುವ ಬೆಳವಣಿಗೆಯನ್ನು ನಾವು ಚರ್ಚೆ ಮಾಡಿದ್ದೇವಲ್ಲವೇ. ಕೃಷಿ ಹಾಗೂ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಡೆದ ಚಟುವಟಿಕೆಗಳು ಅನಂತರದ ಕಾಲದಲ್ಲಿ ಆದಾಯದ ಉದ್ದೇಶವನ್ನು ಇಟ್ಟುಕೊಂಡವುಗಳಾಗಿ ಬದಲಾದವು.

"ಅಭಿವೃದ್ಧಿಯ ಮೂಲ ಕಾರಣ ಆರ್ಥಿಕ ಚಟುವಟಿಕೆಗಳಾಗಿವೆ, ಅದರ ಕೊರತೆಯು ಗಂಭೀರವಾದ ಆಪತ್ತನ್ನು ತಂದೊಡ್ಡುತ್ತದೆ. ಫಲವತ್ತಾದ ಆರ್ಥಿಕ ಚಟುವಟಿಕೆಗಳ ಅಭಾವವು ಪ್ರಸ್ತುತ ಇರುವ ಅಭಿವೃದ್ಧಿ ಹಾಗೂ ಭವಿಷ್ಯದ ಬೆಳವಣಿಗೆಗೆ ಅಪಾಯವನ್ನುಂಟು ಮಾಡುತ್ತದೆ."

**ಅರ್ಥಶಾಸ್ತ್ರ**


ಕೌಟಿಲ್ಯ

ಚಂದ್ರಗುಪ್ತ ಮೌರ್ಯನ ಮಂತ್ರಿಯಾಗಿದ್ದ ಕೌಟಿಲ್ಯನ ಮಾತುಗಳನ್ನು ಗಮನಿಸಿದಿರಲ್ಲವೇ. ಯಾವುದೇ ಒಂದು ಸಮಾಜದ ಪ್ರಗತಿಯನ್ನು ನಿರ್ಧರಿಸುವ ಆರ್ಥಿಕ ಚಟುವಟಿಕೆಗಳನ್ನು ಕೌಟಿಲ್ಯನು ಇಲ್ಲಿ ಸೂಚಿಸಿದ್ದಾನೆ.

ಆರ್ಥಿಕ ಚಟುವಟಿಕೆಗಳು ಎಂದರೇನು?

ಆರ್ಥಿಕ ಚಟುವಟಿಕೆಗಳು ಆದಾಯವನ್ನು ದೊರಕಿಸುವ ಚಟುವಟಿಕೆಗಳಾಗಿವೆ. ಉತ್ಪಾದನಾ ಪ್ರಕ್ರಿಯೆಯ ಮೂಲಕ ಆರ್ಥಿಕ ಚಟುವಟಿಕೆಗಳು ಸಾಧ್ಯವಾಗುವುದು.

ಚಿತ್ರಗಳನ್ನು ನಿರೀಕ್ಷಿಸಿರಿ.




ಚಿತ್ರ 6.2

ಚಹಾವು ನಮ್ಮ ನೆಚ್ಚಿನ ಪಾನೀಯಗಳಲ್ಲೊಂದಾಗಿದೆಯಲ್ಲವೇ.

ಚಹಾ ಮಾಡಲು ಚಾಸೊಪ್ಪಿನ ಅಗತ್ಯವಿದೆ. ಈ ಚಹಾ ನಮ್ಮ ಮನೆಗಳಿಗೆ ಹೇಗೆ ತಲುಪುತ್ತದೆ?

ಚಹಾ ಗಿಡಗಳಿಂದ ಎಲೆಗಳನ್ನು ಕಿತ್ತು ತೆಗೆಯಲಾಗುತ್ತದೆ. ಅವುಗಳನ್ನು ಕಾರ್ಖಾನೆಗೆ ತಲುಪಿಸಿ ಸಂಸ್ಕರಿಸಿ ಚಾಹುಡಿಯಾಗಿ ಪರಿವರ್ತಿಸಲಾಗುತ್ತದೆ. ಈ ಚಾಹುಡಿಯನ್ನು ಕವರುಗಳಲ್ಲಿ ಹಾಕಿ ವಾಹನಗಳಲ್ಲಿ ನಮ್ಮ ಮನೆಯ ಹತ್ತಿರವಿರುವ ಅಂಗಡಿಗಳಿಗೆ ತಲುಪಿಸುತ್ತಾರೆ.

ನಾವು ಚರ್ಚಿಸಿರುವುದು ಕೃಷಿ ಸ್ಥಳಗಳಿಂದ ಚಾಹುಡಿ ನಮ್ಮ ಕೈಗೆ ತಲುಪುವವರೆಗೆ ಇರುವ ಆರ್ಥಿಕ ಚಟುವಟಿಕೆಗಳಾಗಿವೆ. ಇಂತಹ ಆರ್ಥಿಕ ಚಟುವಟಿಕೆಗಳನ್ನು ಅವುಗಳ ಸಾಮಾನ್ಯ ಗುಣಗಳಿಗೆ ಅನುಗುಣವಾಗಿ ಮೂರು ವಲಯಗಳಾಗಿ ವರ್ಗೀಕರಿಸಬಹುದು.

### ಆರ್ಥಿಕ ಚಟುವಟಿಕೆಗಳ ವಲಯ ವಿಭಜನೆ

#### ಪ್ರಾಥಮಿಕ ವಲಯ

ಪ್ರಾಥಮಿಕ ವಲಯವು ಪ್ರಾಕೃತಿಕ ಸಂಪನ್ಮೂಲಗಳನ್ನು ಪ್ರತ್ಯಕ್ಷವಾಗಿ ಉಪಯೋಗಿಸಿಕೊಂಡು ನಡೆಸುವ ಚಟುವಟಿಕೆಗಳು ಸೇರಿರುವ ವಲಯವಾಗಿದೆ. ಕೃಷಿಗೆ ಪ್ರಾಧಾನ್ಯವಿರುವುದರಿಂದ ಈ ವಲಯವನ್ನು ಕೃಷಿ ವಲಯ ಎಂದು ಕರೆಯುತ್ತಾರೆ.

ಉದಾ: ಕೃಷಿ, ಅರಣ್ಯ, ಗಣಿಗಾರಿಕೆ, ಮೀನುಗಾರಿಕೆ ಇತ್ಯಾದಿಗಳು.

#### ದ್ವಿತೀಯ ವಲಯ

ದ್ವಿತೀಯ ವಲಯವು ಪ್ರಾಥಮಿಕ ವಲಯದಿಂದ ಕಚ್ಚಾ ವಸ್ತುಗಳನ್ನು ಉಪಯೋಗಿಸಿ ಹೊಸ ಉತ್ಪನ್ನಗಳನ್ನು ನಿರ್ಮಿಸುವ ಚಟುವಟಿಕೆಗಳು ನಡೆಯುವ ವಲಯವಾಗಿದೆ. ಕೈಗಾರಿಕೆಗಳಿಗೆ ಪ್ರಾಧಾನ್ಯವಿರುವ ಈ ವಲಯವನ್ನು ಕೈಗಾರಿಕಾ ವಲಯ ಎಂದು ಕರೆಯುತ್ತಾರೆ.

ಉದಾ: ವಿದ್ಯುತ್ ಉತ್ಪಾದನೆ, ಬಟ್ಟೆಯ ಕೈಗಾರಿಕೆ, ಕಟ್ಟಡ ನಿರ್ಮಾಣ ಇತ್ಯಾದಿಗಳು.

#### ತೃತೀಯ ವಲಯ

ತೃತೀಯ ವಲಯವು ಪ್ರಾಥಮಿಕ-ದ್ವಿತೀಯ ವಲಯಗಳ ಆರ್ಥಿಕ ಚಟುವಟಿಕೆಗಳಿಗೆ ಬೆಂಬಲ ನೀಡುವ ವಲಯವಾಗಿದೆ. ಪ್ರಾಥಮಿಕ, ದ್ವಿತೀಯ ವಲಯಗಳ ಉತ್ಪನ್ನಗಳ ಸಂಗ್ರಹ ಮತ್ತು ಮಾರಾಟ ಮಾಡುವುದರೊಂದಿಗೆ ಎಲ್ಲಾ ರೀತಿಯ ಸೇವಾ ಚಟುವಟಿಕೆಗಳು ಈ ವಲಯದಲ್ಲಿ ಒಳಗೊಂಡಿರುತ್ತವೆ. ಆದುದರಿಂದ ಈ ವಲಯವನ್ನು ಸೇವಾ ವಲಯವೆಂದು ಕರೆಯುತ್ತಾರೆ.

ಉದಾ: ಬ್ಯಾಂಕಿಂಗ್, ಆರೋಗ್ಯ ಕ್ಷೇತ್ರ, ವಾರ್ತಾ ವಿನಿಮಯ ಇತ್ಯಾದಿಗಳು.

ಈ ಮೂರು ವಲಯಗಳಲ್ಲಿಯೂ ನಡೆಯುವ ಆರ್ಥಿಕ ಚಟುವಟಿಕೆಗಳು ಒಂದು ದೇಶವನ್ನು ಅಭಿವೃದ್ಧಿಯ ಕಡೆಗೆ ಕೊಂಡೊಯ್ಯುವುದು.

ಚಿತ್ರಗಳನ್ನು ನಿರೀಕ್ಷಿಸಿರಿ.


ಗಣಿಗಾರಿಕೆ


ಮೀನುಗಾರಿಕೆ


ಆರೋಗ್ಯ ಕ್ಷೇತ್ರ


ಕೈಗಾರಿಕೆ


ಕಟ್ಟಡ ನಿರ್ಮಾಣ


ಕೃಷಿ


ವಿದ್ಯುತ್ ಉತ್ಪಾದನೆ


ವಾರ್ತಾ ವಿನಿಮಯ


ಬ್ಯಾಂಕಿಂಗ್

ಚಿತ್ರ 6.3

ಚಿತ್ರವನ್ನು ನಿರೀಕ್ಷಿಸಿ ಕೊಟ್ಟಿರುವ ಆರ್ಥಿಕ ಚಟುವಟಿಕೆಗಳನ್ನು ಮೂರು ವಲಯಗಳಾಗಿ ಪಟ್ಟಿ ಮಾಡಿರಿ.

| ಪ್ರಾಥಮಿಕ ವಲಯ | ದ್ವಿತೀಯ ವಲಯ | ತೃತಿಯ ವಲಯ |
|---|---|---|
| • | • | • |
| • | • | • |
| • | • | • |

## ಕೈಗಾರಿಕೆಗಳ ಬೆಳವಣಿಗೆ

### ಒಂದು ಆತ್ಮ ಕಥೆ

ಮಳೆಯಿಂದ ಒದ್ದೆಯಾಗಿ, ಮಂಜಿನಿಂದ ಆವೃತವಾಗಿ, ಬಿಸಿಲು ತಾಗಿ ಬೆಟ್ಟದ ಇಳಿಜಾರಿನಲ್ಲಿದ್ದ ಒಂದು ರಬ್ಬರ್ ಮರದ ಹಾಲಾಗಿ ನಾನು ಮೊದಲು ರೂಪುಗೊಂಡೆನು. ನನ್ನನ್ನು ಸಂಗ್ರಹಿಸಿ ಆಸಿಡ್ ಬೆರೆಸಿ ಹಾಳೆ ರೂಪದಲ್ಲಿ ಮಾಡಿದರು. ಒಣಗಿಸಿ ತೆಗೆದ ಹಾಳೆಯನ್ನು ವಲ್ಕನೈಸೇಶನ್ ಪ್ರಕ್ರಿಯೆಯ ಮೂಲಕ ದಪ್ಪವಾಗಿಸಿದರು. ಚಪ್ಪಲಿಯ ಭಾರವುಳ್ಳ ಅಚ್ಚು ಉಪಯೋಗಿಸಿ ಒತ್ತಿದಾಗ ನಾನು ಮತ್ತಷ್ಟು ಬಲಿಷ್ಠನಾದೆ. ಸುತ್ತಿಗೆಯ ಶಬ್ದ, ಚರ್ಮ ಹಾಗೂ ರಬ್ಬರ್ ಹಾಳೆಯ ವಾಸನೆ ಇರುವ ಕಾರ್ಯಗಾರದಲ್ಲಿ ನಾನು ಚಪ್ಪಲಿಯ ರೂಪವಾದೆ. ನನ್ನನ್ನು ಮತ್ತಷ್ಟು ರೂಪುಗೊಳಿಸಿ ಮಾರುಕಟ್ಟೆಗೆ ರವಾನಿಸಿದರು. ಮಾರುಕಟ್ಟೆಯಿಂದ ನಾನು ಮನುಷ್ಯರೊಂದಿಗೆ ನಂಟು ಬೆಳೆಸಿದೆ. ಹೆಚ್ಚಾಗಿ ಅನೇಕರ ಜೀವನ ಪ್ರಯಾಣದ ಭಾಗವಾದೆ. ನಾನು ನಗರದ ಜನನಿಬಿಡ ಬೀದಿಗಳಲ್ಲಿ, ಶಾಂತವಾದ ಹಳ್ಳಿಗಳಲ್ಲಿ, ಪರ್ವತ ಮಾರ್ಗಗಳಲ್ಲಿ ಮತ್ತು ಕಾರ್ಖಾನೆಗಳಲ್ಲೆಲ್ಲಾ ನನ್ನ ಮಾಲೀಕರ ಪಾದಸೇರಿ ಸಂಚರಿಸಿದೆ.



- ರಬ್ಬರ್ ಚಪ್ಪಲಿ



ರಬ್ಬರ್ ಚಪ್ಪಲಿಯ ಆತ್ಮಕಥೆ ಓದಿದಿರಲ್ಲವೇ?

ಇದೇ ರೀತಿಯಲ್ಲಿ ನೀವು ಉಪಯೋಗಿಸುವ ಬೇರೆ ಯಾವುದಾದರೂ ಒಂದು ಉತ್ಪನ್ನದ ನಿರ್ಮಾಣ ಹಂತಗಳನ್ನು ಸೇರಿಸಿ ಒಂದು ಆತ್ಮಕಥೆ ತಯಾರಿಸಿ ತರಗತಿಯಲ್ಲಿ ಪ್ರಸ್ತುತಪಡಿಸಿರಿ.

ಕೃಷಿ ವಲಯದಿಂದ ಸಂಗ್ರಹಿಸಿದ ಕಚ್ಚಾವಸ್ತುಗಳನ್ನು ಉಪಯೋಗಿಸಿ ಮನುಷ್ಯರಿಗೆ ಉಪಯುಕ್ತವಾದ ವಿವಿಧ ಉತ್ಪನ್ನಗಳನ್ನು ತಯಾರಿಸುವ ಅನೇಕ ಉದಾಹರಣೆಗಳನ್ನು ನಾವು ತಿಳಿದುಕೊಂಡೆವಲ್ಲವೇ.

ಆರಂಭಕಾಲದಲ್ಲಿ ಹೆಚ್ಚಾಗಿ ಆಹಾರ ಪದಾರ್ಥಗಳನ್ನು ಕೃಷಿ ಮಾಡುತ್ತಿದ್ದರು. ಕಾಲಕ್ರಮೇಣ ಕೈಗಾರಿಕಾ ಬೆಳವಣಿಗೆಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ಕೃಷಿ ಮಾಡಲು ಪ್ರಾರಂಭಿಸಿದರು. ಇದು ಹತ್ತಿ, ಸೆಣಬು ಮೊದಲಾದ ಕೃಷಿ ಬೆಳೆಗಳ ವಿಸ್ತರಣೆಗೆ ಕಾರಣವಾಯಿತು. ನೈಸರ್ಗಿಕ ಸಂಪನ್ಮೂಲಗಳು, ಕೃಷಿ ವಲಯದಿಂದ ಸಂಗ್ರಹಿಸಿದ ಕಚ್ಚಾ ವಸ್ತುಗಳನ್ನು ಉಪಯೋಗಿಸಿ ಕೈಗಾರಿಕೆ ವಲಯವು ಬೆಳೆಯಿತು.




ಚಿತ್ರ 6.4 ಎ




ಚಿತ್ರ 6.4 ಬಿ

ಚಿತ್ರಗಳನ್ನು ನಿರೀಕ್ಷಿಸಿರಿ.

ಕೃಷಿ ವಲಯ ಮತ್ತು ಕೈಗಾರಿಕಾ ವಲಯಗಳು ಪರಸ್ಪರ ಸಂಬಂಧವನ್ನು ಹೊಂದಿವೆ ಎಂದು ಚಿತ್ರಗಳಿಂದ ತಿಳಿದುಕೊಂಡಿರಲ್ಲವೇ. ಇದೇ ರೀತಿಯಲ್ಲಿ ಪ್ರಾಥಮಿಕ, ದ್ವಿತೀಯ ವಲಯಗಳಿಗೆ ಅಗತ್ಯವಿರುವ ಸೇವೆಗಳನ್ನು ತೃತೀಯ ವಲಯವು ಒದಗಿಸುವುದರಿಂದ ಈ ಮೂರು ವಲಯಗಳು ಪರಸ್ಪರ ಸಂಬಂಧ ಹೊಂದಿವೆ. ಮೂರು ವಲಯಗಳಲ್ಲಿ ನಡೆಯುವ ಆರ್ಥಿಕ ಚಟುವಟಿಕೆಗಳ ಫಲವಾಗಿ ಉತ್ಪಾದನೆಯು ಸಾಧ್ಯವಾಗುವುದು.

ಉತ್ಪಾದನೆ ಎಂದರೇನು? ನಾವು ನೋಡೋಣ.

## ಉತ್ಪಾದನೆ ಮತ್ತು ಉತ್ಪಾದನಾ ಘಟಕಗಳು

ಉತ್ಪಾದನೆಯು ಜನರಿಗೆ ಅಗತ್ಯವಿರುವ ಸರಕು ಮತ್ತು ಸೇವೆಗಳನ್ನು ನಿರ್ಮಿಸುವ ಪ್ರಕ್ರಿಯೆಯಾಗಿದೆ. ಹಲವಾರು ಘಟಕಗಳ ಚಟುವಟಿಕೆಗಳ ಪರಿಣಾಮವಾಗಿ ಉತ್ಪಾದನೆಯು ನಡೆಯುತ್ತದೆ. ಉತ್ಪಾದನೆಗೆ ಸಹಾಯ ಮಾಡುವ ವಿವಿಧ ಘಟಕಗಳನ್ನು ಉತ್ಪಾದನಾ ಘಟಕಗಳು ಎಂದು ಕರೆಯುತ್ತಾರೆ. ಭೂಮಿ, ಪರಿಶ್ರಮ, ಬಂಡವಾಳ ಮತ್ತು ಸಂಘಟನೆ ಎಂಬಿವುಗಳು ಉತ್ಪಾದನೆಯ ಘಟಕಗಳಾಗಿವೆ. ಇವುಗಳಲ್ಲಿ ಪ್ರತಿಯೊಂದನ್ನೂ ವಿವರವಾಗಿ ತಿಳಿದುಕೊಳ್ಳೋಣ.

### ಭೂಮಿ

ಉತ್ಪಾದನಾ ಪ್ರಕ್ರಿಯೆಯಲ್ಲಿ, ಭೂಮಿ ಎಂದರೆ ನೀರು, ಗಾಳಿ, ಸೂರ್ಯ ಪ್ರಕಾಶ, ಮಣ್ಣು, ಗಣಿಗಾರಿಕೆ ಮಾಡಿದ ಖನಿಜಗಳು ಇತ್ಯಾದಿಗಳಾಗಿವೆ. ಭೂಮಿಯ ಮೇಲ್ಮೈ, ಭೂಮಿಯ ವಾತಾವರಣ ಮತ್ತು ಭೂಮಿಯ ಒಳಭಾಗದ ಪ್ರಾಕೃತಿಕ ಸಂಪನ್ಮೂಲಗಳನ್ನು ಉತ್ಪಾದನೆಗಾಗಿ ಉಪಯೋಗಿಸಲಾಗುತ್ತದೆ.




ಚಿತ್ರ 6.5

ಚಿತ್ರಗಳಲ್ಲಿ ಸೂಚಿಸಿರುವವುಗಳಲ್ಲದೆ ಇತರ ಯಾವೆಲ್ಲ ಪ್ರಾಕೃತಿಕ ಸಂಪನ್ಮೂಲಗಳನ್ನು ಉತ್ಪಾದನಾ ಪ್ರಕ್ರಿಯೆಯಲ್ಲಿ ಬಳಸಲಾಗುತ್ತದೆ ಎಂದು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

- ಪೆಟ್ರೋಲಿಯಂ
- ಲೋಹ ಅದಿರುಗಳು
- 
- 

## ಪರಿಶ್ರಮ

ಪರಿಶ್ರಮ ಎಂದರೆ ಉತ್ಪಾದನಾ ಪ್ರಕ್ರಿಯೆಯಲ್ಲಿ ಕಾರ್ಮಿಕರು ಉಪಯೋಗಿಸುವ ದುಡಿಮೆಯ ಸಾಮರ್ಥ್ಯವಾಗಿದೆ. ಕಾರ್ಮಿಕರು ಶಾರೀರಿಕ ಹಾಗೂ ಬೌದ್ಧಿಕ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಉತ್ಪಾದನಾ ಪ್ರಕ್ರಿಯೆಯ ಭಾಗವಾಗುತ್ತಾರೆ. ಪ್ರತಿಫಲ ಲಭಿಸುವ ದುಡಿಮೆಯನ್ನು ಮಾಡುವವರನ್ನು ಕಾರ್ಮಿಕರಾಗಿ ಪರಿಗಣಿಸಲಾಗುತ್ತದೆ.

ನಿಮ್ಮ ಸುತ್ತಮುತ್ತ ವಿವಿಧ ಕೆಲಸಗಳಲ್ಲಿ ತೊಡಗಿಕೊಂಡಿರುವ ಕಾರ್ಮಿಕರನ್ನು ತಿಳಿದಿರುವಿರಲ್ಲವೇ? ಅವರ ಕೆಲಸದ ವಿಶೇಷತೆಗಳನ್ನು ಅನ್ವೇಷಿಸಿ ತಿಳಿಯಿರಿ.

## ಬಂಡವಾಳ

ಯಾವುದೇ ಉತ್ಪನ್ನದ ಉತ್ಪಾದನ ಪ್ರಕ್ರಿಯೆಗೆ ಬಂಡವಾಳದ ಅಗತ್ಯವಿದೆ. ಬಂಡವಾಳವು ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಉಪಯೋಗಿಸುವ ಸಂಪತ್ತು ಮತ್ತು ಸಂಪನ್ಮೂಲಗಳನ್ನು ಸೂಚಿಸುತ್ತದೆ. ಕಾರ್ಖಾನೆಗಳು, ಕಟ್ಟಡಗಳು, ಯಂತ್ರಗಳು, ಕಚ್ಚಾವಸ್ತುಗಳು, ವಾಹನಗಳು, ಕಂಪ್ಯೂಟರ್‌ಗಳು ಮತ್ತು ಕಾರ್ಮಿಕರಿಗಿರುವ ವೇತನ ಎಂಬುವುಗಳೆಲ್ಲ ಬಂಡವಾಳದ ಭಾಗವಾಗಿವೆ.

**ಬಂಡವಾಳ ಹಲವು ವಿಧ**

ಆರ್ಥಿಕ ಮೂಲಧನ(ಹಣ, ನಿಕ್ಷೇಪ) ಮಾನವ ಬಂಡವಾಳ (ಸಾಮರ್ಥ್ಯ, ಜ್ಞಾನ), ಭೌತಿಕ ಬಂಡವಾಳ (ಯಂತ್ರಗಳು, ಮೂಲಭೂತ ಸೌಲಭ್ಯಗಳು), ನೈಸರ್ಗಿಕ ಬಂಡವಾಳ (ಸಂಪನ್ಮೂಲ, ಪರಿಸರ) ಹೀಗೆ ಬಂಡವಾಳದಲ್ಲಿ ಅನೇಕ ವಿಧವಿದೆ.

## ಸಂಘಟನೆ

ಸಂಘಟನೆಯು ಉತ್ಪಾದನ ಘಟಕಗಳಾದ ಭೂಮಿ, ಪರಿಶ್ರಮ, ಬಂಡವಾಳ ಎಂಬಿವುಗಳನ್ನು ಸಂಯೋಜಿಸುವುದಾಗಿದೆ. ಇದಕ್ಕಾಗಿ ಕೆಲಸ ಮಾಡುವವರನ್ನು ಸಂಘಟಕರು/ಉದ್ಯಮಿಗಳು ಎಂದು ಕರೆಯುತ್ತಾರೆ. ಒಂದು ಹೊಸ ವ್ಯವಹಾರ ಆಶಯ ರೂಪಿಸುವುದು, ಅದಕ್ಕೆ ಅಗತ್ಯವಾದ ಬಂಡವಾಳ ಸಂಗ್ರಹಿಸುವುದು, ಆಶಯ ಕಾರ್ಯಗತಗೊಳಿಸುವುದು ಇವೆಲ್ಲವೂ ಸಂಘಟನೆಯ ಭಾಗವಾಗಿದೆ.

ಉತ್ಪಾದನೆಯ ಘಟಕಗಳು ಒಟ್ಟು ಸೇರಿ ಕಾರ್ಯಾಚರಿಸುವಾಗ ಉತ್ಪಾದನೆ ಹಾಗೂ ಅದರ ಮೂಲಕ ಉತ್ಪನ್ನವು ರೂಪಗೊಳ್ಳುತ್ತದೆ. ಉತ್ಪಾದನ ಘಟಕಗಳಾದ ಭೂಮಿ, ಪರಿಶ್ರಮ, ಬಂಡವಾಳ, ಸಂಘಟನೆ ಎಂಬಿವುಗಳಿಗೆ ಪ್ರತಿಫಲ ಅಗತ್ಯವಾಗಿದೆ.

ಅವುಗಳು ಯಾವುವು ಎಂದು ಪರಿಶೀಲಿಸೋಣ.

| ಉತ್ಪಾದನಾ ಘಟಕಗಳು | ಪ್ರತಿಫಲ |
|---|---|
| ಭೂಮಿ | ಗೇಣಿ |
| ಪರಿಶ್ರಮ | ಕೂಲಿ |
| ಬಂಡವಾಳ | ಬಡ್ಡಿ |
| ಸಂಘಟನೆ | ಲಾಭ |

ಉತ್ಪಾದನೆ ಮತ್ತು ಉತ್ಪಾದನಾ ಘಟಕಗಳಿಗೆ ಸಂಬಂಧಿಸಿದಂತೆ ನೀಡಿರುವ ವರ್ಕ್‌ಶೀಟನ್ನು ಪೂರ್ತಿಗೊಳಿಸಿರಿ.

| ವರ್ಕ್‌ಶೀಟ್ | |
|---|---|
| ಶಾರೀರಿಕ ಹಾಗೂ ಬೌದ್ಧಿಕವಾದ ಪರಿಶ್ರಮ, ಸಾಮರ್ಥ್ಯ ಉಪಯೋಗಿಸಲಾಗುತ್ತದೆ. | ಪರಿಶ್ರಮ |
| ಉತ್ಪಾದನಾ ಪ್ರಕ್ರಿಯೆಯಲ್ಲಿ ಬಂಡವಾಳಕ್ಕೆ ಸಿಗುವ ಪ್ರತಿಫಲ | ................................... |
| ಉತ್ಪಾದನೆಗೆ ಅಗತ್ಯವಾದ ಭೌತಿಕ ಸೌಲಭ್ಯಗಳನ್ನು ಒದಗಿಸುವ ಉತ್ಪಾದನಾ ಘಟಕ | ................................... |
| ಒಂದು ಹೊಸ ವ್ಯವಹಾರ, ಆಶಯವನ್ನು ಕಾರ್ಯಗತಗೊಳಿಸಲು ಮುಂದಾಳತ್ವ ವಹಿಸುವ ವ್ಯಕ್ತಿ. | ................................... |
| ಉತ್ಪಾದನಾ ಪ್ರಕ್ರಿಯೆಯಲ್ಲಿ ಗೇಣಿಯು ಪ್ರತಿಫಲವಾಗಿರುವ ಘಟಕ | ................................... |

## ಉತ್ಪಾದಕರಿಂದ ಬಳಕೆಗಾರನೆಡೆಗೆ

ಚಿತ್ರವನ್ನು ನಿರೀಕ್ಷಿಸಿರಿ.



ನೀವು ಇದೇ ರೀತಿ ವಸ್ತುಗಳನ್ನು ಖರೀದಿಸಿ ಉಪಯೋಗಿಸುವುದಿಲ್ಲವೇ?

ಆಹಾರ, ವಸತಿ, ಬಟ್ಟೆ, ಆರೋಗ್ಯ, ಶಿಕ್ಷಣ, ಮನೋರಂಜನೆ ಮುಂತಾದ ಅಗತ್ಯಗಳನ್ನು ಪೂರೈಸಲು ನಾವು ಸರಕು ಮತ್ತು ಸೇವೆಗಳನ್ನು ಉಪಯೋಗಿಸುತ್ತೇವೆ.



ಕಳೆದ ಒಂದು ವಾರದಲ್ಲಿ ನಿಮ್ಮ ಮನೆಯಲ್ಲಿ ಉಪಯೋಗಿಸಿದ ಸರಕು ಮತ್ತು ಸೇವೆಗಳ ಪಟ್ಟಿ ತಯಾರಿಸಿರಿ.

ಬಳಕೆ ಎಂಬುದು ಮನುಷ್ಯರ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಸರಕು ಮತ್ತು ಸೇವೆಗಳನ್ನು ಖರೀದಿಸಿ ಉಪಯೋಗಿಸುವುದಾಗಿದೆ.

ಬಳಕೆಗಾರ ಎಂದರೆ ಹಣ ನೀಡಿ ಅಥವಾ ಹಣ ಕೊಡುತ್ತೇನೆ ಎಂಬ ಒಪ್ಪಂದದಲ್ಲಿ ಯಾವುದಾದರೂ ವಸ್ತು ಅಥವಾ ಸೇವೆಯನ್ನು ಖರೀದಿಸಿ ಉಪಯೋಗಿಸುವ ವ್ಯಕ್ತಿಯಾಗಿದ್ದಾನೆ.

ನಮ್ಮ ಪರಿಸರವನ್ನು ಸಂದರ್ಶಿಸುವ ಪ್ರಮುಖ ವ್ಯಕ್ತಿ ಬಳಕೆಗಾರನಾಗಿದ್ದಾನೆ. ಬಳಕೆಗಾರ ನಮ್ಮನ್ನು ಆಶ್ರಯಿಸುವುದಲ್ಲ, ನಾವು ಅವನನ್ನು ಅವಲಂಬಿಸಿರುವುತ್ತೇವೆ. ಆ ವ್ಯಕ್ತಿಯು ನಮ್ಮ ಕೆಲಸಕ್ಕೆ ಅಡ್ಡಿಯಲ್ಲ, ನಮ್ಮ ಕೆಲಸದ ಉದ್ದೇಶವಾಗಿದ್ದಾನೆ. ನಮ್ಮ ವ್ಯವಹಾರಗಳಲ್ಲಿ ಅವನು ಅನ್ಯನು ಅಲ್ಲ, ವ್ಯವಹಾರದ ಭಾಗವಾಗಿದ್ದಾನೆ. ಆ ವ್ಯಕ್ತಿಗೆ ಸೇವೆಯನ್ನು ನೀಡುವುದರ ಮೂಲಕ ಅವನಿಗೆ ನಾವು ಔದಾರ್ಯ ತೋರಿಸುವುದಲ್ಲ, ಸೇವೆ ಮಾಡಲು ಅವಕಾಶವನ್ನು ಒದಗಿಸುವ ಮೂಲಕ ನಮಗೊಂದು ಔದಾರ್ಯ ಮಾಡಿ ಕೊಡುವುದಾಗಿದೆ.



- ಗಾಂಧೀಜಿ

ಗಾಂಧೀಜಿಯವರ ಮಾತುಗಳಿಂದ ಬಳಕೆಗಾರನ ಪ್ರಾಮುಖ್ಯತೆಯನ್ನು ಅರಿತುಕೊಂಡಿರಲ್ಲವೇ?

ನಾವು ಸರಕು ಮತ್ತು ಸೇವೆಗಳನ್ನು ಬಳಸುವಾಗ ಬಳಕೆಗಾರ ಎಂಬ ನೆಲೆಯಲ್ಲಿ ಅಂಗಡಿಗಳಿಂದ ಮತ್ತು ಸಂಸ್ಥೆಗಳಿಂದ ಈ ಪ್ರಾಮುಖ್ಯತೆ ಹಾಗೂ ಪರಿಗಣನೆ ಲಭಿಸುತ್ತಿದೆಯೇ? ಚರ್ಚಿಸಿರಿ.




ವಾರ್ತಾ ಶೀರ್ಷಿಕೆಗಳನ್ನು ನಿರೀಕ್ಷಿಸಿರಿ.

ಇಂತಹ ಘಟನೆಗಳು ನಿಮ್ಮ ಗಮನಕ್ಕೆ ಬಂದಿವೆಯೇ?

ಇಂತಹ ಸರಕುಗಳನ್ನು ಖರೀದಿಸುವಾಗ ಹಾಗೂ ಸೇವೆಗಳನ್ನು ಉಪಯೋಗಿಸುವಾಗ ಬಳಕೆಗಾರ ಎಂಬ ನೆಲೆಯಲ್ಲಿ ನಮಗೆ ಯಾವೆಲ್ಲ ಹಕ್ಕುಗಳು ಲಭಿಸಬೇಕಾಗಿದೆ?

| | |
|---|---|
| ಗುಣಮಟ್ಟ | ವ್ಯಾಪಾರದ ನಂತರ ಸೇವೆ |
| ವಿಶ್ವಾಸಾರ್ಹತೆ | ಅಳತೆ ಮತ್ತು ತೂಕದಲ್ಲಿ ನಿಖರತೆ |

ಕೆಳಗೆ ನೀಡಿರುವ ವರ್ಕ್‌ಶೀಟ್ ಪೂರ್ತಿಗೊಳಿಸಿರಿ.

| ಸೂಚಕಗಳು | ಇದೆ | ಇಲ್ಲ |
|---|---|---|
| ಉತ್ಪನ್ನಗಳನ್ನು ಖರೀದಿಸುವ ಮೊದಲು ಅವುಗಳಲ್ಲಿ ನಿಯಮ ಪ್ರಕಾರ ದಾಖಲಿಸಿದ ಗರಿಷ್ಟ ಮಾರಾಟ ಬೆಲೆ(MRP)ಯನ್ನು ಸರಿಯಾಗಿ ಪರಿಶೋಧಿಸುತ್ತೇವೆ. | | |
| ಆಹಾರ ಪದಾರ್ಥಗಳನ್ನು ಖರೀದಿಸುವಾಗ ಕಾಲಾವಧಿ (Expiry Date) ಮುಗಿಯಲಿಲ್ಲ ಎಂದು ಖಚಿತಪಡಿಸುತ್ತೇವೆ. | | |
| ಜಾಹೀರಾತು ವಾಕ್ಯಗಳಲ್ಲಿ ಹೇಳಿರುವ ಗುಣಮಟ್ಟ ಉತ್ಪನ್ನಕ್ಕೆ ಇತ್ತು. | | |
| ಮನೆಯ ಎಲೆಕ್ಟ್ರಾನಿಕ್ ಉಪಕರಣಗಳಿಗೆ ವ್ಯಾಪಾರ ನಂತರದ ಸೇವೆಯು ಸರಿಯಾದ ಸಮಯದಲ್ಲಿ ಲಭಿಸುತ್ತದೆ. | | |
| ಖರೀದಿಸಿದ ಉತ್ಪನ್ನಕ್ಕೆ ಅದರ ಬೆಲೆಗೆ ಅನುಗುಣವಾಗಿ ಗುಣಮಟ್ಟ ಇತ್ತು. | | |

ವರ್ಕ್‌ಶೀಟ್ ಪೂರ್ತಿಗೊಳಿಸುವುದರ ಮೂಲಕ ಬಳಕೆಗಾರ ಎಂಬ ನೆಲೆಯಲ್ಲಿ ನಾವು ಯಾವೆಲ್ಲ ಕಾರ್ಯಗಳನ್ನು ಗಮನಿಸಬೇಕೆಂದು ತಿಳಿದಿರಲ್ಲವೆ.

ಬಳಕೆಗಾರನಿಗೆ ಸಿಗಬೇಕಾದ ಹಕ್ಕುಗಳು ನಿಷೇಧಿಸಲ್ಪಟ್ಟರೆ ಸಂಬಂಧಪಟ್ಟ ಸರಕಾರಿ ಇಲಾಖೆಗಳನ್ನು ಹಾಗೂ ಗ್ರಾಹಕ ಕೋರ್ಟನ್ನು ಮೊರೆ ಹೋಗಬಹುದು. ಜಿಲ್ಲೆ, ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ಗ್ರಾಹಕ ವಿವಾದ ಪರಿಹಾರ ಕೋರ್ಟುಗಳು ಅಸ್ತಿತ್ವದಲ್ಲಿವೆ. ಬಳಕೆಗಾರರು ಶೋಷಣೆಗೊಳಗಾಗುವುದನ್ನು ತಡೆಯುವುದಕ್ಕಾಗಿ ಕಠಿಣವಾದ ಕಾನೂನುಗಳು, ಗ್ರಾಹಕ ವಿದ್ಯಾಭ್ಯಾಸ ಎಂಬಿವುಗಳು ಅಗತ್ಯವಿದೆ. 1986 ರಲ್ಲಿ ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾನೂನು ಜಾರಿಗೆ ಬಂತು.

ಗ್ರಾಹಕ ದಿನಾಚರಣೆಯ ಭಾಗವಾಗಿ ಡಿಜಿಟಲ್ ಪೋಸ್ಟರ್ ತಯಾರಿಸಿ, ತರಗತಿ ಮಟ್ಟದಲ್ಲಿ ಹಾಗೂ ಶಾಲಾ ಮಟ್ಟದಲ್ಲಿ ಪ್ರದರ್ಶಿಸಿರಿ.

ಜನಜೀವನ ಸುಧಾರಿಸಬೇಕಿದ್ದರೆ ಸರಕು ಮತ್ತು ಸೇವೆಗಳ ಅಗತ್ಯವಿದೆ. ಪ್ರಾಕೃತಿಕ ಸಂಪನ್ಮೂಲಗಳು, ಮಾನವ ಪರಿಶ್ರಮ ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲಾಗುತ್ತದೆ. ಉತ್ಪಾದನೆ, ಮಿಗತೆ ಉತ್ಪಾದನೆ, ವಿನಿಮಯ ಸಂಪ್ರದಾಯ, ತಂತ್ರಜ್ಞಾನದ ಪ್ರಭಾವ ಮತ್ತು ಮಾರುಕಟ್ಟೆಗಳ ಬೆಳವಣಿಗೆ ಎಂಬಿವುಗಳು ಆರ್ಥಿಕ ವ್ಯವಸ್ಥೆಯ ಪ್ರಗತಿಯ ಮೇಲೆ ಪ್ರಭಾವ ಬೀರುತ್ತದೆ. ಪ್ರಾಥಮಿಕ - ದ್ವಿತೀಯ - ತೃತೀಯ ವಲಯಗಳ ಪರಸ್ಪರ ಸಂಬಂಧವು ಆರ್ಥಿಕ ವ್ಯವಸ್ಥೆಯನ್ನು ಕ್ರಿಯಾತ್ಮಕಗೊಳಿಸುತ್ತದೆ.

## ಮುಂದುವರಿದ ಚಟುವಟಿಕೆಗಳು

- ಆಶಯ ಚಿತ್ರವನ್ನು ಪೂರ್ತಿಗೊಳಿಸಿರಿ.




- 'ಉತ್ಪಾದನೆ ಮತ್ತು ಉತ್ಪಾದನಾ ಘಟಕಗಳು' ಎಂಬ ವಿಷಯವನ್ನು ಆಧರಿಸಿ ತರಗತಿಯಲ್ಲಿ ಒಂದು ಸೆಮಿನಾರ್ ಆಯೋಜಿಸಿರಿ. ಭೂಮಿ, ಪರಿಶ್ರಮ, ಬಂಡವಾಳ, ಸಂಘಟನೆ ಎಂಬ ನಾಲ್ಕು ಗುಂಪುಗಳಾಗಿ ಮಾಹಿತಿ ಸಂಗ್ರಹ ನಡೆಸಿ ಸೆಮಿನಾರ್ ಮಂಡಿಸಿರಿ.
- ಡಿಸೆಂಬರ್ 24 ರಾಷ್ಟ್ರೀಯ ಗ್ರಾಹಕ ದಿನಾಚರಣೆ ಭಾಗವಾಗಿ ' ಬಳಕೆಗಾರರ ಹಕ್ಕುಗಳು' ಎಂಬ ವಿಷಯ ದಲ್ಲಿ ಸಮಾಜ ವಿಜ್ಞಾನ ಕ್ಲಬ್ಬಿನ ನೇತೃತ್ವದಲ್ಲಿ ಜಾಗೃತಿ ತರಗತಿಯನ್ನು ಆಯೋಜಿಸಿರಿ.
- ಪ್ರಾಥಮಿಕ - ದ್ವಿತೀಯ - ತೃತೀಯ ವಲಯಗಳ ಪರಸ್ಪರ ಸಂಬಂಧವನ್ನು ತೋರಿಸುವ ಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಮ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.



7

# ಭೂಖಂಡಗಳ ಮೂಲಕ

"ಚರಿತ್ರೆಯೆಡೆಗೆ ಹಾಯಿದೋಣಿ
ಓಡಿಸಿದ ಪೋರ್ಚುಗೀಸರು
ಶತಮಾನಗಳ ಮೊದಲು
ಲಂಗರು ಹಾಕಿದ ಗೋವಾದ
ತೀರಗಳ ಮೀನುಗಾರರ
ಇಷ್ಟದೇವತೆಯು
ಮಾದೇಯಿಯಾಗಿದ್ದಾಳೆ.
ನಾವು ಜೊತೆಯಾಗಿ ಹಿಂದೂ
ಮಹಾಸಾಗರದಿಂದ
ಫೆಸಿಫಿಕ್ ಮತ್ತು ಅಟ್ಲಾಂಟಿಕ್
ಸಾಗರಗಳನ್ನು ದಾಟಿ, ಇತಿಹಾಸದ
ಅಲೆಗಳ ಶಿಖರಗಳನ್ನು ದಾಟಿ,
ಗಾಳಿ ಮತ್ತು ಅಲೆಗಳ ಮಧ್ಯೆ
ಪರಸ್ಪರ ಒಂಟಿಯೆಂದು
ತೋರಿಸಿಕೊಳ್ಳದೆ ಕಡಲು, ಕಾಲ
ಮತ್ತು ಜಗತ್ತನ್ನು ಸುತ್ತಿ ಬಂದೆನು."

*ಆಕರ: ಕಡಲು ಏಕಾಂಗಿಯಾಗಿ ಆಹ್ವಾನಿಸಿದಾಗ*
**ಕಮಾಂಡರ್ ಅಭಿಲಾಷ್ ಟೋಮಿ**

ಕಮಾಂಡರ್ ಅಭಿಲಾಷ್ ಟೋಮಿಯವರು ಸಾಗರಗಳು ಮತ್ತು ಭೂಖಂಡಗಳನ್ನು ದಾಟಿದ ಪ್ರಯಾಣದ ಅನುಭವಗಳನ್ನು 'ಕಡಲು ಏಕಾಂಗಿಯಾಗಿ ಆಹ್ವಾನಿಸಿದಾಗ' ಎಂಬ ಪ್ರವಾಸ ಕಥನದಲ್ಲಿ ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಇವರು ಭಾರತೀಯ ನೌಕಾ ಸೇನೆಯ 'ಮಾದೇಯಿ' ಎಂಬ ಹಾಯಿ ದೋಣಿಯಲ್ಲಿ ಯಾವುದೇ ಸ್ಥಳದಲ್ಲಿ ನಿಲ್ಲದೆ ಏಕಾಂಗಿಯಾಗಿ ಜಗತ್ತನ್ನು ಸುತ್ತಿ ಬಂದ ಮೊದಲ ಭಾರತೀಯ ಹಾಗು ಮಲಯಾಳಿಯಾಗಿದ್ದಾರೆ. ಅವರು ಈ ಪುಸ್ತಕದಲ್ಲಿ ಸಾಗರದಿಂದ ಸಾಗರಕ್ಕೆ ಪ್ರಯಾಣಿಸುವಾಗ ಭೂಮಿಯ ವಿಶಾಲ ಮೇಲ್ಮೈಯಲ್ಲಿ ತಮ್ಮದೇ ಆದ ವಿಶೇಷತೆಗಳನ್ನು ಹೊಂದಿರುವ ನೆಲಗಳು/ತಾಣಗಳು ಹೇಗೆ ವ್ಯಾಪಿಸಿವೆ ಎಂಬುದನ್ನೂ ಅವೆಲ್ಲವು ಎಷ್ಟರಮಟ್ಟಿಗೆ ಪರಸ್ಪರ ಸಂಬಂಧ ಹೊಂದಿವೆ ಎಂಬುದನ್ನು ವಿವರಿಸುತ್ತಾರೆ. ಕಮಾಂಡರ್ ಅಭಿಲಾಷ್ ಟೋಮಿ ಪ್ರಪಂಚ ಸುತ್ತಿದ ಹಾಗೆ ನಮಗೂ ಒಂದು ವಿಶ್ವ ಪರ್ಯಟನೆ ಮಾಡೋಣವೇ?

ಭೂಖಂಡಗಳು ಸಾಗರಗಳ ನಡುವೆ ಇರುವ ಅತಿ ವಿಶಾಲವಾದ ಭೂಭಾಗಗಳಾಗಿವೆ. ಹೆಚ್ಚಿನ ಭೂಖಂಡಗಳು ಅನೇಕ ದೇಶಗಳನ್ನು ಒಳಗೊಂಡಿರುತ್ತವೆ. ಪ್ರತಿಯೊಂದು ಭೂಖಂಡಕ್ಕೂ ತನ್ನದೇ ಆದ ಭೌಗೋಳಿಕ ವಿಶೇಷತೆಗಳಿವೆ. ಅವುಗಳನ್ನು ನಾವು ಪರಿಶೀಲಿಸೋಣ.

ಕೆಳಗೆ ಕೊಟ್ಟಿರುವ ಭೂಪಟದಲ್ಲಿ ಭೂಖಂಡಗಳ ಹೆಸರುಗಳನ್ನು ಬರೆಯಿರಿ.



## ಗಾತ್ರದಲ್ಲಿ ಮೊದಲಿಗ

ಏಷ್ಯಾವು ಭೂಮಿಯ ಅತಿದೊಡ್ಡ ಭೂಖಂಡವಾಗಿದೆ ಎಂದು ನಿಮಗೆ ತಿಳಿದಿಲ್ಲವೇ. ನಮ್ಮ ದೇಶವಾದ ಭಾರತವು ಏಷ್ಯಾದಲ್ಲಿದೆ. ಏಷ್ಯಾವು ಭೂಮಿಯ ಭೂಪ್ರದೇಶದ ಸುಮಾರು ಮೂರನೇ ಒಂದು ಭಾಗವನ್ನು ಆವರಿಸಿರುವ ಭೂಖಂಡವಾಗಿದೆ.

### ಗಡಿಗಳು

ಭೂಪಟವನ್ನು ನಿರೀಕ್ಷಣೆ ಮಾಡಿ, ಏಷ್ಯಾದ ಗಡಿಗಳನ್ನು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.



ಭೂಪಟ 7.1

| ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
|---|---|---|---|
| ಪೆಸಿಫಿಕ್ ಸಾಗರ | ಯುರೋಪ್ | | |

ಏಷ್ಯಾದ ಯಾವ ಭಾಗವು ಭೂ ಗಡಿಯನ್ನು ಹೊಂದಿದೆ?

•

ಏಷ್ಯಾದ ಪಶ್ಚಿಮ ಭಾಗದಲ್ಲಿ ನೆಲೆಗೊಂಡಿರುವ ಯೂರಾಲ್ ಪರ್ವತ ಶ್ರೇಣಿಯು ಯುರೋಪ್ ಮತ್ತು ಏಷ್ಯಾವನ್ನು ಪ್ರತ್ಯೇಕಿಸುತ್ತದೆ.


ಚಿತ್ರ 7.1 - ಯೂರಾಲ್ ಪರ್ವತ ಶ್ರೇಣಿ

ಏಷ್ಯಾದ ಕೆಲವು ಭೂಪ್ರಕೃತಿ ವಿಶೇಷತೆಗಳನ್ನು ನಾವು ಪರಿಚಯಿಸೋಣ. ಜಗತ್ತಿನ ಅತಿ ಎತ್ತರದ ಶಿಖರವಾದ ಎವರೆಸ್ಟ್ ನೆಲೆ ನಿಂತಿರುವ ಹಿಮಾಲಯ ಪರ್ವತವು ಏಷ್ಯಾದಲ್ಲಿದೆ. ಏಷ್ಯಾದ ಇತರ ಪರ್ವತಗಳು ಯಾವುವು?

ಅಟ್ಲಾಸ್ ಉಪಯೋಗಿಸಿ ಹಿಮಾಲಯ ಪರ್ವತ ಹಾಗು ಇತರ ಪರ್ವತಗಳ ಸ್ಥಾನಗಳನ್ನು ಕಂಡುಹಿಡಿಯಿರಿ.

ಪರ್ವತಗಳಲ್ಲದೆ ಮರುಭೂಮಿಗಳು, ಸಮತಲಗಳು, ಪೀಠ ಭೂಮಿಗಳು ಎಂಬಿವುಗಳು ಏಷ್ಯಾದ ಭೂಪ್ರಕೃತಿ ವಿಶೇಷತೆಗಳಾಗಿವೆ. ಧಾರಾಳ ನದಿಗಳು ಏಷ್ಯಾದ ಮೂಲಕ ಹರಿಯುತ್ತವೆ. ಯಾಂಗ್ಸಿ ಏಷ್ಯಾದ ಅತಿ ಉದ್ದದ ನದಿಯಾಗಿದೆ.


ಚಿತ್ರ 7.2

**ಮರುಭೂಮಿಗಳು**

ಮರುಭೂಮಿಗಳು ಬಹಳ ಕಡಿಮೆ ಮಳೆ ಲಭಿಸುವ ಮತ್ತು ವಿಶಾಲವಾದ ಒಣ ಭೂಪ್ರದೇಶವಾಗಿದೆ. ಅತ್ಯಧಿಕ ಉಷ್ಣ ಅನುಭವವಾಗುವವುಗಳನ್ನು ಉಷ್ಣ ಮರುಭೂಮಿ ಎಂದೂ ಅತಿ ಶೈತ್ಯ ಅನುಭವವಾಗುವ ಪ್ರದೇಶಗಳನ್ನು ಶೀತ ಮರುಭೂಮಿ ಎಂದು ಕರೆಯಲಾಗುತ್ತದೆ.


ಶೀತ ಮರುಭೂಮಿ


ಉಷ್ಣ ಮರುಭೂಮಿ

**ಸಮತಲಗಳು**

ಸಮತಲಗಳು ಬಹುತೇಕ ಸಮತಟ್ಟಾದ ದೊಡ್ಡ ಭೂಪ್ರದೇಶವಾಗಿವೆ. ಮೆಕ್ಕಲು ಸಮತಲಗಳು ನದಿ ನೀರಿನೊಂದಿಗೆ ಹರಿದು ಬರುವ ಮೆಕ್ಕಲು ಮಣ್ಣು ಸಂಗ್ರಹಗೊಂಡು ಉಂಟಾದವುಗಳಾಗಿವೆ.



**ಪೀಠಭೂಮಿಗಳು**

ಪೀಠ ಭೂಮಿಗಳು ಸುತ್ತಮುತ್ತಲಿನ ಪ್ರದೇಶಗಳಿಂದ ಎತ್ತರದಲ್ಲಿ ಸ್ಥಿತಿಗೊಂಡಿರುವ, ಸಾಮಾನ್ಯವಾಗಿ ವಿಸ್ತಾರವಾದ ಸಮತಲವಾದ ಭೂಪ್ರದೇಶಗಳಾಗಿವೆ.



ಕೆಳಗೆ ಏಷ್ಯಾದ ಕೆಲವು ಭೂಪ್ರಕೃತಿ ವಿಶೇಷತೆಗಳ ಚಿತ್ರಗಳನ್ನು ನೀಡಲಾಗಿದೆ. ಚಿತ್ರಗಳನ್ನು ನಿರೀಕ್ಷಿಸಿ ಅವುಗಳು ಯಾವ ಭೂಪ್ರಕೃತಿ ವಿಭಾಗದಲ್ಲಿ ಒಳಪಡುವುದೆಂದು ಕಂಡುಹಿಡಿದು ಬರೆಯಿರಿ.


ಹಿಮಾಲಯ - .................


ಮಂಚೂರಿಯನ್ ............


ಥಾರ್ - .................


ಲಡಾಖ್ ಶೀತಮರುಭೂಮಿ


ಯಾಂಗ್‌ಸಿ ಕಣಿವೆ


ದಕ್ಷನ್ ಪೀಠಭೂಮಿ

## ಹವಾಗುಣ

ಏಷ್ಯಾದ ಹವಾಗುಣವು ಭೂಪ್ರಕೃತಿಯ ಹಾಗೆ ವೈವಿಧ್ಯಮಯವಾಗಿದೆ. ಏಷ್ಯಾದ ಉತ್ತರ ಭಾಗದಲ್ಲಿ ಧ್ರುವ ಪ್ರದೇಶದೊಂದಿಗೆ ಸೇರಿರುವುದರಿಂದ ಹೆಚ್ಚು ಚಳಿ ಅನುಭವವಾಗುತ್ತದೆ. ಸಮುದ್ರ ಸಾಮಿಪ್ಯ ಇರುವುದರಿಂದ ಪೂರ್ವ ಭಾಗದಲ್ಲಿ ಮಿತವಾದ ಬಿಸಿ ಮತ್ತು ತಂಪು ಇರುತ್ತದೆ. ಭೂಮಧ್ಯರೇಖಾ ಪ್ರದೇಶವಾಗಿರುವುದರಿಂದ ದಕ್ಷಿಣ ಭಾಗದಲ್ಲಿ ಬಿಸಿ, ಆರ್ದ್ರತೆ ಮತ್ತು ಧಾರಾಳ ಮಳೆಯಿರುವ ಹವಾಗುಣವಿದೆ. ಮರುಭೂಮಿಯಾದ ಪಶ್ಚಿಮ ಭಾಗದಲ್ಲಿ ಸಾಮಾನ್ಯವಾಗಿ ಬಿಸಿ ಅಧಿಕವಾಗಿರುತ್ತದೆ.




ಚಿತ್ರ 7.3

### ಸಸ್ಯ ಜೀವ ಜಾಲಗಳು

ಹವಾಗುಣದ ವ್ಯತ್ಯಾಸಗಳಿಗನುಗುಣವಾಗಿ ವೈವಿಧ್ಯಮಯವಾದ ಸಸ್ಯ ಜೀವ ಜಾಲಗಳು ಏಷ್ಯಾದಲ್ಲಿ ಕಾಣಸಿಗುತ್ತವೆ.

**ಏಷ್ಯಾದ ಕೆಲವು ಸಸ್ಯ-ಜೀವಜಾಲಗಳು**




ಚಿತ್ರ 7.4

### ಜನಜೀವನ

ಏಷ್ಯಾವು ವಿಶ್ವದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭೂಖಂಡವಾಗಿದೆ. ವಿಶ್ವದ ಜನಸಂಖ್ಯೆಯ 60 ಶೇಕಡಕ್ಕಿಂತ ಹೆಚ್ಚು ಏಷ್ಯಾದಲ್ಲಿದೆ. ಏಷ್ಯಾದಲ್ಲಿ ಬಹುಭಾಗ ಜನರು ಕೃಷಿ ವಲಯವನ್ನು ಆಶ್ರಯಿಸಿ ಜೀವಿಸುವರು. ಏಷ್ಯಾವು ವಿಶ್ವದಲ್ಲಿ ಅತಿ ಹೆಚ್ಚು ಭತ್ತ ಕೃಷಿ ಮಾಡುವ ಭೂಖಂಡವಾಗಿದೆ. ಈ ಭೂಖಂಡವು ವಿವಿಧ ಸಂಸ್ಕೃತಿ, ಭಾಷೆ ಹಾಗೂ ಧರ್ಮಗಳ ಸಂಗಮ ಭೂಮಿಯಾಗಿದೆ. ಟೋಕಿಯೋ, ಮುಂಬೈಯಂತಹ ಜನನಿಬಿಡವಾದ ನಗರಗಳಿಂದ ಹಿಡಿದು ಜನವಾಸ ಕಡಿಮೆ ಇರುವ ಗ್ರಾಮಗಳವರೆಗೆ ಏಷ್ಯಾದಲ್ಲಿದೆ.

## ಸವನ್ನಾ, ಸಹರಾ, ಕಾಂಗೋ ದಡವನ್ನು ದಾಟಿ...

ಭೂಮಧ್ಯ ರೇಖೆ, ಉತ್ತರಾಯಣ ರೇಖೆ, ದಕ್ಷಿಣಾಯಣ ರೇಖೆ ಎಂಬಿವುಗಳ ಕುರಿತು ನೀವು ಕೇಳಿರುವಿರಲ್ಲವೇ. ಇವುಗಳು ಮೂರೂ ಹಾದುಹೋಗುವ ಭೂಖಂಡ ಯಾವುದೆಂದು ಭೂಗೋಳದ ಸಹಾಯದಿಂದ ಕಂಡುಹಿಡಿಯಿರಿ.

ವಿಶಾಲವಾದ ಸವನ್ನ ಹುಲ್ಲುಗಾವಲುಗಳಿಂದ ಆರಂಭಿಸಿ ದಟ್ಟವಾದ ಮಳೆಗಾಡುಗಳವರೆಗೆ ಒಳಗೊಂಡಿರುವ ವೈವಿಧ್ಯಪೂರ್ಣವಾದ ಭೂಪ್ರಕೃತಿ ಈ ಭೂಖಂಡಲ್ಲಿದೆ.

ಭೂಪಟ 7. 1 ರಿಂದ ಆಫ್ರಿಕಾದ ಸ್ವಾಭಾವಿಕ ಗಡಿಗಳನ್ನು ಕಂಡುಹಿಡಿಯಿರಿ.

ಗಾತ್ರದಲ್ಲಿ ಆಫ್ರಿಕಾ ಎರಡನೇ ಸ್ಥಾನದಲ್ಲಿರುವ ಭೂಖಂಡವಾಗಿದೆ. ಭೂಗೋಳವನ್ನು ನಿರೀಕ್ಷಿಸಿರಿ, ಇದು ಉತ್ತರಾರ್ಧಗೋಳ ಮತ್ತು ದಕ್ಷಿಣಾರ್ಧಗೋಳದಲ್ಲಿ ಹೆಚ್ಚು ಕಡಿಮೆ ಬಹುತೇಕ ಸಮಾನವಾಗಿ ವ್ಯಾಪಿಸಿಕೊಂಡಿರುವ ಭೂಖಂಡವಾಗಿದೆ. ಅತಿ ದೊಡ್ಡ ಉಷ್ಣ ಮರುಭೂಮಿಯಾದ ಸಹರಾ ಹಾಗೂ ಸಮೃದ್ಧವಾದ ಉಷ್ಣ ಮಳೆಕಾಡುಗಳನ್ನು ಒಳಗೊಂಡಿರುವ ಕಾಂಗೋ ನದಿದಡವು ಈ ಭೂಖಂಡದ ವಿಶೇಷತೆಗಳಾಗಿವೆ. ಸಹರಾ ಮತ್ತು ಕಾಂಗೋ ನದಿ ದಡವನ್ನು ಅಟ್ಲಾಸಿನ ಸಹಾಯದಿಂದ ತಿಳಿದುಕೊಳ್ಳಿರಿ.



ಜಗತ್ತಿನಲ್ಲೇ ಅತಿ ಉದ್ದವಾದ ನೈಲ್ ನದಿಯು ಈ ಭೂಖಂಡದ ಮೂಲಕ ಹರಿಯುವುದು. ಕಿಲಿಮಂಜಾರೋ ಇಲ್ಲಿನ ಅತಿ ಎತ್ತರವಾದ ಪರ್ವತವಾಗಿದೆ. ಆಫ್ರಿಕದ ಇತರ ಪರ್ವತಗಳು ಯಾವುವು ಎಂದು ಅಟ್ಲಾಸ್ ನಿಂದ ತಿಳಿದುಕೊಂಡು ಬರೆಯಿರಿ.

ಚಿತ್ರ 7.5

### ಸಹರಾ ಮರುಭೂಮಿ



ಸಹರಾವು ಭೂಮಿಯ ಅತಿ ದೊಡ್ಡ ಉಷ್ಣ ಮರುಭೂಮಿಯಾಗಿದೆ. ವಿಶಾಲವಾದ ಹ್ವೊಗೆ ದಿಣ್ಣೆಗಳು, ಬಂಡೆಗಳಿಂದ ತುಂಬಿದ ಪೀಠ ಭೂಮಿಗಳು ಒಳಗೊಂಡಿರುವ ಸಹರಾ ಅನೇಕ ಸಸ್ಯ ಜೀವ ಜಾಲಗಳ ಆವಾಸ ಕೇಂದ್ರವಾಗಿದೆ. ಪ್ರತಿಕೂಲ ಪರಿಸ್ಥಿತಿಗಳಿಗೆ ಹೊಂದಿಕೊಂಡು ಜೀವಿಸುವ ಬುಡಕಟ್ಟು ವಿಭಾಗದವರು ಸಹಾರದ ವಿಶೇಷತೆಯಾಗಿದೆ.

### ಉಷ್ಣವಲಯದ ಮಳೆ ಕಾಡುಗಳು



ಉಷ್ಣವಲಯದ ಮಳೆಕಾಡುಗಳು ಭೂಮಧ್ಯ ರೇಖಾ ಪ್ರದೇಶಗಳಲ್ಲಿ ಕಂಡುಬರುವ ಸಮೃದ್ಧವೂ ದಟ್ಟವೂ ಆದ ಕಾಡುಗಳಾಗಿವೆ. ಇಲ್ಲಿ ವರ್ಷವಿಡೀ ಹೆಚ್ಚು ಬಿಸಿ ಹಾಗೂ ಭಾರೀ ಮಳೆ ಲಭಿಸುತ್ತದೆ. ಧಾರಾಳ ಮಳೆ ಲಭಿಸುವ ಪ್ರದೇಶಗಳಲ್ಲಿ ಬೆಳೆಯುವ ಕಾಡುಗಳಾದುದರಿಂದ ಇವುಗಳಿಗೆ ಮಳೆಕಾಡುಗಳು ಎಂಬ ಹೆಸರು ಲಭಿಸಿದೆ. ಭೂಮಿಯ ಬೇರೆ ಯಾವುದೇ ಆವಾಸ ವ್ಯವಸ್ಥೆಗಿಂತ ಹೆಚ್ಚಿನ ಸಸ್ಯ ಜಾಲಗಳು ಈ ಮಳೆಗಾಡುಗಳಲ್ಲಿ ಕಂಡುಬರುತ್ತವೆ. ದಕ್ಷಿಣ ಅಮೇರಿಕದ ಅಮೆಜಾನ್, ಆಫ್ರಿಕದ ಕಾಂಗೋ, ಆಗ್ನೇಯ ಏಷ್ಯಾದ ಮಲೇಷ್ಯಾ, ಇಂಡೋನೇಷ್ಯಾ ಎಂಬಿಡೆಗಳಲ್ಲಿ ಉಷ್ಣವಲಯದ ಮಳೆಕಾಡುಗಳಿವೆ.

ಆಫ್ರಿಕ ಭೂಖಂಡದ ಭೂ ಪ್ರಕೃತಿ ವಿಶೇಷತೆಗಳಿಗೆ ಸಂಬಂಧಿಸಿದ ವರ್ಕ್ ಶೀಟ್ ಪೂರ್ತಿಗೊಳಿಸಿರಿ.

| | |
|---|---|
| ಅತಿ ದೊಡ್ಡ ಉಷ್ಣ ಮರುಭೂಮಿ | ................................ |
| ಅತಿ ಎತ್ತರವಾದ ಪರ್ವತ | ................................ |
| ಉಷ್ಣ ಮಳೆ ಕಾಡುಗಳು ಒಳಗೊಂಡಿರುವ ನದಿ ದಡ | ................................ |
| ವಿಶಾಲವಾದ ಹುಲ್ಲುಗಾವಲುಗಳು | ................................ |

## ಹವಾಗುಣ

ಭೂಮಧ್ಯ ರೇಖೆಯ ಎರಡು ಬದಿಗಳಿಗೂ ಸರಿಸುಮಾರು ಸಮಾನವಾಗಿ ವ್ಯಾಪಿಸಿಕೊಂಡಿರುವ ಆಫ್ರಿಕದಲ್ಲಿ ಸಾಮಾನ್ಯವಾಗಿ ಬಿಸಿಯಿಂದ ಕೂಡಿದ ಹವಾಗುಣವು ಅನುಭವವಾಗುವುದು. ಆದರೂ ಪ್ರಾದೇಶಿಕ ವ್ಯತ್ಯಾಸಗಳು ಕಂಡುಬರುತ್ತವೆ. ತೀರ ಪ್ರದೇಶಗಳಲ್ಲಿ ಮತ್ತು ಸಮಶೀತೋಷ್ಣ ವಲಯ ಒಳಗೊಳ್ಳುವ ಭಾಗಗಳಲ್ಲಿ ಮಿತವಾದ ಹವಾಗುಣ ಅನುಭವವಾಗುವುದು.

## ಸಸ್ಯ ಜೀವ ಜಾಲಗಳು

ಆಫ್ರಿಕಾದ ಸವನ್ನಾ ಹುಲ್ಲುಗಾವಲುಗಳು ಮತ್ತು ಉಷ್ಣವಲಯದ ಮಳೆ ಕಾಡುಗಳು ಜೀವ ವೈವಿಧ್ಯದಲ್ಲಿ ಸಮೃದ್ಧವಾಗಿವೆ. ಸೆರೆಂಗೆಟಿಯಲ್ಲಿನ ಜೀವಜಾಲಗಳ ಕಾಲೋಚಿತ ವಲಸೆಯು ಆಫ್ರಿಕದ ಒಂದು ಪ್ರಧಾನ ವಿಶೇಷತೆಯಾಗಿದೆ.

**ಆಫ್ರಿಕದ ಕೆಲವು ಸಸ್ಯ ಜೀವ ಜಾಲಗಳು**


ಬೆಯೋ ಬಾಬ್ ಮರ


ಕಪ್ಪು ಘೇಂಡಾಮೃಗ


ಆಫ್ರಿಕನ್ ಕಾಡು ನಾಯಿ

ಚಿತ್ರ 7.6

**ಸೆರೆಂಗೆಟಿನ ಕಾಲೋಚಿತ ವಲಸೆ** (Seasonal migration of Serengeti)



ಆಫ್ರಿಕಾದ ಕಾಲೋಚಿತ ವಲಸೆಯು ಹವಾಗುಣ ವ್ಯತ್ಯಾಸಗಳಿಗೆ ಮತ್ತು ಆಹಾರ ಲಭ್ಯತೆಗೆ ಅನುಗುಣವಾಗಿ ಮೃಗಗಳು ಹಾಗು ಪಕ್ಷಿಗಳು ದೀರ್ಘ ದೂರ ಸಂಚರಿಸುವ ವಿದ್ಯಮಾನಕ್ಕೆ ಉದಾಹರಣೆಯಾಗಿದೆ. ಈ ವಲಸೆಗಳು ಸೆರೆಂಗೆಟಿಯಲ್ಲಿ ದಶಲಕ್ಷದಷ್ಟು ಜೀಬ್ರಾಗಳು, ಗಸಲ್ಲುಗಳು ಹೊಸ ಮೇವು ಪ್ರದೇಶಗಳನ್ನು ಹುಡುಕುತ್ತಾ ಟಾನ್ಸಾನಿಯ ಮತ್ತು ಕಿನ್ಯದ ನಡುವೆ ಚಲಿಸುವ ಒಂದು ವಿಶೇಷ ವಿದ್ಯಮಾನವಾಗಿದೆ. ಆಫ್ರಿಕದಾದ್ಯಂತ ಇರುವ ಆವಾಸ ವ್ಯವಸ್ಥೆಗಳ ಸಮತೋಲನವು ಜೀವ ಜಾಲಗಳ ಉಳಿವಿಗೆ ನಿರ್ಣಾಯಕವಾಗಿದೆ ಎಂದು ಈ ವಲಸೆಯು ಸೂಚಿಸುತ್ತದೆ.

## ಜನಜೀವನ

ಆಫ್ರಿಕದ ಬಹುಭಾಗ ಜನರು ಗ್ರಾಮಗಳಲ್ಲಿ ವಾಸಿಸುವವರು ಹಾಗು ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುವವರಾಗಿದ್ದಾರೆ. ಆಫ್ರಿಕವು ಸಂಸ್ಕೃತಿ, ಭಾಷೆ, ಇತಿಹಾಸ ಎಂಬಿವುಗಳಿಂದ ಸಮೃದ್ಧವಾದ ಒಂದು ನಾಡಾಗಿದೆ. ಪ್ರಾಚೀನ ನಾಗರಿಕತೆಗಳಲ್ಲಿ ಒಂದಾದ ಈಜಿಪ್ಟ್ ನಾಗರಿಕತೆಯು ಆಫ್ರಿಕದಲ್ಲಿ ಹುಟ್ಟಿಕೊಂಡಿತು. ಈಜಿಪ್ಟಿನ ಪಿರಮಿಡುಗಳು ಪ್ರಾಚೀನ ನಿರ್ಮಾಣ ಕೌಶಲ್ಯಗಳಿಗೆ ಸಾಕ್ಷಿಯಾಗಿದೆ.

## ರೋಕ್ಕಿಯಿಂದ ಅಪಲೇಚ್ಚಿಯನ್‌ವರೆಗೆ

ಭೂಗೋಳವನ್ನು ನಿರೀಕ್ಷಿಸಿ ಪೆಸಿಫಿಕ್, ಅಂಟ್ಲಾಟಿಕ್ ಮತ್ತು ಆರ್ಟಿಕ್ ಸಾಗರಗಳು ಸುತ್ತುವರಿದ ಭೂಖಂಡ ಯಾವುದು ಎಂದು ಕಂಡುಹಿಡಿಯಿರಿ.



ಚಿತ್ರ 7.7

ಉತ್ತರ ಅಮೆರಿಕವು ವಿಶ್ವದ ಕೆಲವು ಅಭಿವೃದ್ಧಿ ಹೊಂದಿದ ದೇಶಗಳನ್ನು ಹಾಗೂ ದೊಡ್ಡ ನಗರಗಳನ್ನು ಒಳಗೊಂಡಿರುವ ಭೂಖಂಡವಾಗಿದೆ. ಉತ್ತರ ಅಮೆರಿಕದ ದೇಶಗಳ ಅಭಿವೃದ್ಧಿ ಸಾಧನೆಯ ಹಿಂದೆ ಅಲ್ಲಿಯ ಭೌಗೋಳಿಕ ವಿಶೇಷತೆಗಳಿಗೆ ಮಹತ್ತರವಾದ ಪಾತ್ರವಿದೆ.

ಭೂಪಟ 7.1 ರಿಂದ ಉತ್ತರ ಅಮೆರಿಕದ ಸ್ವಾಭಾವಿಕ ಗಡಿಗಳನ್ನು ಕಂಡುಹಿಡಿಯುವಿರಲ್ಲವೇ.

ಉತ್ತರ ಅಮೆರಿಕದಲ್ಲಿ ನೆಲೆಗೊಂಡಿರುವ ಎರಡು ಪರ್ವತ ಶಿಖರಗಳು ರೋಕಿ ಮತ್ತು ಅಪ್ಪಲೆಚ್ಚಿಯನ್ ಆಗಿವೆ. ಅಟ್ಲಾಸ್‌ನ ಸಹಾಯದಿಂದ ಈ ಪರ್ವತಗಳ ಸ್ಥಾನವನ್ನು ಕಂಡುಹಿಡಿಯಿರಿ. ಈ ಭೂಖಂಡದ ಮಹಾ ಸಮತಲಗಳು ಫಲವತ್ತಾದ ಸಮತಲಗಳಾಗಿವೆ. ಉತ್ತರ ಅಮೇರಿಕಾದಲ್ಲಿ ಬಹುಭಾಗ ವ್ಯಾಪಿಸಿರುವ ಹುಲ್ಲುಗಾವಲನ್ನು 'ಪ್ರಯರಿಗಳು' ಎಂದು ಕರೆಯುತ್ತಾರೆ. ಮಿಸೋರಿ ಮತ್ತು ಮಿಸಿಸಿಪಿ ಸೇರಿದಂತೆ ಧಾರಾಳ ನದಿಗಳು ಉತ್ತರ ಅಮೆರಿಕದಲ್ಲಿವೆ. ಪಂಚಮಹಾ ಸರೋವರಗಳು ಎಂದು ಕರೆಯಲ್ಪಡುವ ಐದು ದೊಡ್ಡ ಸಿಹಿ ನೀರಿನ ಸರೋವರಗಳು ಇಲ್ಲಿವೆ. ಉತ್ತರ ಅಮೆರಿಕದ ಅರಿಜೋನದಲ್ಲಿ ನೆಲೆಗೊಂಡಿರುವ ಬೃಹತ್ ಕಣಿವೆಗಳಾದ ಗ್ರಾಂಡ್ ಕಾನ್ಯೋನ್ ಒಂದು ಪ್ರಕೃತಿದತ್ತವಾದ ಅದ್ಭುತವಾಗಿದೆ.

### ಗ್ರಾಂಡ್ ಕಾನ್ಯೋನ್

ಗ್ರಾಂಡ್ ಕಾನ್ಯೋನ್ ಸುಮಾರು 446 ಕಿ.ಮೀ. ಉದ್ದ 29 ಕಿಮೀ ಅಗಲ ಮತ್ತು 1500 ಮೀಟರ್‌ಗಿಂತಲೂ ಹೆಚ್ಚು ಆಳವಿರುವ ಬೃಹತ್ ಕಣಿವೆಯಾಗಿದೆ. ಈ ಬೃಹತ್ ಕಣಿವೆಯು ಕೊಲರಾಡೋ ನದಿಯ ಚಟುವಟಿಕೆಗಳ ಪರಿಣಾಮವಾಗಿ ದಶಲಕ್ಷ ವರ್ಷಗಳಿಂದ ರೂಪುಗೊಂಡಿದೆ. ಇದು UNESCO ವಿಶ್ವ ಪರಂಪರೆ ತಾಣವಾಗಿದೆ.



### ಹವಾಗುಣ

ಧ್ರುವ ಪ್ರದೇಶಕ್ಕೆ ಹತ್ತಿರವಾಗಿರುವುದರಿಂದ ಭೂಖಂಡದ ಉತ್ತರ ಭಾಗದಲ್ಲಿ ಅತಿ ಶೈತ್ಯವು ಅನುಭವವಾಗುತ್ತದೆ. ಉತ್ತರದಿಂದ ದಕ್ಷಿಣಕ್ಕೆ ಹೋದ ಹಾಗೆ ತುಲನಾತ್ಮಕವಾಗಿ ಬಿಸಿ ಹೆಚ್ಚಾಗುತ್ತದೆ.

### ಸಸ್ಯ - ಜೀವ ಜಾಲಗಳು

ಉತ್ತರ ಅಮೇರಿಕವು ವೈವಿಧ್ಯಮಯವಾದ ಸಸ್ಯ ಜಾಲಗಳ ಆವಾಸ ಕೇಂದ್ರವಾಗಿದೆ. ಪಶ್ಚಿಮ ಭಾಗದಲ್ಲಿರುವ ಸೆಕ್ವಯ ವನಗಳು ಹಾಗು ಮಹಾಸಮತಲಗಳ ಹುಲ್ಲುಗಾವಲುಗಳು ಇವುಗಳಿಗೆ ಉದಾಹರಣೆಗಳಾಗಿವೆ.

**ಉತ್ತರ ಅಮೇರಿಕಾದ ಕೆಲವು ಸಸ್ಯ-ಜೀವಜಾಲಗಳು**


ಕ್ಯಾಲಿಫೋರ್ನಿಯ ಪೋಪಿ


ಸಗ್ವಾರೋ ಕಳ್ಳಿಗಿಡ


ಮೂಸ್

ಚಿತ್ರ 7.8

## ಜನಜೀವನ

ಅಮೆರಿಕನ್ ಸಂಯುಕ್ತ ಸಂಸ್ಥಾನಗಳು (ಯು.ಎಸ್.ಎ) ಮತ್ತು ಕೆನಡಾ, ಉನ್ನತಮಟ್ಟದ ಜೀವನ ಹಾಗೂ ತಂತ್ರಜ್ಞಾನದ ಅಭಿವೃದ್ಧಿಗೆ ಹೆಸರುವಾಸಿಯಾಗಿದೆ. ನ್ಯೂಯಾರ್ಕ್, ಲಾಸ್ ಎಂಜಲೀಸ್, ಮೆಕ್ಸಿಕೋ ನಗರ ಮೊದಲಾದ ಜಗತ್ತಿನ ದೊಡ್ಡ ನಗರಗಳು ಉತ್ತರ ಅಮೆರಿಕದಲ್ಲಿವೆ. ಅನುಕೂಲಕರ ಹವಾಗುಣ ಹಾಗೂ ಫಲವತ್ತಾದ ಮಣ್ಣು ಇಲ್ಲಿನ ಕೃಷಿ ವಲಯವನ್ನು ಸಮೃದ್ಧಗೊಳಿಸುತ್ತದೆ. ಹಿಮದಿಂದ ಆವೃತವಾಗಿರುವ ಪ್ರದೇಶಗಳಲ್ಲಿ ವಾಸಿಸುವ ಇನ್ಯೂಯಿಟುಗಳು (ಎಸ್ಕಿಮೋಗಳು) ಇಲ್ಲಿನ ಇನ್ನೊಂದು ವಿಶೇಷತೆಯಾಗಿದೆ.

ಉತ್ತರ ಅಮೆರಿಕಕ್ಕೆ ತಲುಪುವ ಪ್ರವಾಸಿಗರಿಗೆ ಅಗತ್ಯವಾದ ಮಾಹಿತಿಗಳನ್ನು ನೀಡುವ ಪ್ರವಾಸಿ ಗೈಡ್ ಆಗಿ ಕಲ್ಪಿಸಿ ಈ ಭೂಖಂಡದ ವಿಶೇಷತೆಗಳನ್ನು ಸೇರಿಸಿ ವಿವರಣೆಯನ್ನು ತಯಾರಿಸಿರಿ.

## ಅಮೆಜಾನ್ ದಡದಿಂದ...

ಅಮೆಜಾನ್ ಮಳೆಕಾಡಿನ ಬಗ್ಗೆ ನೀವು ಕೇಳಿಲ್ಲವೇ. ಇವುಗಳನ್ನು 'ಭೂಮಿಯ ಶ್ವಾಸಕೋಶ' ಎಂದು ವಿಶೇಷಿಸಲಾಗಿದೆ. ಜಗತ್ತಿನಲ್ಲಿ ಬೇರೆಲ್ಲಿಯೂ ಇಲ್ಲದ ಅನೇಕ ಸಸ್ಯ ಜೀವ ಜಾಲಗಳ ಆವಾಸ ಕೇಂದ್ರವಾದ ಅಮೆಜಾನ್ ಮಳೆಕಾಡುಗಳು ದಕ್ಷಿಣ ಅಮೆರಿಕದಲ್ಲಿವೆ.

ಅಟ್ಲಾಸ್‌ನ ಸಹಾಯದಿಂದ ದಕ್ಷಿಣ ಅಮೆರಿಕದ ಸ್ವಾಭಾವಿಕ ಗಡಿಗಳನ್ನು ಗುರುತಿಸಿರಿ.

ಜಗತ್ತಿನ ಅತಿ ಉದ್ದವಾದ ಪರ್ವತಶ್ರೇಣಿಯಾದ ಆಂಡಿಸ್ ಮತ್ತು ಜಗತ್ತಿನ ಅತಿ ದೊಡ್ಡ ನದಿಯಾದ ಅಮೆಜಾನ್ ಇಲ್ಲಿದೆ. ಅತಿ ವಿಶಾಲವಾದ ಭೂಪ್ರದೇಶವಾದ ಅಮೆಜಾನ್ ನದಿ ದಡದ ಹೆಚ್ಚಿನ ಭಾಗವು ಮಳೆಕಾಡುಗಳಾಗಿವೆ. ಜಗತ್ತಿನ ಅತಿ ಒಣ ಮರುಭೂಮಿಯಾದ ಅಟ್ಟಕಾಮ ದಕ್ಷಿಣ ಅಮೆರಿಕದ ಇನ್ನೊಂದು ಭೂಪ್ರಕೃತಿ ವಿಶೇಷತೆಯಾಗಿದೆ.


ಚಿತ್ರ 7.9


ಚಿತ್ರ 7.10 ಅಮೆಜಾನ್ ಮಳೆಕಾಡುಗಳು ಮತ್ತು ಅಮೆಜಾನ್ ನದಿ

## ಹವಾಗುಣ

ಭೂಮಧ್ಯ ರೇಖಾ ಪ್ರದೇಶವಾಗಿರುವುದರಿಂದ ದಕ್ಷಿಣ ಅಮೇರಿಕದ ಉತ್ತರ ಭಾಗಗಳಲ್ಲಿ ಹೆಚ್ಚಿನ ಬಿಸಿ ಮತ್ತು ಸಮೃದ್ಧವಾದ ಮಳೆ ಲಭಿಸುತ್ತದೆ. ದಕ್ಷಿಣ ಅಮೇರಿಕದಲ್ಲಿ ಅತಿ ದಕ್ಷಿಣ ಭಾಗಗಳಲ್ಲಿ ಶೀತ ಹವಾಗುಣವು ಅನುಭವವಾಗುವುದು.

## ಸಸ್ಯ-ಜೀವ ಜಾಲಗಳು

ಅಮೆಜಾನ್ ಮಳೆ ಕಾಡುಗಳು ಒಳಗೊಂಡಿರುವ ದಕ್ಷಿಣ ಅಮೆರಿಕವು ಜೈವ ವೈವಿಧ್ಯದಲ್ಲಿ ಸಮೃದ್ಧವಾಗಿದೆ. ಅಮೆಜಾನ್ ವಾಟರ್ ಲಿಲ್ಲಿ, ಅನಕೊಂಡ ಮೊದಲಾದವುಗಳಿಗೆ ಈ ಪ್ರದೇಶವು ಪ್ರಸಿದ್ಧವಾಗಿದೆ. ದಕ್ಷಿಣ ಅಮೇರಿಕದ ಆಂಡಿಸ್ ಪರ್ವತ ಶ್ರೇಣಿಗಳು ಆಂಡಿಯನ್ ಲುಪಿನ್ ಎಂಬ ಹೂ ಗಿಡ ಹಾಗೂ ಲಾಮ ಮೊದಲಾದ ಸಸ್ತನಿಗಳ ಪ್ರಧಾನ ಆವಾಸ ಕೇಂದ್ರವಾಗಿದೆ. ದಕ್ಷಿಣ ಅಮೆರಿಕದಲ್ಲಿರುವ ಪಂತನಾಲ್ ವಿಶ್ವದ ಅತಿದೊಡ್ಡ ಉಷ್ಣವಲಯದ ಹಿನ್ನೀರು ತಟಾಕ ಪ್ರದೇಶಗಳಲ್ಲೊಂದಾಗಿದೆ. ಸಸ್ತನಿ ವಿಭಾಗಕ್ಕೆ ಸೇರಿದ ಕ್ಯಾಪಿಬಾರ ಈ ವಲಯದಲ್ಲಿ ಕಂಡುಬರುತ್ತದೆ.

**ದಕ್ಷಿಣ ಅಮೆರಿಕದ ಕೆಲವು ಸಸ್ಯ ಜೀವ ಜಾಲಗಳು**


ಆಂಡಿಯನ್ ಲುಪಿನ್


ಅಮೆಜಾನ್ ವಾಟರ್ ಲಿಲ್ಲಿ


ಲಾಮ


ಕ್ಯಾಪಿಬಾರ

ದಕ್ಷಿಣ ಅಮೆರಿಕದ ವಿವಿಧ ಸಸ್ಯ ಜಾಲಗಳ ಚಿತ್ರಗಳು ಮತ್ತು ಮಾಹಿತಿಗಳನ್ನು ಮಾಹಿತಿ ತಂತ್ರಜ್ಞಾನದ ಸಹಾಯದಿಂದ ಸಂಗ್ರಹಿಸಿ ಬಿತ್ತಿ ಪತ್ರಿಕೆ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

## ಜನಜೀವನ

ದಕ್ಷಿಣ ಅಮೆರಿಕದ ಹೆಚ್ಚಿನ ಜನರು ಕೃಷಿ, ಮೀನುಗಾರಿಕೆ, ಉದ್ಯಮ ಎಂಬಿವುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸ್ಥಳೀಯರು, ಯುರೋಪಿಯನ್ನರು, ಆಫ್ರಿಕನ್ನರು ಹಾಗು ಏಷ್ಯನ್ನರ ಉಪಸ್ಥಿತಿಯೊಂದಿಗೆ ಈ ಭೂಖಂಡವು ಸಾಂಸ್ಕೃತಿಕ ವೈವಿಧ್ಯಕ್ಕೆ ಸಾಕ್ಷಿಯಾಗಿದೆ.

## ಶ್ವೇತ ಭೂಖಂಡವನ್ನು ಅನ್ವೇಷಿಸುತ್ತಾ...

ಚಿತ್ರಗಳನ್ನು ಗಮನಿಸಿರಿ.




ಮೈತ್ರಿ



ಭಾರತಿ

ಚಿತ್ರ 7.11

ಮೈತ್ರಿ ಮತ್ತು ಭಾರತಿ ವಿವಿಧ ಅಧ್ಯಯನಗಳಿಗಾಗಿ ಭಾರತವು ಸ್ಥಾಪಿಸಿದ ಎರಡು ಸಂಶೋಧನ ಕೇಂದ್ರಗಳಾಗಿವೆ. ಇವುಗಳನ್ನು ಯಾವ ಭೂಖಂಡದಲ್ಲಿ ಸ್ಥಾಪಿಸಲಾಗಿದೆ?

- 

ಈ ಭೂಖಂಡದ 98 ಶೇಕಡವು ಅಂಟಾರ್ಟಿಕಾ ಹಿಮಪದರಾಗಿದೆ. ಜಗತ್ತಿನ ಶುದ್ಧ ಜಲದ ಹೆಚ್ಚಿನ ಭಾಗವು ಈ ಹಿಮಪದರಿನಲ್ಲಿ ಒಳಗೊಂಡಿದೆ.

ಕೊಟ್ಟಿರುವ ಚಿತ್ರ ಮತ್ತು ಭೂಗೋಳವನ್ನು ನಿರೀಕ್ಷಿಸಿ ಅಂಟಾರ್ಟಿಕಾದ ಸ್ಥಾನವನ್ನು ಗುರುತಿಸಿರಿ. ಅಂಟಾರ್ಟಿಕವು ಸಂಪೂರ್ಣವಾಗಿ ದಕ್ಷಿಣ ಸಮುದ್ರದಿಂದ ಸುತ್ತುವರಿದಿರುವ ಭೂಖಂಡವಾಗಿದೆ.



ಚಿತ್ರ 7.12

ಅಂಟಾರ್ಟಿಕಾದ ಭೂಪ್ರಕೃತಿ ವಿಶೇಷತೆಗಳು ಯಾವುವೆಂದು ನೋಡೋಣ.

ಟ್ರಾನ್ಸ್ ಅಂಟಾರ್ಟಿಕ ಪರ್ವತ ಶ್ರೇಣಿಗಳು ಈ ಭೂಖಂಡವನ್ನು ಪೂರ್ವ ಅಂಟಾರ್ಟಿಕಾ ಮತ್ತು ಪಶ್ಚಿಮ ಅಂಟಾರ್ಟಿಕಾ ಎಂದು ವಿಭಜಿಸುತ್ತವೆ. ಅಂಟಾರ್ಟಿಕಾ ಪರ್ಯಾಯ ದ್ವೀಪವು ದಕ್ಷಿಣ ಅಮೇರಿಕದ ಪಕ್ಕದಲ್ಲಿರುವ ಅಂಟಾರ್ಟಿಕದ ಒಂದು ಭೂ ಪ್ರಕೃತಿ ವಿಭಾಗವಾಗಿದೆ. ವಿನ್ಸನ್ ಮಾಸಿಫ್ ಅಂಟಾರ್ಟಿಕದ ಅತಿ ಎತ್ತರವಾದ ಶಿಖರವಾಗಿದೆ. ಈ ಭೂಖಂಡದಲ್ಲಿ ಅನೇಕ ಅಗ್ನಿ ಪರ್ವತಗಳು ಕೂಡ ಕಂಡುಬರುತ್ತವೆ.

### ಹವಾಗುಣ

ಅಂಟಾರ್ಟಿಕವು ವರ್ಷಪೂರ್ತಿ ಹಿಮದಿಂದ ಆವೃತವಾಗಿರುವ ಶೀತ ಮರುಭೂಮಿಯಾಗಿದೆ. ಅಂಟಾರ್ಟಿಕದ ಸ್ಥಾನವು ಅದರ ಹವಾಗುಣವನ್ನು ವಿಶೇಷಗೊಳಿಸುತ್ತದೆ.

### ಸಸ್ಯ-ಜೀವ ಜಾಲಗಳು

ಹಿಮಪದರುಗಳ ಬಿರುಕುಗಳಲ್ಲಿ ಕಂಡುಬರುವ ಕೆಲವು ಹಾವಸೆ ವರ್ಗ ಸಸ್ಯಗಳನ್ನು ಹೊರತುಪಡಿಸಿ ಅಂಟಾರ್ಟಿಕದ ಹೆಚ್ಚಿನ ಭಾಗವು ಬಂಜರು ಪ್ರದೇಶವಾಗಿದೆ. ಈ ಭೂಖಂಡದ ಹೆಚ್ಚಿನ ತೀರ ಪ್ರದೇಶಗಳೂ ಪೆಂಗ್ವಿನ್‌ಗಳು ಮತ್ತು ಸೀಲ್‌ಗಳ ಆವಾಸ ಕೇಂದ್ರಗಳಾಗಿವೆ.

## ಅಂಟಾರ್ಟಿಕಾದ ಕೆಲವು ಸಸ್ಯ ಜೀವ ಜಾಲಗಳು


ಹಾವಸೆಗಳು


ಪೆಂಗ್ವಿನ್


ಸೀಲ್‌ಗಳು

ಚಿತ್ರ 7.13

### ಜನಜೀವನ

ಅಂಟಾರ್ಟಿಕವು ಸ್ವಲ್ಪವೂ ಜನವಸತಿ ಇಲ್ಲದ ಭೂಖಂಡವಾಗಿದೆ. ಪರಿಸರ ವಿಶೇಷತೆಗಳ ಕುರಿತು ಸಂಶೋಧನೆ ನಡೆಸುವವರು ಹಾಗೂ ಸಾಹಸಿಕ ಯಾತ್ರಿಕರು ಮಾತ್ರ ಇಲ್ಲಿಗೆ ತಲುಪುತ್ತಾರೆ.

### ಪೌರಾಣಿಕ ಸಾಹಸಿಕ ನಾವಿಕರ ನಾಡಿಗೆ...

ಸಾಹಸಿಕರಾದ ನಾವಿಕರ ಚಾರಿತ್ರಿಕ ಯಾತ್ರೆಗಳು ಜಗತ್ತಿನ ವಿವಿಧ ಭಾಗಗಳನ್ನು ಪರಸ್ಪರ ಜೋಡಿಸಿವೆ. ವಾಸ್ಕೋ-ಡ-ಗಾಮನು ಭಾರತಕ್ಕೆ ನಡೆಸಿದ ಯಾತ್ರೆಯನ್ನು ನೀವು ಹಿಂದಿನ ತರಗತಿಯಲ್ಲಿ ಪರಿಚಯಿಸಿಕೊಂಡಿರಲ್ಲವೇ. ಸಮುದ್ರ ಮಾರ್ಗವಾಗಿ ಅವರು ಭಾರತಕ್ಕೆ ನಡೆಸಿದ ಯಾತ್ರೆಗಳು ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿವೆ.


ಚಿತ್ರ 7.14

ಅವರು ಯಾವ ಭೂಖಂಡದಿಂದ ಭಾರತಕ್ಕೆ ಪ್ರಯಾಣವನ್ನು ಆರಂಭಿಸಿದರು?

- 

ಭಾರತದ ಚರಿತ್ರೆಯ ಮೇಲೆ ಪ್ರಭಾವ ಬೀರಿದ ವಾಸ್ಕೋ-ಡ-ಗಾಮನ ನಾಡಿಗೆ ನಾವೊಂದು ಪ್ರವಾಸ ಹೋಗೋಣವೆ?

ಭೂಪಟ 7.2 ರಿಂದ ಯುರೋಪಿನ ಪ್ರಾಕೃತಿಕ ಗಡಿಗಳನ್ನು ಕಂಡುಹಿಡಿಯಿರಿ.

ಯುರೋಪಿನ ಕೆಲವು ಭೂ ಪ್ರಕೃತಿ ವಿಶೇಷತೆಗಳನ್ನು ಗಮನಿಸಿರಿ.

ಆಲ್ಪ್ಸ್, ಬ್ಲಾಕ್ ಫಾರೆಸ್ಟ್, ಕಾರ್ಪತ್ತಿಯನ್ ಮುಂತಾದ ಅನೇಕ ಪರ್ವತ ಶ್ರೇಣಿಗಳು ಯುರೋಪಿನಲ್ಲಿವೆ. ಡ್ಯಾನ್ಯೂಬ್, ವೋಲ್ಗಾ, ರೈನ್ ಮೊದಲಾದವುಗಳು ಈ ಭೂಖಂಡದ ಮೂಲಕ ಹರಿಯುವ ಜಗತ್ತಿನ ಅತಿ ಉದ್ದವಾದ ಕೆಲವು ನದಿಗಳಾಗಿವೆ. ಯುರೋಪ್‌ನಲ್ಲಿ ಫಲವತ್ತಾದ ಸಮತಲಗಳು ಮತ್ತು ಹುಲ್ಲುಗಾವಲುಗಳು ಇವೆ. ಯುರೋಪಿನ ಅತಿ ವಿಶಾಲವಾದ ಹುಲ್ಲುಗಾವಲನ್ನು 'ಸ್ಟೆಪ್ಪಿ' ಎಂದು ಕರೆಯುತ್ತಾರೆ. ಯುರೋಪಿನ ಉತ್ತರ ಕರಾವಳಿಯ ಕೆಲವು ಭಾಗಗಳು ಫಿಜೋರ್ಡುಗಳು ಅಥವಾ ಫಿಯೋರ್ಡುಗಳು ಎಂದು ಕರೆಯಲ್ಪಡುವ ವಿಶೇಷ ಭೂ ಪ್ರಕೃತಿಯಿಂದ ಸಂಪನ್ನವಾಗಿದೆ.


ನಾರ್ವೆಯ ಫಿಯೋಡ್ ತೀರ

#### ಫಿಜೋರ್ಡುಗಳು ಅಥವಾ ಫಿಯೋಡುಗಳು (Fjords or Fiords)

ಫಿಯೋಡುಗಳು ಸಾಮಾನ್ಯವಾಗಿ ಹಿಮಗಳ ಚಟುವಟಿಕೆಯಿಂದ ರೂಪುಗೊಳ್ಳುವ, ಪರ್ವತಗಳಿಂದ ಸುತ್ತುವರಿಯಲ್ಪಟ್ಟ ಕಡಿದಾದ ಇಳಿಜಾರುಗಳ ನಡುವೆ ಇರುವ ಆಳ ಕಿರಿದಾದ ಕಡಲು ತೀರಗಳಾಗಿವೆ.

### ಹವಾಗುಣ

ಯುರೋಪಿನಲ್ಲಿ ಸಾಮಾನ್ಯವಾಗಿ ಮಿತವಾದ ಬಿಸಿ ಮತ್ತು ಚಳಿ ಇರುವ ಹವಾಗುಣವು ಅನುಭವವಾಗುವುದು. ಚಳಿಗಾಲದಲ್ಲಿ ಈ ಭೂಖಂಡದ ಉತ್ತರ ಭಾಗಗಳಲ್ಲಿ ಹಿಮಪಾತವು ಸಾಮಾನ್ಯವಾಗಿದೆ.

### ಸಸ್ಯ-ಜೀವ ಜಾಲಗಳು

ಯುರೋಪಿನ ಆಲ್ಫೈನ್ ಪ್ರದೇಶವು ಹುಲ್ಲುಗಾವಲುಗಳಿಗೂ ಮೆಡಿಟೇರಿಯನ್ ವಲಯವು ದ್ರಾಕ್ಷಿ ತೋಟಗಳಿಗೂ ಪ್ರಸಿದ್ಧವಾಗಿದೆ.

**ಯುರೋಪಿನ ಕೆಲವು ಸಸ್ಯಜೀವ ಜಾಲಗಳು**



ಕೋರ್ಕ್ ಓಕ್ ಮರಗಳು



ಅಲ್ಫೈನ್ ಸ್ಟೆಪ್ಪಿ ಹುಲ್ಲುಗಾವಲು



ಲಿನ್‌ಕ್ಸ್

ಚಿತ್ರ 7.15

### ಜನಜೀವನ

ಯುರೋಪಿಯನ್ನರು ಸಾಮಾನ್ಯವಾಗಿ ಉನ್ನತ ಜೀವನಮಟ್ಟವನ್ನು ಹೊಂದಿದವರಾಗಿದ್ದಾರೆ. ಯುರೋಪ್ ಶ್ರೀಮಂತ ಕಲಾ ಸಾಂಸ್ಕೃತಿಕ ಪರಂಪರೆಯುಳ್ಳ ಭೂಖಂಡವಾಗಿದೆ. ವಿಶ್ವದ ಅತ್ಯಂತ ಹಳೆಯ ನಗರಗಳಾದ ಏಥೆನ್ಸ್, ರೋಮ್ ಎಂಬಿವುಗಳು ಯುರೋಪಿನಲ್ಲಿವೆ. ಪ್ಯಾರಿಸ್, ಲಂಡನ್, ಬರ್ಲಿನ್ ಮುಂತಾದ ನಗರಗಳು ಕಲೆ, ಫ್ಯಾಶನ್, ತಂತ್ರಜ್ಞಾನ ಎಂಬಿವುಗಳ ಕೇಂದ್ರಗಳಾಗಿವೆ.

ಯುರೋಪಿನ ಭೌಗೋಳಿಕ ವೈಶಿಷ್ಟ್ಯಗಳನ್ನು ಸೇರಿಸಿ ಟಿಪ್ಪಣಿ ತಯಾರಿಸಿರಿ.

## ಕಂಗಾರುಗಳ ನಾಡಿಗೆ...

ಕಂಗಾರು ಧಾರಾಳ ವೈಶಿಷ್ಟ್ಯಗಳಿರುವ ಪ್ರಾಣಿಯಲ್ಲವೇ. ಇವುಗಳು ಕಂಡುಬರುವ ಭೂಖಂಡ ಯಾವುದು?

ಸಂಪೂರ್ಣವಾಗಿ ದಕ್ಷಿಣ ಗೋಳಾರ್ಧದಲ್ಲಿ ನೆಲೆಗೊಂಡಿರುವ ಆಸ್ಟ್ರೇಲಿಯಾ ಭೂಖಂಡದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ನಿಮಗೆ ಕುತೂಹಲವಿಲ್ಲವೇ?



ಚಿತ್ರ 7.16

ಅಟ್ಲಾಸಿನಿಂದ ಆಸ್ಟ್ರೇಲಿಯಾದ ಗಡಿಗಳನ್ನು ಗುರುತಿಸಿ ದಾಖಲಿಸುವಿರಲ್ಲವೇ.

ಸಂಪೂರ್ಣವಾಗಿ ಸಮುದ್ರದಿಂದ ಸುತ್ತುವರಿದಿರುವ ಆಸ್ಟ್ರೇಲಿಯಾ ಅತಿ ಸಣ್ಣ ಭೂಖಂಡವಾಗಿದೆ.

ಗ್ರೇಟ್ ಡಿವೈಡಿಂಗ್ ರೇಂಜ್ ಆಸ್ಟ್ರೇಲಿಯಾದ ಪ್ರಧಾನ ಪರ್ವತ ಶ್ರೇಣಿಯಾಗಿದೆ. ಗ್ರೇಟ್ ವಿಕ್ಟೋರಿಯಾ ಇಲ್ಲಿನ ಪ್ರಧಾನ ಮರುಭೂಮಿಗಳಲ್ಲಿ ಒಂದಾಗಿದೆ. ಅಟ್ಲಾಸ್ ನಿಂದ ಈ ಮರುಭೂಮಿಯ ಸ್ಥಾನ ಕಂಡುಹಿಡಿಯಬಹುದೇ? ಆಸ್ಟ್ರೇಲಿಯಾದ ಪೂರ್ವ ಕರಾವಳಿಯಲ್ಲಿರುವ ಗ್ರೇಟ್ ಬ್ಯಾರಿಯರ್ ರೀಫ್ ಹವಳದ ಬಂಡೆಗಳಿಂದ ನಿರ್ಮಿಸಲ್ಪಟ್ಟಿದೆ. ಮುರೆ - ಡಾರ್ಲಿಂಗ್ ನದಿ ದಡ ಭೂಖಂಡದ ಫಲವತ್ತಾದ ಕೃಷಿ ವಲಯವಾಗಿದೆ.



ಚಿತ್ರ 7.17

## ಹವಾಗುಣ

ಆಸ್ಟ್ರೇಲಿಯಾದ ಹೆಚ್ಚಿನ ಭಾಗದ ಪ್ರದೇಶಗಳಲ್ಲಿಯೂ ಒಣ ಹವಾಗುಣ ಅನುಭವವಾಗುತ್ತದೆ. ಭೂಖಂಡದ ಒಳ ಪ್ರದೇಶಕ್ಕೆ ಹೋದಂತೆ ಒಣ ತೀವ್ರತೆ ಹೆಚ್ಚಾಗುತ್ತದೆ.

## ಸಸ್ಯ ಜೀವ ಜಾಲಗಳು

ಆಸ್ಟ್ರೇಲಿಯಾದ ಪ್ರತ್ಯೇಕ ಸ್ಥಾನವು ಸಸ್ಯ ಜೀವ ಜಾಲಗಳ ವಿಭಿನ್ನವಾದ ವಿಕಾಸಕ್ಕೆ ಕಾರಣವಾಗಿದೆ. ಇಲ್ಲಿರುವ ಜೀವಜಾಲಗಳಲ್ಲಿ ಹೆಚ್ಚಿನವು ಭೂಮಿಯ ಬೇರೆಲ್ಲಿಯೂ ಕಂಡುಬರುವುದಿಲ್ಲ. ಮಾರ್ಸಿಪ್ಪಿಯಲುಗಳು ಹಾಗು ಮೊಟ್ಟೆ ಇಡುವ ಸಸ್ತನಿಗಳು ಇದಕ್ಕೆ ಉದಾಹರಣೆಗಳಾಗಿವೆ.

### ಆಸ್ಟ್ರೇಲಿಯಾದ ಕೆಲವು ಸಸ್ಯ ಜೀವ ಜಾಲಗಳು

ಮಾರ್ಸಿಪ್ಪಿಯಲುಗಳು ಆಸ್ಟ್ರೇಲಿಯಾದಲ್ಲಿ ಕಂಡುಬರುವ ಪ್ರಧಾನ ಪ್ರಾಣಿ ವಿಭಾಗಗಳಾಗಿವೆ. ಉದರದ ಚೀಲಗಳಲ್ಲಿ ಮರಿಗಳನ್ನು ಇಟ್ಟುಕೊಂಡು ನಡೆಯುವ ಕಂಗಾರುಗಳು, ಕೋಆಲಗಳು(Koala) ಎಂಬಿವುಗಳು ಮಾರ್ಸಿಪ್ಪಿಗಳಿಗೆ ಉದಾಹರಣೆಗಳಾಗಿವೆ. ಇವುಗಳಲ್ಲದೆ ಮೊಟ್ಟೆ ಇಡುವ ಸಸ್ತನಿಗಳಾದ ಪ್ಲಾಟಿಪ್ಪಸ್ ಮತ್ತು ಎಕಿಡ್ನಾಗಳು ಆಸ್ಟ್ರೇಲಿಯಾದಲ್ಲಿ ಕಂಡುಬರುವ ಇತರ ಪ್ರಾಣಿಗಳಾಗಿವೆ. ಇಲ್ಲಿನ ಸಸ್ಯ ಜಾಲಗಳಲ್ಲಿ ಯುಕಾಲಿಪ್ಟಸ್ ಮರಗಳು ಹಾಗೂ ವಾಟ್ಟಿಲ್ ಎಂದು ಕರೆಯಲ್ಪಡುವ ಅಕೇಷಿಯವು ಒಳಗೊಂಡಿದೆ.



**ಪ್ಲಾಟಿಪ್ಪಸ್**



**ಎಕಿಡ್ನಾ**



**ಕೋಆಲ**



**ಯುಕಾಲಿಪ್ಟಸ್**



**ಅಕೇಷಿಯ**

## ಜನಜೀವನ

ಆಸ್ಟ್ರೇಲಿಯಾವು ಆಧುನಿಕ ನಗರಗಳ ಹಾಗೂ ಪ್ರಾಚೀನ ನಾಗರಿಕತೆಗಳ ನಾಡಾಗಿದೆ. ಇಲ್ಲಿನ ಸ್ಥಳೀಯ ಗೋತ್ರ ವಿಭಾಗದವರು ಬಹಳ ಹಳೆಯ ಸಂಸ್ಕೃತಿಯನ್ನು ಹೊಂದಿದ್ದಾರೆ. ಇಂದು ಆಸ್ಟ್ರೇಲಿಯಾ ಬಹು ಸಂಸ್ಕೃತಿಯ ಸಮಾಜಕ್ಕೆ ಉದಾಹರಣೆಯಾಗಿದೆ. ಸಿಡ್ನಿ, ಮೆಲ್ಬೋರ್ನ್, ಬ್ರಿಸ್ಬೇನ್ ಮೊದಲಾದ ನಗರಗಳು ಉನ್ನತ ಜೀವನಮಟ್ಟ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ



ಆಸ್ಟ್ರೇಲಿಯಾದ ಭೂ ಪ್ರಕೃತಿ ವೈಶಿಷ್ಟ್ಯಗಳಿಗೆ ಸಂಬಂಧಿಸಿದ ವರ್ಕ್ ಶೀಟ್ ಪೂರ್ತಿಗೊಳಿಸಿರಿ.

| | |
|---|---|
| ಮರುಭೂಮಿ | **ಗ್ರೇಟ್ ವಿಕ್ಟೋರಿಯ** |
| ಹವಳದ ಬಂಡೆಗಳಿಂದ ಕೂಡಿದ ಭೂ ಪ್ರದೇಶ | ................................. |
| ಫಲವತ್ತಾದ ನದಿ ದಡ | ................................. |
| ಪರ್ವತ ಶ್ರೇಣಿ | ................................. |

ಪ್ರಸಿದ್ಧವಾಗಿವೆ.

ಪ್ರತಿಯೊಂದು ಭೂಖಂಡವು ತನ್ನದೇ ಆದ ಭೌಗೋಳಿಕ ವೈಶಿಷ್ಟ್ಯತೆಗಳನ್ನು ಹೊಂದಿದೆ ಎಂದು ತಿಳಿಯಿತಲ್ಲವೇ?

ಯಾವುದಾದರೂ ಒಂದು ಭೂಖಂಡಕ್ಕೆ ಭೇಟಿ ನೀಡಲು ಅವಕಾಶ ಲಭಿಸಿದರೆ, ನೀವು ಯಾವ ಭೂಖಂಡವನ್ನು ಆಯ್ಕೆ ಮಾಡುವಿರಿ? ದಕ್ಷಿಣ ಅಮೇರಿಕದ ಮಳೆ ಕಾಡುಗಳಿಗೆ ಬೇಟಿ ನೀಡುವಿರಾ? ಏಷ್ಯಾದ ಪರ್ವತಗಳನ್ನು ವಶಪಡಿಸುತ್ತೀರಾ? ಅಥವಾ ಅಂಟಾರ್ಟಿಕದ ಅತಿ ಶೈತ್ಯವನ್ನು ಧೈರ್ಯದಿಂದ ಎದುರಿಸುತ್ತೀರಾ? ಅನ್ವೇಷಿಸಲು ಕಾಯುತ್ತಿರುವ ಇನ್ನಷ್ಟು ಅದ್ಭುತಗಳಿಂದ ನಮ್ಮ ಪ್ರಪಂಚವು ತುಂಬಿದೆ.

## ಮುಂದುವರಿದ ಚಟುವಟಿಕೆಗಳು

- ಕೊಟ್ಟಿರುವ ಮಾದರಿಯಲ್ಲಿ ಭೂಖಂಡಗಳ ವಿಶೇಷತೆಗಳನ್ನು ಒಳಗೊಂಡ ಐ.ಡಿ ಕಾರ್ಡ್ ತಯಾರಿಸಿರಿ.




**ಏಷ್ಯಾ**

- ಅತಿ ದೊಡ್ಡ ಭೂಖಂಡ.
- ಅತಿ ಎತ್ತರದ ಶಿಖರವಾದ ಎವರೆಸ್ಟ್ ನೆಲೆಸಿರುವ ಭೂಖಂಡ.
- ಅತಿ ಹೆಚ್ಚು ಜನಸಂಖ್ಯೆಯಿರುವ ಭೂಖಂಡ.
- ಅತಿ ಹೆಚ್ಚು ಭತ್ತ ಉತ್ಪಾದಿಸುವ ಭೂಖಂಡ.

- ವಿವಿಧ ಭೂಖಂಡಗಳ ಸಸ್ಯ ಜೀವ ಜಾಲಗಳ ಚಿತ್ರಗಳನ್ನು ಸಂಗ್ರಹಿಸಿ ಟಿಪ್ಪಣಿಯೊಂದಿಗೆ ಡಿಜಿಟಲ್ ಆಲ್ಬಂ ತಯಾರಿಸಿರಿ.
- ಕಮಾಂಡರ್ ಅಭಿಲಾಷ್ ಟೋಮಿಯ 'ಕಡಲು ಏಕಾಂಗಿಯಾಗಿ ಆಹ್ವಾನಿಸಿದಾಗ' ಎಂಬ ಪ್ರವಾಸ ಕಥನವನ್ನು ಓದಿ ಟಿಪ್ಪಣಿ ತಯಾರಿಸಿರಿ.
- ಗುಂಪುಗಳಾಗಿ ವಿಭಾಗವಾಗಿ ಪ್ರತಿಯೊಂದು ಭೂಖಂಡದ ಕುರಿತು ಕೊಟ್ಟಿರುವ ಸೂಚಕಗಳ ಆಧಾರದಲ್ಲಿ ಮಾಹಿತಿಗಳನ್ನು ಸಂಗ್ರಹಿಸಿ ಸೆಮಿನಾರ್ ತಯಾರಿಸಿ ಮಂಡಿಸಿರಿ.

- ಪ್ರಾಕೃತಿಕ ಮೇರೆಗಳು
- ಭೂಪ್ರಕೃತಿ ವಿಶೇಷಗಳು
- ಹವಾಗುಣ
- ಸಸ್ಯ ಪ್ರಾಣಿ ಜಾಲಗಳು
- ಜನಜೀವನ

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

**51 ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆ ಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000


online ***R.T.E Monitoring : www.nireekshana.org.in***